# ಅಪರಂಜಿ

ತಿಳಿನಗೆಯ ಕಾರಂಜಿ

ಮೇ 2026

## ಸಂಗ್ರಾಮ ವಿಶೇಷಾಂಕ




ಮನುಷ್ಯರೇ ಇಲ್ವಲ್ಲಾ ಅಂದ್ಯಾ, ಅಯ್ಯೋ ಅವ್ರೆಲ್ಲಾ ಮಿಲಿಯನ್ ವರ್ಷಗಳ
ಹಿಂದೇನೇ, ತಮ್ಮ ತಮ್ಮಲ್ಲೇ ಹೊಡೆದಾಡ್ಕೊಂಡು ನಿರ್ನಾಮ ಆಗ್ಹೋದ್ರಂತೆ !!

ಬಿಡಿ ಪ್ರತಿ: ರೂ. 10/–

NANKI
CONVENTION HALL

*Premium*

# WEDDING VENUE

Elevate your events at
Nanki Convention Hall.

A stylish and comfortable
venue perfect for Weddings,
Receptions, Conferences.










## Accessibility

- 1 km from Bus Stand
- 5 km from Airport
- 4 km from Railway Station

Airport Road
Hubli - Karnataka

+91 94482 83709

www.nankiconventionhall.com

# M P BIRLA INSTITUTE OF MANAGEMENT

*Associate Bharatiya Vidya Bhavan*

**APPROVED BY AICTE & AFFILIATED TO DR. MANMOHAN SINGH BENGALURU CITY UNIVERSITY**

**DUAL SPECIALISATIONS OF YOUR CHOICE**

Marketing/Finance/HRM/ Business Analytics

## TWO YEAR FULL TIME MBA DEGREE AT BENGALURU

# ADMISSION OPEN

**2026-2028**

A distinguished standalone B-School in Bengaluru situated in the heart of the city.





## WHY MBA at MPBIM ?

- Achieved a 98% pass rate over the past 25 years.
- Excellent placement opportunities and paid internships.
- Faculty with strong industry credentials and academic qualifications.
- Value-added courses designed for industry needs.
- Industry connect events through Business Leadership Forum.
- Industrial visits for practical experience insights.
- Collaboration with North Dakota State University, USA and Bhavan's Management Institution.
- State-of-the-art Computer laboratory.
- Power BI, Tableau, and R programming.

**AN INNOVATIVE MBA PROGRAM OFFERING INTENSIVE BUSINESS MANAGEMENT EDUCATION.**

**SHAPE YOUR FUTURE WITH AN MBA PROGRAM AT A LEADING MANAGEMENT INSTITUTION IN BANGALORE.**

### ADMISSION PROCESS

Eligibility: Any Graduate with 50% aggregate or above.
Admission through MAT/CAT/CMAT or any other recognised Aptitude Test.





**For Admission Contact:**
+91 99022 52842 / 99022 52981
www.mpbim.com
contact@mpbim.com

**M P Birla Institute of Management**
Associate Bharatiya Vidya Bhavan
43, Race Course Road, Bengaluru-560 001
Phone: 080-4277 2000

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457




Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

ಚಂದಾ ವಿವರ :

ಬಿಡಿ ಪ್ರತಿ : ರೂ. 10/-

ಹತ್ತು ವರ್ಷದ ಚಂದಾ: ರೂ. 1000/-

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣವನ್ನು ಆನ್‌ಲೈನ್ ಮೂಲಕ ಕಳುಹಿಸಿ. ಬ್ಯಾಂಕ್ ವಿವರಗಳನ್ನು ಕೆಳಗೆ ನೀಡಿದೆ. ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

## ಸಂಗ್ರಾಮ ವಿಶೇಷಾಂಕ

ಸಂಪುಟ 43

ಸಂಚಿಕೆ – 08

ಮೇ–2026

## ಈ ಸಂಚಿಕೆಯಲ್ಲಿ...


| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಅವಿಸ್ಮರಣೀಯ ನಗೆಗಾರರು – 10 | ಶಿವಕುಮಾರ್ | 4 |
| ಕೊರವಂಜಿ ಕಂಡ ಯುದ್ಧದ ದಿನಗಳು | | 9 |
| ಪಂಪಣ್ಣನ ಪಾಗಲಪನ್ | ಜಯಶ್ರೀ ದೇಶಪಾಂಡೆ | 12 |
| ಮಾಲ್ಗುಡಿ ವಿಶ್ವವಿದ್ಯಾಲಯ... | ಪಾಲಹಳ್ಳಿ ವಿಶ್ವನಾಥ್ | 14 |
| ಶಾಂತಿ–ವಿಶ್ರಾಂತಿ | ಉಲ್ಲಾಸ್ ರಾಯಸಂ | 17 |
| ತುಂತುರು | ದಂನಆ | 22 |
| ರಣನೀತಿ | ಗೀತಾ ಕುಂದಾಪುರ | 23 |
| ಈ ಯುದ್ದ ಯಾಕ್ ಮಾಡ್ತಾರೋ.... | ಸುಮಾವೀಣಾ | 26 |
| ತೆಂಗಿನ ಮರಕ್ಕೆ ಚೇಳು ಕುಟುಕಿದರೆ ! | ಚಿತ್ರಾ ರಾಮಚಂದ್ರನ್ | 28 |
| ನಾನ್ಯಾವೂರ ದಾಸಯ್ಯ ಅಲ್ವೇ...! | ವಿ.ವಿಜಯೇಂದ್ರ ರಾವ್ | 30 |
| ವಾರ್ ಅಂಡ್ ಪೀಸ್ ! ಪೀಸ್ !! | ಗಣೇಶ ಹೆಗ್ಗಡೆ | 31 |
| ಹೀಗೊಂದು ಯುದ್ಧ ಸಂವಾದ | ಶರಣಬಸವೇಶ್ವರ ಅಂಗಡಿ | 34 |
| ಸೋಮು ಮನೆ ಗ್ಯಾಸಾಯಣ | ಸುಕೇಶವ | 36 |
| ಚಿವುಟಿ, ತೂಗುವ ಶಾಂತಿದೂತ | ಜಿ.ವಿ. ಅರುಣ | 39 |


ವ್ಯಂಗ್ಯ ಚಿತ್ರಗಳು : ಹೊರಪುಟ : ಅಶೋಕ್ ಹೆಮ್ಮಿಗೆ

ಒಳಪುಟಗಳು : ರಾಂಕಿ ಬೆಳ್ಳೂರ್

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ.
ನಂ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್, ಇಂಡಸ್ಟ್ರಿಯಲ್ ಟೌನ್ ರಸ್ತೆ, ರಾಜಾಜಿನಗರ, ಬೆಂಗಳೂರು–560010*



## ಅಪರಂಜಿ ಕಿಡಿ

● ಪ್ರಕಾಶ್

ದೆಹಲಿ ವಿಧಾನ ಸಭೆ ಗೇಟ್ ಮುರಿದು ಒಳನುಗ್ಗಿದ ವ್ಯಕ್ತಿ.
– ದಿನ ಪತ್ರಿಕೆ

ಆತನ ದೇಶಪ್ರೇಮ ಉಕ್ಕಿ ಹರಿಯುತ್ತಿತ್ತೇನೋ ?!

* * *

ಸುರಂಗ ರಸ್ತೆ ; ಒಂಭತ್ತನೇ ತಾರೀಖಿಗೆ ಸಮಾಲೋಚನೆ.
–ಪತ್ರಿಕೆ

ಸಮಿತಿಯು ಬಹು "ಆಳ" ವಾಗಿ ಚರ್ಚೆ ಮಾಡಲಿ !!

* * *

ಅಮೆರಿಕಾ–ಇರಾಕ್ ಯುದ್ಧ : ಬೆಂಗಳೂರಿನ
ಆಟೋಗಳಿಗೂ ಬಿಸಿ ತಟ್ಟಿದೆ.
–ಸುದ್ದಿ

ಅದಕ್ಕೇ ಅಲ್ಲವೇ "ವಸುಧೈವ ಕುಟುಂಬಕಂ" ಅನ್ನೋದು !!

* * *

ಚಂದ್ರನತ್ತ ಹೊರಟ ಆರ್ಟೆಮಿಸ್ –226 ಲಕ್ಷ ಲೀಟರ್ ಇಂಧನ
– ನಾಸಾ ಸುದ್ದಿ

ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ !!

* * *

ಸಂಚಾರ ಅಯೋಮಯ, ವಾತಾವರಣ ಧೂಳುಮಯ !!
– ಪತ್ರಿಕೆ

ಆಹಾ ! ಶೀರ್ಷಿಕೆ ಅಂದರೆ ಹೀಗಿರಬೇಕು !!

* * *

ಜನಗಣತಿ : ಸ್ವಯಂಗಣತಿ ಏನು ಎತ್ತ ?!
– ಪತ್ರಿಕೆ

ಹೌದು ಸ್ವಾಮಿ , ಅದೇ ಅದರ ಉದ್ದೇಶ !!

* * *

ಸಂಜೀವಿನಿ ಆರೋಗ್ಯ ಯೋಜನೆ :
ಸಾರ್ವಜನಿಕ ಚಂದಾ ಸಂಗ್ರಹ 120 ಕೋಟಿ :
ಆಗಿರುವ ಚಿಕಿತ್ಸಾ ವೆಚ್ಚ : 35 ಕೋಟಿ.
– ಪತ್ರಿಕೆ

ಎಲ್ಲಾ ಅರ್ಥವಾಯಿತು ಬಿಡಿ !!!

* * *

✍ ಶಿವಕುಮಾರ್

# ನಮ್ಮ ನಿಮ್ಮಲ್ಲಿ

ಈ ಅಂಕಣ ಬರೆಯುವ ಸಮಯದಲ್ಲಿ ಇರಾನ್ ಅಮೆರಿಕಾ ನಡುವಣ ಸಮರ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ಪಾಕಿಸ್ಥಾನದಲ್ಲಿ ಎರಡೂ ರಾಷ್ಟ್ರಗಳ ಪ್ರತಿನಿಧಿಗಳು ಸಂಧಾನದ ಮಾತುಕತೆ ನಡೆಸಿದ್ದಾರೆ. ಎರಡು ವಾರಗಳ ಕದನ ವಿರಾಮಕ್ಕೆ ಎರಡೂ ಬಣಗಳು ಒಪ್ಪಿವೆಯೆಂತೆ. ಈ ಅವಧಿಯಲ್ಲಿ ಅಮೆರಿಕಾ ಬಾಂಬ್ ಮಾಡುವುದಿಲ್ಲ ಎಂದು ಭಾಷೆ ಕೊಟ್ಟಿದ್ದು, ಇರಾನ್ ಬಾಂಬ್ ಮಾಡಿಸಿಕೊಳ್ಳುವದಿಲ್ಲ ಎಂಬ ವಾಗ್ದಾನವನ್ನು ನೀಡಿದೆಯೆಂತೆ. ಇದು ಹೇಗಾದರೂ ಇರಲಿ, ಜಗತ್ತಿನಾದ್ಯಂತ ಇತರ ದೇಶಗಳಿಗೆ ಈ ಯುದ್ಧದಿಂದಾಗಿ ಆತಂಕ ಕಳವಳಗಳು, ದಿನ ನಿತ್ಯ ಬಳಕೆ ಸಾಮಗ್ರಿಗಳೆಲ್ಲದರ ಕೊರತೆ ಇವೆಲ್ಲಾ ಒದಗಿ ಬಂದಿವೆ. ಈ ಬಗ್ಗೆ ಆಲೋಚಿಸುತ್ತಿದ್ದಾಗ, ಕೊರವಂಜಿ ಹುಟ್ಟಿ ಬೆಳೆದದ್ದು ಯುದ್ಧಕಾಲದಲ್ಲಿ ಎಂಬ ಅಂಶ ನನಪಿಗೆ ಬಂತು. 1942ರಲ್ಲಿ ಎರಡನೇ ಮಹಾಯುದ್ಧ ಬಿರುಸಿನಿಂದ ನಡೆದಿದ್ದಾಗ ಆ ವರ್ಷದ ಮಾರ್ಚ್ ತಿಂಗಳಂದು ಕೊರವಂಜಿ ಜನ್ಮತಾಳಿದಳು. ಮೊದಲ ಸಂಚಿಕೆಯ ಸಂಪಾದಕೀಯದಲ್ಲಿ ರಾಶಿಯವರು ಹೀಗೆ ಬರೆಯುತ್ತಾರೆ. ".....ಸಕಲವೂ ತಗ್ಗಾದ ಸಂಗ್ರಾಮ ಕಾಲದಲ್ಲಿ ಮಾಸಪತ್ರಿಕೆಯು ಹೊರಬೀಳುವುದು ಕೆಚ್ಚಿನ ಕೆಲಸ. ಅಲ್ಲವೇ ಹುಚ್ಚರ ಕೆಲಸ. ಜನರೆಲ್ಲರೂ ಕಳವಳಪಡುತ್ತಿರುವಾಗ, ಕಷ್ಟಗಳನ್ನನುಭವಿಸುತ್ತಿರುವಾಗ ಹಾಸ್ಯದ ಅವಶ್ಯಕತೆ ಹೆಚ್ಚು. ಹಾಗಾಗಿ ಈಗ ಕೊರವಂಜಿ ಹೊರಟಿದೆ." ಆ ಅಭಾವದ ದಿನಗಳನ್ನು ಕೊರವಂಜಿ ಹೇಗೆ ನಿಭಾಯಿಸಿದಳು ಎಂಬುದನ್ನು ತಿಳಿಯಲು ಕೊರವಂಜಿಯ ಹಲವು ಹಳೆಯ ಸಂಚಿಕೆಗಳನ್ನು ತಿರುವಿ ಹಾಕಿದೆ. "ಕೊರವಂಜಿ ಕಂಡ ಯುದ್ಧದ ದಿನಗಳು" ಎಂಬ ಬರಹದಲ್ಲಿ, ಅಂದಿನ ದಿನಗಳ ಕೊರವಂಜಿಯ ಒಂದು ಪಕ್ಷಿನೋಟವನ್ನು ಈ ಸಂಚಿಕೆಯಲ್ಲಿ ಕಾಣಬಹುದು. ಅಂತರ ರಾಷ್ಟ್ರೀಯ ಮಾಧ್ಯಮಗಳಲ್ಲಿ, ಪ್ರಸ್ತುತ ಸಮರದ ಬಗ್ಗೆ ಹೇರಳವಾಗಿ ವ್ಯಂಗ್ಯ ಚಿತ್ರಗಳು ಹರಿದಾಡುತ್ತಿವೆ. ಇವುಗಳಲ್ಲಿ ಹಲವನ್ನು ಆರಿಸಿ ಈ ಸಂಚಿಕೆಯಲ್ಲಿ ಜೋಡಿಸಿದ್ದೇವೆ.

ಈ ಸಮರ ವಿಶೇಷಾಂಕದಲ್ಲಿ ನಮ್ಮ ಬರಹಗಾರರು ತಮ್ಮ ಸೃಜನಶೀಲತೆಯನ್ನು ಧಾರಾಳವಾಗಿ ಮೆರೆಸಿದ್ದಾರೆ. ನಿಧಾನವಾಗಿ ತಿರುವಿಹಾಕಿ. ನಿಮ್ಮ ಮುಖದಲ್ಲಿ ಒಂದು ಮೆಲುನಗೆ ಮೂಡುವಂತಾದರೆ, ನಮ್ಮೆಲ್ಲರ ಪರಿಶ್ರಮ ಸಾರ್ಥಕ.

ತ್ವರೆಯಿಂದ ಯುದ್ಧ ಮುಗಿದು ಜಗತ್ತಿನಲ್ಲಿ ಶಾಂತಿ ಸಮಾಧಾನಗಳು ಪುನಃ ನೆಲೆಸಲೆಂದು ಅಪರಂಜಿ ಭಗವಂತನಲ್ಲಿ ಬೇಡುತ್ತಾಳೆ. ■

**ಒಂದು ವಿನಮ್ರ ವಿನಂತಿ**

ಅನೇಕ ಚಂದಾದಾರರು ಅಪರಂಜಿಯ ಚಂದಾ ಹಣವನ್ನು ನೇರವಾಗಿ ನಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಿರುವುದಕ್ಕೆ ಅಪರಂಜಿ ಅವರೆಲ್ಲರಿಗೂ ಆಭಾರಿ. ಈ ನಿಟ್ಟಿನಲ್ಲಿ ನಿಮ್ಮಿಂದ ಒಂದು ಸಹಾಯ ಆಗಬೇಕಾಗಿದೆ. ತಾವು ಬ್ಯಾಂಕ್ ಖಾತೆಯ ಮೂಲಕ ಚಂದಾ ನವೀಕರಿಸುವಾಗ, ಬ್ಯಾಂಕ್ ವಹಿವಾಟಿನ ವಿವರ, ನಿಮ್ಮ ಚಂದಾ ಸಂಖ್ಯೆ, ಹೆಸರು ಮತ್ತು ಈಗಿನ ವಿಳಾಸ ಇವುಗಳನ್ನು ನಮಗೆ ಜಿಮೇಲ್ ಅಥವಾ ವಾಟ್ಸಪ್ ಮೂಲಕ ತಕ್ಷಣವೇ ಕಳಿಸಿ. ಇದರಿಂದ ರಸೀತಿ ಕಳಿಸುವ ಕಾರ್ಯ ಸುಗಮವಾಗುತ್ತದೆ. ನಿಮ್ಮ ಸಹಕಾರಕ್ಕೆ ಅಪರಂಜಿ ಆಭಾರಿ.

**ಸಂಪರ್ಕ ಸಂಖ್ಯೆ : 98452 64304**, Email : admin@beechi.in

ಅವಿಸ್ಮರಣೀಯ ನಗೆಗಾರರು–10

# ಎಸ್.ಎನ್.ಶಿವಸ್ವಾಮಿ

ಶಿವಕುಮಾರ್



ಕೊರವಂಜಿಯ ಪ್ರಾರಂಭದ ದಶಕದಲ್ಲಿ ಅಚ್ಚಾಗುತ್ತಿದ್ದ ಸರಣಿ ಲೇಖನಗಳಲ್ಲಿ ಒಂದು ಜನಪ್ರಿಯವಾದ ಲೇಖನ ಮಾಲೆಯೆಂದರೆ "ಪಾತಾಳದಲ್ಲಿ ಪಾಪಯ್ಯ. " ಇದರ ಲೇಖಕರು "ಪುಂಗನೂರು ಪಾಪಯ್ಯ" ಎಂಬ ಕಾವ್ಯನಾಮದಡಿ ಬರೆಯುತ್ತಿದ್ದ ಶ್ರೀಯುತ ಎಸ್.ಎನ್ ಶಿವಸ್ವಾಮಿ ಯವರು.

ಶಿವಸ್ವಾಮಿಯವರು, ಆಕಾಶವಾಣಿ ಹಾಗೂ ದೂರದರ್ಶನ ಕೇಂದ್ರಗಳಲ್ಲಿ ನಿರ್ದೇಶಕರಾಗಿದ್ದರು. ಅನೇಕ ರೇಡಿಯೋ ನಾಟಕಗಳು ಹಾಗೂ ನಗೆ ಲೇಖನಗಳ ಸಂಕಲನಗಳನ್ನು ಇವರು ರಚಿಸಿದ್ದಾರೆ. ಇವರು ಬರೆದ ಮೊದಲ ಹಾಸ್ಯ ಲೇಖನಗಳ ಸಂಕಲನ "ಲಕ್ಕವಳ್ಳಿಯಲ್ಲಿ ಲಾಲಿಪಪ್ಸ್" ಪುಸ್ತಕಕ್ಕೆ ರಾಶಿಯವರು ಮುನ್ನುಡಿಯನ್ನು ಬರೆದಿದ್ದರು. "ಇಷ್ಟು ಚೆನ್ನಾಗಿ ಹಾಸ್ಯ ಬರೀತೀಯಾ. ನಿನ್ನನ್ನ ಪ್ರಕಾಶಕರು ಇಷ್ಟು ದಿನ ಕಾಡಿಸದಿರೋದೇ ಹೆಚ್ಚು" ಎಂದು ರಾಶಿಯವರು ಶಿವಸ್ವಾಮಿಯವರನ್ನು ಹುರುದಿಂಬಿಸಿದ್ದರಂತೆ. ಶಿವಸ್ವಾಮಿಯವರ ಬಗ್ಗೆ ಮಾಹಿತಿ ಸಂಕಲನದಲ್ಲಿ ತೊಡಗಿಸಿಕೊಂಡಿದ್ದಾಗ ಆಶಾಶವಾಣಿಯ ಚಂದನ ಕಾರ್ಯಕ್ರಮಕ್ಕಾಗಿ ಜಯಪ್ರಕಾಶ್ ನಾಗತಿಹಳ್ಳಿಯವರು, ಶಿವಸ್ವಾಮಿಯವರೊಡನೆ ನಡೆಸಿದ ಸಂದರ್ಶನವೊಂದನ್ನು ನೋಡುವ ಅವಕಾಶ ದೊರಕಿತು.

"ಮಕ್ಕಳಾಟವು ಚಂದ ಮತ್ತೆ ಯೌವ್ವನ ಚಂದ ಮುಪ್ಪಿನಲಿ ಚಂದ ನರೆಗಡ್ಡ – ಎತ್ತ ನೋಡಿದರೂ ನಗು ಚಂದ" ಎಂಬ ಸುಂದರ ಸಾಲುಗಳಿಂದ ಪ್ರಾರಂಭವಾದ ಈ ಸಂದರ್ಶನದಿಂದ ಶಿವಸ್ವಾಮಿಯವರ ಕುರಿತು ಬಹು ಉಪಯುಕ್ತ ಮಾಹಿತಿಗಳು ದೊರಕಿದವು. "ಹೃದಯಾಂತರಾಳ" ಎಂಬ ನಾಟಕವನ್ನ ಶಿವಸ್ವಾಮಿಯವರು ರೇಡಿಯೋ ಮಾಧ್ಯಮಕ್ಕಾಗಿಯೇ ಬರೆದರು. ಇದು ಎಷ್ಟು ಜನಪ್ರಿಯವಾಯಿತೆಂದರೆ, ಭಾರತದ ಅನೇಕ ಭಾಷೆಗಳಿಗೆ ಇದು ತರ್ಜುಮೆಯಾಯಿತು. ಹತ್ತು ಹನ್ನೆರಡು ವರ್ಷಗಳ ನಂತರ "ಫ್ಯಾಂಟಾಸ್ಟಿಕ್ ವಾಯೇಜ್" ಎಂಬ ಹಾಲಿವುಡ್ ಸಿನಿಮಾ ದವರು ಈ ನಾಟಕವನ್ನೇ ಆಧರಿಸಿ ಒಂದು ಮೂವಿಯನ್ನು ತಯಾರಿಸಿದರಂತೆ. "ನೀನೇನಾದರೂ ಅಮೆರಿಕಾದಲ್ಲಿದ್ದಿದ್ದರೆ ಕಾಪಿರೈಟ್ಸ್ ಉಲ್ಲಂಘನೆಯ ನಿಯಮದಡಿ ಅವರನ್ನು ಮಿಲಿಯನ್ ಡಾಲರುಗಳಿಗೆ ದಾವೆ ಹೂಡಬಹುದಿತ್ತು" ಅಂತ ಅವರ ಗೆಳೆಯರೆಲ್ಲಾ ಪೇಚಾಡಿಕೊಂಡ ರಂತೆ. "ಅಮೆರಿಕಾದಲ್ಲಿದ್ದರೂ ನಾನೇನೂ ದಾವೆ ಹಾಕಲು ಹೋಗುತ್ತಿರಲಿಲ್ಲ. ನನಗೇನೂ ಹಣದ ಮೋಹ ಇಲ್ಲ. ನನ್ನ ಕೃತಿಯೊಂದು ಇಷ್ಟು ಖ್ಯಾತಿ ಪಡೆಯಿತಲ್ಲಾ ಎಂಬ ಸಂತೋಷವೇ ನನಗೆ ಸಾಕು" ಎನ್ನುತ್ತಾರೆ ಶಿವಸ್ವಾಮಿ.

ಶಿವಸ್ವಾಮಿಯವರು ಒಟ್ಟು ಹದಿನಾಲ್ಕು ಕೃತಿಗಳನ್ನು ರಚಿಸಿದ್ದಾರೆ. "ಜಾತ್ರೆಯಲ್ಲಿ ಜಾಗರಣೆ, ಮನೆಯೊಳಗೊಬ್ಬ ಮಿಲ್ಟ್ರಿ ಮಾಮ, ಹಾಸ್ಯಾವತಾರ, ಏನೇ ಬರಲಿ, ರಮ್ಮಿ ಇರಲಿ" ಇವಲ್ಲಾ ಶಿವಸ್ವಾಮಿಯವರ ಸೃಜನಶೀಲತೆಯ ದ್ಯೋತಕಗಳು. "ಹಾಸ್ಯಕ್ಕೂ , ಹಾಸ್ಯಪ್ರಜ್ಞೆಗೂ ಏನು ವ್ಯತ್ಯಾಸ ?"

ಎಂದು ಸಂದರ್ಶನಕಾರರು ಕೇಳಿದಾಗ, ಶಿವಸ್ವಾಮಿಯವರು ನೀಡಿದ ಉತ್ತರ

ಬಹು ಅರ್ಥಗರ್ಭಿತವಾಗಿದೆ. "ಹಾಸ್ಯಪ್ರಜ್ಞೆ ಕೇವಲ ಹಾಸ್ಯಕ್ಕೆ ಸೀಮಿತವಾಗಿರೋದಿಲ್ಲ. ಜೀವನವನ್ನು ಅವಲೋಕಿಸುವ ದೃಷ್ಟಿಕೋನ ಅದು. ಬಂದದ್ದೆಲ್ಲಾ ಬರಲಿ ಅಂತ ದೇವರ ಮೇಲೆ ಭಾರ ಹಾಕಿ, ಮಂದಹಾಸದಿಂದ ಜೀವನ ಜಾತ್ರೆಯನ್ನ ಇದುರಿಸೋದು ಹಾಸ್ಯಪ್ರಜ್ಞೆ, ಯು ಮೀನ್ ಯಾತ್ರೆ ಅನ್ನಬೇಡಿ. ಜೀವನದಲ್ಲಿ ಆಗುವ ಅಸಂಬದ್ಧವಾದ ಆಗುಹೋಗುಗಳನ್ನ ನೋಡಿದರೆ, ಇದೊಂದು ಜಾತ್ರೆ ಅನ್ನಿಸುಲ್ಲವೇನ್ರೀ ?"

ಕೊರವಂಜಿಗೆ ಶಿವಸ್ವಾಮಿಯವರು ಪಾತಾಳದಲ್ಲಿ ಪಾಪಯ್ಯ ಸರಣಿಯಲ್ಲಿ ಹದಿಮೂರು ಅಂಕಣಗಳನ್ನು ಬರೆದರು. ಮೊದಲ ಮೂರು ಅಂಕಣ ಗಳನ್ನು ರಾಶಿಯವರು ಪ್ರಕಟಿಸಿದ್ದಾದ ಮೇಲೆ, "ಇನ್ನೂ ಎಷ್ಟು ಅಂಕಣಗಳನ್ನು ಬರೀಲಿ ಸಾರ್ ?' ಅಂತ ಶಿವಸ್ವಾಮಿಯವರು ರಾಶಿಯವರನ್ನ ಕೇಳಿದಾಗ, ಅವರು ಎಷ್ಟು ಬೇಕಾದರೂ ಬರಿ. ಅಂತ ಆಶ್ವಾಸನೆ ಕೊಟ್ಟರಂತೆ. ಶಿವಸ್ವಾಮಿಯವರ ಹಾಸ್ಯ ಶೈಲಿಯನ್ನು ಇಂದಿನ ಓದುಗರಿಗೆ ಪರಿಚಯಿಸುವ ಸಲುವಾಗಿ, ಈ ಸರಣಿಯಲ್ಲಿ ಪ್ರಕಟವಾದ , "ಪಬ್ಲಿಕ್ ಪಾರ್ಕಿನಲ್ಲಿ ಪಾಪಯ್ಯನ ಅನುಭವ "ಎಂಬ ಪ್ರಕರಣವನ್ನು ಇಲ್ಲಿ ಸಂಗ್ರಹವಾಗಿ ನೀಡಿರುವೆ.

ಪಾತಾಳದ ಪಬ್ಲಿಕ್ ಪಾರ್ಕಿನ ನಟ್ಟನಡುವೆ ಒಂದು ದೊಂಬರಾಟದ ಕಾರ್ಯಕ್ರಮ ಬಹಳ ಭರಾಟೆಯಿಂದ ಸಾಗಿತ್ತು. ಆಟದ ಹುಮ್ಮಸ್ಸಿನಲ್ಲಿ, ಮೈ ಮರೆತಿದ್ದ ದೊಂಬರ ತಮಟೆ ನಗಾರಿಗಳ ವಾದ್ಯ ಸಮ್ಮೇಳನದೊಂದಿಗೆ ಪ್ರೇಕ್ಷಕರ ಉತ್ಸಾಹ ಕೋಲಾಹಲಗಳೂ ಮಿಶ್ರಿತವಾಗಿ ಪಾರ್ಕಿನ ಸುತ್ತ ಮುತ್ತ ಒಂದು ಮೈಲಿ ಸುತ್ತಳತೆಯ ಸರಹದ್ದಿನಲ್ಲಿದ್ದ ಎಲ್ಲರನ್ನೂ ಆ ಕಡೆ ಆಕರ್ಷಿಸುತ್ತಿದ್ದವು. ನನಗೂ ಸಾಕಷ್ಟು ಆರಾಮವಿದ್ದುದರಿಂದ ಆ ಕಡೆ ಪಾದ ಬೆಳೆಸಿದೆ. ದೊಂಬರವನೊಬ್ಬ ಐವತ್ತಡಿ ಎತ್ತರದ ಒಂದು ಬೊಂಬಿನ ಕಂಬವನ್ನು ತಲೆಕೆಳಗಾಗಿ ಕೈಗಳ ಸಹಾಯವಿಲ್ಲದೆ ಏರುತ್ತಿದ್ದ ಸಾಹಸವನ್ನು ಸುತ್ತಲೂ ನೆರೆದಿದ್ದ ಜನಸಂದಣಿಯ ಆಚೆಯೇ ನಿಂತು, ಕುತ್ತಿಗೆಗೆ ಕೈ ಕೊಟ್ಟು ತಲೆಯೆತ್ತಿ ನೋಡುತ್ತಿದ್ದೆ. ಅವನು ತುದಿಗೇರಿ ಆಕಾಶಕ್ಕೆ ಕಾಲು ತೋರಿಸಿ ಕಂಬದ ಮೇಲೆ ತಲೆಕೆಳಗಾಗಿ ನಿಲ್ಲುವ ವೇಳೆಗೆ ನೋಡುತ್ತಿದ್ದವರೆಲ್ಲಾ ಬೆವರು ಕಿತ್ತುಕೊಂಡು ಕೈಕೈ ಹಿಸುಕುತ್ತಾ, ತುದಿಗಾಲುಗಳ ಮೇಲೆ ನಿಂತಿದ್ದರು. ಆಗ ಬೆನ್ನಿನ ಮೇಲೆ ಬಲವಾಗಿ ಯಾರೋ ತಟ್ಟಿ, ನನ್ನ ಭಂಗಿಯ ಭಂಗ ಮಾಡಿ, ನನ್ನನ್ನು ಎಚ್ಚರ ಮಾಡಿದರು. ಕತ್ತು ನೀವಿ ಸುತ್ತ ತಿರುಗಿನೋಡಿದೆ. ನನ್ನ ಹಳೇ ಸ್ನೇಹಿತ, ಮಾರ್ಗದರ್ಶಿ ಪಕ್ಕದಲ್ಲಿ ಬಂದು ನಿಂತಿದ್ದ. ಅವನ ಹಿಂದೆ ಖಾಕಿಚಡ್ಡಿ ಧಾರಿಯಾದ ಇಪ್ಪತ್ತು ವರ್ಷದ ಹುಡುಗನೊಬ್ಬ ಇದ್ದ.

"ಏನು, ಬಹಳ 'ಇದಾ' ಗಿ ನೋಡ್ತಿದ್ದಾಗಿತ್ತಲ್ಲ."

"ಹೊತ್ತು ಹೋಗೋಕ್ಕೆ ಬೇಕಲ್ಲ ಏನಾದರೂ" ಅಂದೆ ಲೋಕಾಭಿರಾಮವಾಗಿ.

ಆತ ಇದ್ದಕ್ಕಿದ್ದಹಾಗೆಯೇ ಗೊಳ್ಳೆಂದು ನಕ್ಕು, "ಸರಿಯೇ, ಹೊತ್ತು ಹೋಗೋದರ ಜತೇಲಿ ಸೊತ್ತು ಹೋಗೋದನ್ನ ಗಮನಿಸಬೇಡವೇ !" ಅಂದು

ತನ್ನ ಪ್ರಾಸದ ಚಮತ್ಕಾರಕ್ಕೆ ಇನ್ನೂ ಜೋರಾಗಿ ನಕ್ಕ.

ಅವನ ನಗು ಅಡಗಿದ ಮೇಲೆ, "ಅರ್ಥವಾಗಲಿಲ್ಲ" ಅಂದೆ.

ಆತ ಅಲ್ಲೇ ಇದ್ದ ಒಂದು ಬೆಂಚಿನ ಮೇಲೆ ಕೂತು ಒಂದು ಪಕ್ಕದಲ್ಲಿ ನನಗೂ, ಇನ್ನೊಂದು ಪಕ್ಕದಲ್ಲಿ ಆ ಖಾಕಿ ಚಡ್ಡಿಯವನಿಗೂ ಜಾಗಮಾಡಿದ.

ದೊಂಬರವನು ಕೆಳಗಿಳಿದು ಕೈಗೆ ಹುಂಡಿ ತೆಗೆದುಕೊಂಡಿದ್ದ. ಜನರೆಲ್ಲ ಇದ್ದಕ್ಕಿದ್ದ

ಹಾಗೆಯೇ ತಮ್ಮ ತಮ್ಮ ಕೆಲಸವನ್ನು ಜ್ಞಾಪಿಸಿಕೊಂಡವರಂತೆ ಬಂದ ದಾರಿ ಹಿಡಿಯುತ್ತಿದ್ದರು. ಅವಸರವಾಗಿ.

ನನ್ನ ಸ್ನೇಹಿತ ಉದ್ದನೆಯ ಹುಡುಗನ ಕಡೆ ತಿರುಗಿ, "ಎಲ್ಲೋ ಇವರ ಪರ್ಸು" ಅಂದ.

ಹುಡುಗ ಮಾತನಾಡದೆ ತುಂಟನಗೆ ನಗ್ತಾ, ತನ್ನ ಚೆಡ್ಡಿ ಜೇಬಿನಿಂದ ನನ್ನ ಹಸಿರುಬಣ್ಣದ ಮನಿಪರ್ಸನ್ನ ಅಷ್ಟೇ ಅಗಲದ ಒಂದು ಸಿಲ್ಕು ಬಟ್ಟೆಚೂರಿನ ಸಮೇತ ನನಗೊಪ್ಪಿಸಿದ. ಪೆಚ್ಚು ಪೆಚ್ಚಾಗಿ ನಾನು ಒಳಜೇಬಿದ್ದ ಕಡೆಗೆ ಕೈಹಾಕಿ ನೋಡಿಕೊಂಡಾಗ ಹುಡುಗ ಕೊಟ್ಟ ಸಿಲ್ಕು ಚೂರೇ ಆ ಜೇಬು ಅನ್ನುವುದು ನನಗೆ ತಿಳಿಯಿತು.

ನನ್ನ ಸ್ನೇಹಿತ ನಗು ನಿಲ್ಲಿಸಿ ಸ್ವಲ್ಪ ಗಂಭೀರವಾಗಿ, " ಹೇಗಿದೆ ಸಾರ್, ದೊಂಬರಾಟದ ಸ್ವಾರಸ್ಯ ?" ಅಂದ.

"ಪರವಾಗಿಲ್ಲ" ಅಂದೆ ಮಂಕು ಮಂಕಾಗಿ ನೋಡುತ್ತ.

"ನೋಡಿ ನಿಮಗೆ ಜೇಬು ಹಾರಿಸುವವರ ವೃತ್ತಿಯ ಪರಿಚಯ ಮಾಡಿಸೋಣ ಅಂತ ಹುಡುಗನಿಗೆ ಹೇಳಿದೆ. ಅವನು ಸೀರಿಯಸ್ಸಾಗಿ ನಿಮ್ಮ ಜೇಬನ್ನೇ ಕತ್ತರಿಸಿಬಿಟ್ಟ ಅನ್ಯಾಯ !"

"ಹೋಗಲಿ ಬಿಡಿ. ತೇಪೆ ಹಾಕಿಸಿದರಾಯ್ತು. ಅಂತೂ ಈ ಹುಡುಗ ಒಳ್ಳೇ ತರಪೇತಾದವನು ಅಂತ ಕಾಣುತ್ತೆ."

"ಇವನು ಇನ್ನೂ ಪೂರ್ತಿ ಕಲಿತಿಲ್ಲ ಅನ್ನುವುದಕ್ಕೆ ನಿದರ್ಶನ ಏನು ಗೊತ್ತೇ ?"

"ಇಲ್ಲ"

"ನಿಮ್ಮ ಕೈಲಿರೋ ಸಿಲ್ಕ್ ಚೂರೇ ನಿದರ್ಶನ. ಈಗ ಒಬ್ಬ ಪ್ರವೀಣನಾದ ಜೇಬು ಹಾರಿಸುವವ ನಿಮ್ಮ ಜೇಬು ಕತ್ತರಿಸಿದರೆ ಅವನು ಹೀಗೆ ನಿಮ್ಮ ಜೇಬು ಜೇಬನ್ನೇ ಅನ್ಯಾಯವಾಗಿ ಹಾಳುಮಾಡುವುದಿಲ್ಲ. ನಿಮ್ಮ ಜೇಬಿನ ಅಡಿಯಲ್ಲಿ ಮಾತ್ರ ಒಂದು ಕಿಂಡಿ ಮಾಡಿರುತ್ತಾನೆ ಅಷ್ಟೇ. ತಿರುಗಿ ಹೊಲಿಸಬೇಕಾದರೆ ಎಷ್ಟು ಶ್ರಮ ನೋಡಿ ಪಾಪ ನಿಮಗೆ !"

"ನ್ಯಾಯ" ಎಂದೆ, ನನ್ನ ಶ್ರಮ ನೆನೆಸಿಕೊಂಡು.

ಜೇಬು ಹಾರಿಸುವವರ ವೃತ್ತಿಯ ವಿಚಾರವಾಗಿ ಇನ್ನಷ್ಟು ವಿವರಗಳನ್ನು ತಿಳಿಯುವ ಕುತೂಹಲವಾಯ್ತು.

"ಸರಿಯೇ, ಇಷ್ಟು ನೀಟಾಗಿ ಕತ್ತರಿಸೋದಕ್ಕೆ ಕತ್ತಿ ಎಷ್ಟು ಹರಿತವಾಗಿರಬೇಕು ಅಂತ ಯೋಚಿಸಿದೆ." ಅಂದೆ.

ಖಾಕಿ ಚಡ್ಡಿ ಹುಡುಗ ಮೊದಲು ಮಾತನಾಡಿದ.

"ಕತ್ತಿಯ ಹರಿತಕ್ಕಿಂತ ಕತ್ತರಿಸುವವನ ಕೈ ಚಳಕ ಮುಖ್ಯ ಸ್ವಾಮಿ. ನೋಡಿ, ನಾನು ಕತ್ತರಿಸಿದ್ದು ಈ ಬ್ಲೇಡಿನಿಂದ. ಅದು ಏಳನೆಯ ಜೇಬು ಈ ಬ್ಲೇಡಿಗೆ. ಸ್ವಲ್ಪ ಅಭ್ಯಾಸವಾದ ಮೇಲೆ ರೇಜರ್ ತೆಗೆದುಕೊಳ್ಳುತ್ತೇವೆ ಕೈಗೆ. ಕತ್ತರಿ ಇದ್ದರೆ ಕೆಲಸ ಸುಲಭ. ಆದರೆ ಮಾತ್ರ ಎರಡು ಕೈಗಳನ್ನೂ ಉಪಯೋಗಿಸಬೇಕಾಗುತ್ತೆ, ಕತ್ತರಿ ಬಾಬ್ತಿನಲ್ಲಿ. ಬ್ಲೇಡಿನಲ್ಲಿ ಒಂದು ಅನುಕೂಲ"

"ಅದೇನು ಅಂಥ ಅನುಕೂಲ ?"

"ಹೇಳ್ತೀನಿ. ಒಂದ್ಸಲ ಹೀಗೇ ದೊಡ್ಡಪೇಟೆ ಚೌಕದಲ್ಲಿ ಒಂದು ಜೇಬು ಹಾರಿಸಿದ್ದೆ. ನಂಬರುದಾರ, ಒಬ್ಬ ಶನಿ, ಗುಮಾನಿ ಮಾಡಿದ ನನ್ನ ಮೇಲೆ. ಚಡ್ಡಿ ಜೇಬಿನಲ್ಲಿ ಪರ್ಸು ಬ್ಲೇಡು ಬಲಗೈ ಸಮೇತ ಅವನ ಹಿಂದೆ ಮೆರವಣಿಗೇಲಿ ಹೋದೆ ದೇವರ ಮನೆಗೆ. "

"ದೇವರ ಮನೆ ?"

"ಅಂದರೆ ಪೋಲೀಸ್ ಸ್ಟೇಷನ್"

"ಆಯ್ತು, ಆದರೆ ದೇವರ ಮನೆಯಲ್ಲೇ ಮೆಟ್ಲು ಹತ್ತೋವಾಗ ಮೆಲ್ಲಗೆ ನನ್ನ ಚಡ್ಡಿ ಜೇಬನ್ನ ಒಳಗಿನಿಂದಲೇ ಗೀರಿ, ಬ್ಲೇಡು ಪರ್ಸು ಎರಡನ್ನೂ ಚರಂಡೀಲಿ ಬೀಳಿಸಿದೆ. ಆಯ್ತಲ್ಲ. ಸಾಕ್ಷಿ ಇದ್ದರೆ ತಾನೆ ಶಿಕ್ಷೆ. ! ಅಂತೂ ರಾತ್ರಿ ಆ ಕಡೆ ಮೆಲ್ಲಗೆ ಠಳಾಯಿಸಿ ಪರ್ಸನ್ನ ಚರಂಡಿ ಒಳಗಿಂದ ಎತ್ತಿದೆ. ಬಿಡಲಿಲ್ಲ. ......ಬ್ಲೇಡಿನ ಉಪಯೋಗ ಅರ್ನ್ನೋದಕ್ಕೆ ಹೇಳಿದೆ. "

"ಪರವಾಗಿಲ್ಲ, ಒಳ್ಳೇ ಸ್ವಾರಸ್ಯವಾದ ವೃತ್ತಿ ನಿಮ್ಮದು ಅನ್ನಬೇಕು. ಆದರೆ ಈ ಕೆಲಸವನ್ನ ಯಾರ ಹಂಗೂ ಇಲ್ಲದೇ ಸ್ವತಃ ಕಲಿಯೋದಕ್ಕೆ ಆಗುವುದಿಲ್ಲವೇನು ?" ಅಂತ ಕೇಳಿದೆ.

ನನ್ನ ಸ್ನೇಹಿತ ವಿವರಿಸಿದ.

"ಹಾಗೆ ಕಲಿತವರೂ ಇದ್ದಾರೆ ಕೆಲವು ಅತಿಥಿಗಳು"

"ಅತಿಥಿಗಳು ಅಂದ್ರೆ ?"

"ಕೆ.ಡಿ. ಗಳನ್ನ ಈ ಕಡೆ 'ಅತಿಥಿಗಳು ' ಅಂತ ಕರೆಯೋ ಸಂಪ್ರದಾಯ. ಅವರು ಇಂಥ ಯಾವುದಾದಕೂ ವೃತ್ತಿಯನ್ನು ಸ್ವತಃ ಅವಲಂಬಿಸುವ ಪ್ರಯತ್ನ ಮಾಡಿಯೇ , ಆವಾಗ್ಲೇ ನಂಬರುದಾರರ ಬಳಗವಾಗೋದು. ಅದಕ್ಕೆ ಬದಲು, ಈ ಹುಡುಗನ ಹಾಗೆ........ಇವನ ಹೆಸರು ಗೋಡಂಬಿ ಅಂತ........... ಮರ್ಯಾದೆಯಾಗಿ ಯಾವುದಾದರೂ ಹೆಸರುವಾಸಿಯಾದ ಗುಂಪಿಗೆ ದಾಖಲಾಗುವುದೇ ಕ್ಷೇಮ.

"ಜೇಬು ಹಾರಿಸುವವರು ಗುಂಪುಗಟ್ಲೆ ಓಡಾಡುತ್ತಾರೇನು ?"

"ಹೌದು. ಅಷ್ಟೇ ಅಲ್ಲ. ಈ ಗುಂಪುಗಳು ಹೀಗೇ ಯಾವುದಾದರೂ ದೊಂಬರ ಅಥವಾ ಹಾವಾಡಿಗರ  ಇಲ್ಲವೇ ಮಂತ್ರತಂತ್ರಗಾರರ ಜತೆಯಲ್ಲೇ ಸಂಚರಿಸುತ್ತಿರುತ್ತವೆ."

ತಟ್ಟನೆ ನನಗೊಂದು ಯೋಚನೆ ಹೊಳೆಯಿತು. ಕೈ ಚಿಟಿಗೆ ಹೊಡೆದು ಮಾರ್ಗದರ್ಶಿಯನ್ನ ಕೇಳಿದೆ.

"ಹಾಗಾದರೆ, ಈ ಜೇಬು ಹಾರಿಸುವವರ ಅನುಕೂಲಕ್ಕಾಗಿಯೇ ದೊಂಬರು ಸಾಮಾನ್ಯವಾಗಿ ಎತ್ತರದ ಕಂಬಗಳ ಮೇಲೆಯೇ ತಮ್ಮ ಚಾತುರ್ಯವನ್ನ ತೋರಿಸೋದು ಅನ್ನಬಹುದೇ ?"

ಅವರುಬ್ಬರೂ ನನ್ನ ಸೂಕ್ಷ್ಮ ಬುದ್ಧಿಯನ್ನು ಮೆಚ್ಚಿದರು. ಆ ಹುಡುಗ ತಿರುಗಿ ಮಾತನಾಡಿದ.

"ಕಂಬದ ತುದಿಯನ್ನ ನೀವು ಕತ್ತೆತ್ತಿ ನೋಡಿದಾಗಲೇ ನಾನು ನಿಮ್ಮ ಜೇಬನ್ನ ಕತ್ತರಿಸಿದ್ದು. ಅದೇ ಸಮಯಕ್ಕೆ ಇದೇ ಜಾಗದಲ್ಲಿ ನಮ್ಮ ಗುಂಪಿನವರ ಕೈಗೆ ಕಡಿಮೆ

ಎಂದರೆ ಒಂದು ಡಜನ್ ಪರ್ಸು, ಒಂದು ಡಜನ್ ಪೆನ್ನು ಹತ್ತು ಕನ್ನಡಕ, ಅರ್ಧ ಡಜನ್ ವಾಚುಗಳು ಸೇರಿರುತ್ತವೆ. "

"ಒಂದೇ ವ್ಯತ್ಯಾಸ, ನಿಮ್ಮ ಸಾಮಾನು ನಿಮಗೆ ವಾಪಸು ಬಂತು. ಮಿಕ್ಕವರದ್ದು ಮಂಗಮಾಯ ಆಯ್ತು ಅಷ್ಟೇ ! ಎಂದು ಸೇರಿಸಿ ನನ್ನ ಸ್ನೇಹಿತ ಮತ್ತೆ ನಗುವಿನ ಪ್ರವಾಹದಲ್ಲಿ ಮುಳುಗಿದ. ಗೋಡಂಬಿ ಅವನ ಕಡೆ ಲಕ್ಷ್ಯ ಮಾಡದೇ ಮುಂದುವರಿಸಿದ.

"ಹೋದ ಶನಿವಾರ ನಾವು ಒಬ್ಬ ಹಾವಾಡಿಗರ ಪಾರ್ಟಿ ಜತೇಲಿ ಕ್ಯಾಂಪು ಹೋಗಿದ್ದೆವು ಸಾರ್. ಪಾರ್ಟೀಲಿ ಇದ್ದ ಒಬ್ಬ ಚಿಕ್ಕ ಹುಡುಗನಿಗೆ ಒಂದು ಹಾವಿನ ಬುಟ್ಟಿ ಕೊಟ್ಟಿದ್ದೆವು.  ಹಲ್ಲುದುರಿಸಿದ ಹಾವೇ ಅನ್ನಿ. ಜನ ಜಾಸ್ತಿಯಾಗಿದ್ದ ಸಮಯದಲ್ಲಿ ಅವನು ಗುಂಪಿನ ನಡುವೆ ಬೇಕಂತ ಬುಟ್ಟಿ ಸಮೇತ ಎಡವಿ ಬಿದ್ದು ರಂಪ ಎಬ್ಬಿಸಬೇಕು ಅಂತ ಏರ್ಪಾಡು. ಹುಡುಗ ಎಬ್ಬಿಸಿದ ರಂಪ ರಗಳೇಲಿ ನಾವು ಹದಿನೇಳು ಪರ್ಸು, ಒಂಭತ್ತು ಪೆನ್ನು, ಮೂರು ವಾಚು (ಒಂದು ಬಂಗಾರದ್ದು) ಇನ್ನೂ ಚಿಲ್ರೆ ಸಾಮಾನುಗಳು ಎಲ್ಲಾ ಹಾರಿಸಿದೆವು.

"ಪರವಾಗಿಲ್ಲ" ಅಂದೆ.

"ಇನ್ನೂ ಕೇಳಿ ಸ್ವಾರಸ್ಯ." ಅಂದು ಸೇರಿಸಿದ ನನ್ನ ಸ್ನೇಹಿತ. ನಗುತ್ತಲೇ ಗೋಡಂಬಿ ಹೇಳಿದ.

"ಸ್ವಾರಸ್ಯ ಇಷ್ಟೇ ಅವತ್ತಿಂದು. ನಾವು ಹಾರಿಸಿದ ಬಂಗಾರದ ವಾಚು, ಎರಡು ಪೆನ್ನುಗಳು ನಂಬರುವಾಲಾಗಳದ್ದು, ಅಂದ್ರೆ ಪೋಲೀಸಿನವರದ್ದು ಖುದ್ದು"

ಈ ಸಲ ಅವರಿಬ್ಬರೂ ಸೇರಿ ಆನಂದದಿಂದ ನಲಿದರು. ನಾನು ಅವರನ್ನು ಹಾಗೇ ಬಿಟ್ಟು ನನ್ನ ಪರ್ಸನ್ನೂ ಸಿಲ್ಕು ಚೂರನ್ನೂ  ಸರಿಯಾಗಿದ್ದ ಬೇರೇ ಜೇಬಿಗೆ ಸೇರಿಸಿ ನನ್ನ ದಾರಿ ಹಿಡಿದೆ.

ದುಡ್ಡು ವಸೂಲು ಮಾಡುತ್ತಿದ್ದ ದೊಂಬ ನನ್ನ ಮುಖ ನೋಡಿ ಉತ್ತೇಜನ ಹೊಂದಿ ಅವಸವಸರವಾಗಿ ನನ್ನ ಕಡೆ ಬಂದು ಹುಂಡಿಯನ್ನು ನನ್ನ ಮೂತಿಗೆ ಚಾಚಿದ.

■

## ನಮ್ಮದೋ...ಅಥವಾ ಚೈನಿಸ್ ದೋ..?

ಪುಟ್ಟಣ್ಣಂಗೆ ಒಂದು ಸಂಶಯ ಬಂದು ಟೀಚರ್ ಹತ್ತಿರ ಕೇಳಿದನು – ಸಾರ್, ಇಡ್ಲಿಯು ದಕ್ಷಿಣ ಭಾರತದ ತಿಂಡಿನೋ ಅಥವಾ ಚೈನೀಸ್ ತಿಂಡಿನೋ ?

ಆಗ ಟೀಚರ್ – ನಿಂಗ್ಯಾಕೊ ಈಗ ಸಂಶಯ ಬಂತು ಎಂದು ವಿಚಾರಿಸಿದಾಗ, ಪುಟ್ಟಣ್ಣ ಹೇಳಿದ – ಇಡ್ಲಿ ಪದ ಕೇಳೋದಕ್ಕೆ ಬ್ರೂಸ್ ಲಿ, ಜೆಟ್ ಲಿ, ತರಹಾನೇ ಇದ್ಯಲ್ಲಾ, ಅದಕ್ಕೆ ಕೇಳಿದೆ ಎಂದಾಗ, ಟೀಚರ್ ಯೋಚಿಸಲು ಶುರುಮಾಡಿದರು....!

**–ವಿ.ವಿಜಯೇಂದ್ರ ರಾವ್**

## ಕೊರವಂಜಿ ಕಂಡ ಯುದ್ಧದ ದಿನಗಳು

[ಜನವರಿ 1943 ರಲ್ಲಿ ಎರಡನೇ ಮಹಾಯುದ್ಧದ ಅಭಾವಗಳ ಕಾಲ. ಅಂದಿನ ಕೊರವಂಜಿ ಸಂಚಿಕೆಯಲ್ಲಿ ಅದಕ್ಕೂ ಹಿಂದಿನ ಸುಭಿಕ್ಷದ ದಿನಗಳ ಹಗಲುಗನಸನ್ನು ನಗೆಗಾರ ಬೆ.ಚಂ. ಕಂಡಂತೆ.]

**"ಹಿಂದಿನ ಕಾಲದ ಹೊನ್ನ ಮಾತುಗಳು"**

"ಮನೆಗೆ ಕಾರ್ ಕಳಿಸ್ತೀನಿ. ಎಲ್ಲರೂ ಬನ್ನಿ."

"ಶಂಕರಪ್ಪಂಗೆ ಇನ್ನೊಂದಿಷ್ಟು ಖೀರು ಹಾಕಯ್ಯಾ"

"ಬಟ್ಟೆ ನೋಡೋಣ ಬಾರೋ, ಒಂದು ಸೂಟು ಹೊಲಿಸಬೇಕು ಹಬ್ಬಕ್ಕೆ."

"ಕೊನೇ ಕಂಪಾರ್ಟ್‌ಮೆಂಟಿನಲ್ಲಿ ಬೇಕಾದ ಹಾಗೆ ಜಾಗ ಇದೇರೀ"

"ನಾಲ್ಕೇ ವೀಸೆ ಸಕ್ಕರೆ ಸಾಕೇ ರಾಯರೇ"

"ಪರವಾಗಿಲ್ಲ, ನೀನೇ ಇಟ್ಟುಕೊಳ್ಳೋ ಕಡ್ಡೀ ಪೆಟ್ಟಿಗೇನ."

"ಟಿಷ್ಯೂ ಸೀರೆ ಹೊಸ ರಖಂ ತೋರಿಸೋ ಅಮ್ಮಾವ್ರಿಗೆ"

"ಒಲೆ ಬೇಗ ಹತ್ತದೇ ಇದ್ರೆ ಸ್ವಲ್ಪ ಸೀಮೆಯೆಣ್ಣೆ ಹಾಕಬಾರ್ದೇ"

"ಕ್ರಿಸ್‌ಮಸ್ ಹಬ್ಬಕ್ಕೆ ಬೊಂಬಾಯಿಗೆ ಹೋಗೋಣ ಬರ್ತೀಯಾ"

"ಅಂಗಡಿ ದೂರ, ಕಾರು ತೆಗೆದುಕೊಂಡು ಹೋಗಿ."

**"ನವೀನ ಸಂಗ್ರಾಮ ಗಾದೆಗಳು"**

ಸಾವಿರ ಕುದುರೆ ಸರದಾರನಾದರೆ,
ಅಷ್ಟು ಬೇಗ ಹಿಂದೋಡಲಾಗುವುದೇ ?

* * *

ಇಳಿದ ಮೇಲೆ ಯುದ್ಧಕ್ಕೆ
ಛಳಿಯಾದರೇನು, ಗಾಳಿಯಾದರೇನು ?

* * *

ಸೈನ್ಯಕ್ಕೆ ಸೇರಿದಾಕ್ಷಣವೇ
ಬಿಳಿ ಕುದುರೆ ಸವಾರಿ ಮಾಡಬೇಕೆಂದರೆ ಹೇಗೆ ?

* * *

ಯಾಕೋ ಸಿಪಾಯಿ, ತಾರಾಟ ಅಂತ ಕೇಳಿದರೆ
ಮೇಜರ್ ಮನೇಲಿ ಕುಡಿದಾಟ ಅಂದನಂತೆ !

* * *

ಸಾಯೋ ಮುದಕನ್ನ ಸಾರ್ಜೆಂಟ್ ಮಾಡಿದರಂತೆ !

* * *

ಕೆಮ್ಮಿದರೆ ಕೆಳಗೆ ಬೀಳೋ ಸಿಪಾಯಿ, ಗುದ್ದಿದರೆ ಬದುಕಾನೇ ?

* * *

ಊಟ ಬಲ್ಲವನಿಗೆ ರೋಗವಿಲ್ಲ, ಓಟ ಬಲ್ಲವನಿಗೆ ಜಗಳವಿಲ್ಲ !



ಯುದ್ಧ ಕಾಲ - ಬೆಂಕಿ ಪೆಟ್ಟಿಗೆಗೆ



" ರೇಡಿಯೋದಲ್ಲಿ ಯುದ್ಧದ ಸುದ್ದಿ ಬದಲಿಸಿ, ಯಾವ್ದಾದ್ರೂ ಸಿನಿಮಾ ಹಾಡು ಹಾಕ್ರೀ "

*1943 ರ ಕೊರವಂಜಿ ವ್ಯಂಗ್ಯ ಚಿತ್ರ*




ಬೆಂಗಳೂರು ಬ್ಲಾಕ್ಔಟ್‌ನಲ್ಲಿ

# ಪಂಪಣ್ಣನ ಪಾಗಲಪನ್

ಜಯಶ್ರೀ ದೇಶಪಾಂಡೆ

"ಈರಾ..ಆ ಹದಿನಾರೆಕರೆ ಗದ್ದೆಯನ್ನು ನಾಳೆ ತೊಗೋತೀನಿ" ಅಂದ ಪಂಪಣ್ಣ.

"ಅದು ಹ್ಯಾಗೆ ತೊಗೋತೀಯ? ರಿಜಿಸ್ತ್ರಿ, ಪಹಣಿ ಪಟ್ಟಿ ಇರೋದು ನನ್ನ ಹೆಸರಲ್ಲಿ, ಅದನ್ನ ಕೊಂಡಿರೋದೂ ನಾನೇ" ಅಂದ ಈರಣ್ಣ.

"ನಿನಗದನ್ನ ಮಾರಿದ್ದು ನನ್ನಪ್ಪ ಅಲ್ವೇನೋ, ಅಂದ್ಮೇಲೆ ಅದು ನಮ್ಮದೇ ಇದ್ದಂತೆ. ಅದೂ ಅಲ್ದೆ ನೀನಲ್ಲಿ ಅಗ್ನಿಬಾಣ ಪಟಾಕಿ ಬೇರೆ ಮಾಡ್ತಾ ಇದ್ದೀಯಂತೆ ನಂಗೆ ಕೊಟ್ಬಿಡು, ನಾಲಕ್ಕಾಸು ಬೇಕಾದ್ರೆ ಕೊಟ್ವೇನು ಅದಕ್ಕೆ"

"ಯ್ಯೋ ನಿಮ್ಮಪ್ಪ ದಾನಕ್ಕೇನೂ ಕೊಟ್ಟಿಲ್ಲ ಕಣ್ಲಾ...ಇವ ಬರ್ತಾನಂತೆ ತೊಗೊತಾನಂತೆ. ಅದು ಹ್ಯಾಗೋ ತೊಗೋತೀಯಾ ನೋಡ್ತೀನಿ ನಾನೂ" ಗುರ್ರಾಯಿಸಿದ್ದ ಈರಣ್ಣ.

"ಹ್ಯಾಗೆ ತೊಗೋತೀನಂದ್ಯಾ? ಛಾಲೇಂಜಾ..? ನಿನ್ನ ಗುದ್ದಿ ಗುದ್ದಿ ಗುದ್ದಿ ಗುದ್ದಿ ತೊಗೋತೀನಿ" ಪಂಪಣ್ಣ.

"ನೀನು ಗುದ್ದೋವರ್ಗೂ ನಾನು ಬಾಳೆಹಣ್ಣು ತಿಂತಾ ಇರ್ತೀನಾ? ಕೈ ಎತ್ತು ನೋಡಣ, ನಿನ್ನ ಪಕ್ಕದ ಸೈಟಲ್ಲಿ ಇನ್ನೊಂದು ಹೊಸಾ ಪಟಾಕಿ ಅಂಗಡಿ  ಹಾಕಿ ನಿನ್ನ ಮನೆ ಹಿತ್ಲು, ಅಂಗಳ, ಕಿಟಕಿಯೊಳಗೆ ಢಂ ಪಟಾಕಿ, ಲಕ್ಷ್ಮೀಸರ  ಹಚ್ಚಿ ಹಚ್ಚಿ ಎಸೀತೀನಿ"

"ಅದಕ್ಕೇ ಮೊದ್ಲಿಂದ ಬಡ್ಕೋತಾ ಇದ್ದಿನಿ. ಪಟಾಕಿ ಅಂಗ್ಡಿ ಬೋರ್ಡೆತ್ತಿ ವೀಳ್ಯದೆಲೆ, ಅಡಿಕೆ ಅಂಗ್ಡಿ ಮಾಡ್ಕೋ ಅಂತ. ಹಂಡೆ ಹಂಡೆ ತುಂಬ ಅಡಿಕೆ ಕುದಿಸೋಕೆ ನಾನೇ ನಿನಗೆ ಒಪ್ಪಿಗೆ ಕೊಟ್ಟಿಲ್ವಾ?" ಉತ್ತರವಾಗಿ ಈರಣ್ಣ ಪಂಪಣ್ಣನ ಇಬ್ಬರು ತಮ್ಮಂದಿರನ್ನು ಜಾಡಿಸಿ ಒದ್ದ!

ಪಂಪಣ್ಣನ ಪಿತ್ತ ನೆತ್ತಿಗೆ ಏರಿದರೆ ಮತ್ತವನು ಮನುಷ್ಯನಲ್ಲ! (ಮೊದಲೂ ಅದು ಅನುಮಾನವೇ ಆದರೂ ಈಗೀಗ ಪದೇ ಪದೇ ಪಂಪಣ್ಣ ಆದಿಮಾನವನಾಗ್ತಾ ಇರೋದೂ ನಿಜವೇ)

"ಲೋಯ್ ಈರ್ಯಾ ಹುಶಾರು, ಭಾಳ ಜಿಗೀಬ್ಯಾಡ. ಸಿಟ್ಟು ಮೀರಿದರೆ ನಿನ್ ರುಂಡ ಚೆಂಡಾಡ್ತೀನಿ"

"ಯ್ಯೋ ಮೊದ್ಲು ಕಾಲ್ಚೆಂಡೋ ಕೈಚೆಂಡೋ ಆಡೋದು ಕಲಿ..ಆ ಮೇಲೆ ರುಂಡದ್ಕತೆ ನೋಡೋವಂತೆ" ಈರಣ್ಣ.

ಪಂಪಣ್ಣನ ಕ್ರೋಧ ಮಿತಿಮೀರಿ ದೂರದಿಂದಲೇ ಇವರನ್ನ ಇಣುಕಿ ನೋಡಿ ಗುಸು ಮಾತಾಡಿಕೊಳ್ತಿದ್ದ ನಾಟಿ ನೇತೋಗಳನ್ನೆಲ್ಲ ಬೈಯಲು ಶುರು ಮಾಡಿದ.. ನೇತೋದ ನೇತಾಗಳು ಪರದೆಯ ಹಿಂದೆ ಅಡಗಿಕೊಂಡು 'ಒಳ್ಳೇ ಮುಳ್ಳಂದಿ ಸಹವಾಸ ಆಯ್ತಲ್ಲ' ಎಂದು  ಮರಮರ ಮರುಗಿ ಈರಣ್ಣನ ಮೇಲೆ ಕನಿಕರ, ಕೋಪ, ಅಸೂಯೆ, ಅಂಜಿಕೆ ಎಲ್ಲಾನೂ ತುಂಬಿಕೊಂಡು ಅಳಬೇಕೋ ನಗಬೇಕೋ ತಿಳಿಯದೆ  ಕೂತವು. ಈ ನಾಟಿ ನೇತೋಗಳೆಂದರೆ ಎಲ್ಲರಿಗೂ ನೆರೆಕರೆಯವರೇ..

"ಹಮುರ್ಂಜನ ಸುದ್ದಿ ಮರೆತ್ಯಾ" ಈರಣ್ಣ ಕೆಣಕಿದ..

ಈಗ ನಿಮಗೆಲ್ಲ ಈ ಸುರಸ ಸಂಭಾಷಣೆಯ ಇತಿವೃತ್ತ ಹೇಳಲೇಬೇಕಲ್ಲ?

ಈ ಹಮುರ್ಂಜನೂ ಈರಣ್ಣನೂ ಖಾಸಾ ದೋಸ್ತಿಗಳು. ಎಷ್ಟು ಖಾಸಾ ಅಂದರೆ

ಒಬ್ಬರ ಚೆಡ್ಡಿ ಇನ್ನೊಬ್ಬರು ಧರಿಸಲು ಚಿಂತೆ ಮಾಡದಷ್ಟು. ಇದೇ ಹಮುರ್ಂಜನ ಹಿತ್ತಲಿನ ನೀರಲ್ಲೇ ಈರಣ್ಣ ಈಜು ಕಲಿತಿದ್ದು.

ಅದನ್ನ ಕಣ್ತುಂಬಿಕೊಂಡು ಆಹಾ ! ಅಂತಂದ ನೆರೆಕರೆಯವರಿಗೂ ಹಮುರ್ಂಜನ ನೀರಿನ ಮೇಲೆ ಅಕ್ಕರೆ ಉಕ್ಕಲಿಕ್ಕೆ ಕಾರಣ ಆ ನೀರೇ ಅವರ ಮನೆ ನಲ್ಲಿಗಳಿಗೆ ಬರೋದು. ಆದರೆ ಪಂಪಣ್ಣನ ಮನೆ ಸಾಮಾನೂ, ತುಪಾಕಿಗಳೂ, ಮೋಟಾರುಗಾಡಿಗಳೂ, .... ನೆರೆಕರೆಯವರಿಗೂ ಅವರ ನೆರೆಕರೆಯವರಿಗೂ ಆ ನೆರೆಕರೆಯವರ ನೆರೆಯವರಿಗೂ ಬೇಕೇ ಬೇಕು!

ಹೀಗಿರುವಾಗ ಏನಾದರೂ ಚಮತ್ಕಾರ ಘಟಿಸಿ ಪಂಪಣ್ಣ ಈರಣ್ಣರ ನಡುವೆ 'ಗಲೇ ಮಿಲಾವ್ ಡೀಲ್' ಆಗಿಬಿಡಲಿ ಎಂದು ಪೋತಣ್ಣನಿಗೂ ಸಿಪಿಂಗಣ್ಣನಿಗೂ ಮನದಲ್ಲೇ ಹರಕೆ ಹೊತ್ತು ಮುಡಿಪುಗಳನ್ನು ಗುಟ್ಟಾಗಿ ಮುಚ್ಚಿಟ್ಟು ಸಲ್ಲಿಸಿ ಒಯ್ದೊಯ್ದು ಮುಟ್ಟಿಸತೊಡಗಿದರು.

ಈರಣ್ಣ ಹಮುರ್ಂಜನ ನೀರಲ್ಲಿ ಈಜು ಕಲಿತದ್ದಷ್ಟೇ ಅಲ್ಲ ಅವನ ಸುತ್ತ ಕಟ್ಟೆ ಕಟ್ಟಿ ಈಜಲು ಬರುವವರಿಂದ ಸುಂಕ ವಸೂಲಿ ಮಾಡ್ತಿದ್ದ (ಅದರಡಿಯಲ್ಲಿ ತೋಯದ ಪಟಾಕಿ ಕೂಡ ಇಟ್ಟಬಿಟ್ಟಿದ್ದ.) ಯಾವನು ಯಾವಾಗ ಮೋಸ ಮಾಡ್ತಾನೋ ಯಾರಿಗ್ಗೊತ್ತು? ಆಗ ಒಂದು ಪಟಾಕಿ ಅವನ ಪೃಷ್ಠಕ್ಕೆ ಬಿದ್ದರೆ ದಾರಿಗೆ ಬರ್ತಾನೆ.

ಈ ಎಲ್ಲದರ ನಡುವೆ ಗುಹೆಯಲ್ಲಿ ತನ್ನದೇ ತಪಸ್ಸಿಗೆ ಕೂತಿದ್ದರೂ ನಮ್ಮ ಮಾದೇಶ ಎಲ್ಲರ ಮೇಲೂ ಒಂದು ಕಣ್ಣಿಟ್ಟಿದ್ದು ಹೌದು.

ಬಿಳಿ ಕೂದಲಿನ ಮಾದೇಶನು ಸೌಮ್ಯನು ಮತ್ತು ಅವನು ಸದಾ ಉತ್ತಿಷ್ಠವಾದ ವೃಕ್ಷಾಸನದಲ್ಲಿ ತಪಗೈಯುತ್ತಿದ್ದರಿಂದ ಅವನ ಮುಖದಲ್ಲಿ ಅಪಾರ ಜ್ಞಾನ ತುಂಬಿದ್ದು ಎಲ್ಲರಿಗೂ ಕಂಡಿತ್ತಾಗಿ ಮಾದೇಶನತ್ತ ಆಸೆಯಿಂದ ನೋಡುತ್ತ ಧಾವಿಸಿ ಬರತೊಡಗಿದರು.

"ಮಾದೇಶಣ್ಣಾ...ಪಂಪಣ್ಣನ ನಾಲ್ಗೆಗೆ ಬೀಗ ಹಾಕೋ ಉಪಾಯ ಉಂಟಾ? ಈರಣ್ಣ ನೋಡು ಏನು ಮಾಡ್ತಾ ಇದ್ದಾನೆ. ಎಲ್ಲಾರ ಮನೆ ಪೈಪು ನೀರಿಲ್ಲದೆ ಒಣಗೋಗ್ತಾ ಇವೆ" ಮಾದೇಶ ಚಿಂತಿಸಿದ ಚಿಂತಿಸಿದ ಮತ್ತು ಚಿಂತಿಸಿದ...

ಆದರೇನು? 'ಹಾವು ಸಾಯಬಾರದು ಕೋಲು ಮುರಿಯಬಾರದು' ಯಾಕೆಂದರೆ ಮಾದೇಶಣ್ಣನ ಮನೆಗೂ ಹಮುರ್ಂಜನ ಕಡೆಯಿಂದ ಈರಣ್ಣನ ನೀರು ಬರುತ್ತೆ. ಅಲ್ಲಿ ಕಂಡರೆ ಪಂಪಣ್ಣ ಹದಿನಾರೆಕರೆ ಗೆದ್ದೆಗೆದ್ದೇ ಗೆಲ್ತೀನಿ ಎಂದು ಕುಮ್ಮೆಟ್ ಹಾರ್ತಾ ಇದ್ದಾನೆ!

ತತ್ಪರಿಣಾಮವಾಗಿ ಸಧ್ಯದಲ್ಲೇ ಮಾದೇಶಣ್ಣ ಹಿಮ ಚಪ್ಪಡಿಯ ಗುಹೆಗೆ ಹೋಗಿ ಇನ್ನೊಂದು ತಪಸ್ಸು ಮಾಡಿ ಲೋಕ ಕಲ್ಯಾಣಾರ್ಥ ಸಮಸ್ತರಿಗೂ "ಸನ್ಮತಿ ದೇ ಭಗವಾನ್" ಎಂದು ಪ್ರಾರ್ಥಿಸುತ್ತಾನೆಂಬುವಲ್ಲಿಗೆ....

ಅವನ ಪ್ರಾರ್ಥನೆ ಫಲಿಸಲೆಂದು ನಾವೂ ನೀವೂ ಕೂತಲ್ಲೇ ತಾಳ ತಟ್ಟೋಣ!

****

ವಿ ಸೂ; ಇದೀಗ ಹಮುರ್ಂಜನನ್ನೂ ತೆಕ್ಕೆಗಿಟ್ಟುಕೊಂಡು ಪಂಪಣ್ಣನನ್ನೇ ಗುದ್ದಿ ಕೂರಿಸಿದ ಈರಣ್ಣ ಸುತ್ತ ಮುತ್ತಲೂ ಢಂ ಪಟಾಕಿ ಹಚ್ಚಿ ಎಸೆಯುತ್ತ ನಿಂತಿದ್ದಾನೆಂಬಲ್ಲಿಗೆ ಜಗತ್ತೆಂಬ ಜಗತ್ತು ಬೆಕ್ಕಸ ಬೆರಗಾಗಿ ಕೂತಿದೆ!!

ಮುಂದಿನದು ತೆರೆಯ ಮೇಲೆ ನೋಡಿ.

# ಮಾಲ್ಗುಡಿ ವಿಶ್ವವಿದ್ಯಾಲಯ (ಬಸವನಗುಡಿ–ಮಲ್ಲೇಶ್ವರ ಸಮರ)

**ಪಾಲಹಳ್ಳಿ ವಿಶ್ವನಾಥ್**

ಅಮೆರಿಕದ ಪ್ರತಿಷ್ಠಿತ ಹಾರ್ವರ್ಡ್ ವಿಶ್ವವಿದ್ಯಾಲಯ ಭಾರತದಲ್ಲಿ ಕಾಲಿಡಲು ನಿಶ್ಚಯಿಸಿ, ಅದನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ನಿರ್ಣಯವಾಯಿತು. ಆದರೆ ಎಲ್ಲಿ? ಅನೇಕ ಸಭೆಗಳು ನಡೆದು ಎರಡು ಬಡಾವಣೆಗಳನ್ನು ಆಯ್ಕೆ ಮಾಡಿದರು: ಮಲ್ಲೇಶ್ವರ ಮತ್ತು ಬಸವನಗುಡಿ. ಇವೆರಡೂ ಪ್ರದೇಶಗಳ ಪರ–ವಿರೋಧ ಪತ್ರಿಕೆಗಳಲ್ಲಿ ಹಲವಾರು ಲೇಖನಗಳು ಪ್ರಕಟವಾದವು. ಅಂತಿಮ ನಿರ್ಣಯಕ್ಕಾಗಿ ಬೆಂಗಳೂರಿನ ಪುಟ್ಟಣ್ಣ ಚೆಟ್ಟಿ ಟೌನ್ ಹಾಲಿನಲ್ಲಿ ಒಂದು ಸಭೆಯನ್ನು ಕರೆಯಲಾಗಿದೆ. ಆಯ್ಕೆ ಮಾಡಲು ಹತ್ತು ಗಣ್ಯರ ಒಂದು ಸಮಿತಿಯನ್ನೂ ಸರ್ಕಾರ ನೇಮಿಸಿದೆ. ಟೌನ್ ಹಾಲಿನ ಮುಂದೆ ಜನವೋ ಜನ! ಟೀ–ಶರ್ಟ್‌ಗಳನ್ನು ಮಾರುತ್ತಿದ್ದಾರೆ. ಒಂದರ ಮೇಲೆ (ನೀಲಿ ಬಣ್ಣ) ಬಸವನಗುಡಿಯ ಬ್ಯೂಗಲ್ ರಾಕ್ ಚಿತ್ರ; ಇನ್ನೊಂದರ ಮೇಲೆ (ಕಂದು ಬಣ್ಣ) ಮಲ್ಲೇಶ್ವರದ ಟಾಟಾ ಇನ್ಸ್ಟಿಟ್ಯೂಟ್ (IISc) ಚಿತ್ರ. ಬಹಳ ಬೇಗ ಇವುಗಳು ಖರ್ಚಾಗುತ್ತಿವೆ. ಇಲ್ಲಿಯ ವಾತಾವರಣ ಬಿಸಿ ಎಂದು ಹೇಳಿದರೆ ಸಾಲದು, ಯುದ್ಧದ ವಾತಾವರಣ ಎಂದೇ ಹೇಳಬೇಕು – ಮಹಾಭಾರತ ಸಂಗ್ರಾಮದ ತರಹ!ಸಭೆ ತುಂಬಿ ತುಳುಕುತ್ತಿತ್ತು. ಸಮಿತಿಯ ಅಧ್ಯಕ್ಷರು ಎದ್ದು ನಿಂತು ವಿಷಯವನ್ನು ತಿಳಿಸಿ, ಎರಡು ಕಡೆಯವರಿಗೆ ತಮ್ಮ ವಾದಗಳನ್ನು ಮಂಡಿಸಲು ಹೇಳಿದರು.

ಬಸವನಗುಡಿಯವರು ಸಾಹಿತ್ಯದಿಂದ ಶುರು ಮಾಡಿದರು: "ನೋಡಿ, ನಮ್ಮ ರಸ್ತೆಗಳಲ್ಲಿ ನಡೆದರೆ ಇಂದಿಗೂ ಡಿ.ವಿ.ಜಿ ಅವರ 'ಮಂಕುತಿಮ್ಮನ ಕಗ್ಗ'ದ ದಾರ್ಶನಿಕತೆ ಕೇಳಿಸುತ್ತದೆ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ 'ಶ್ರೀನಿವಾಸ'ನ ಕಥೆಗಳು ಹುಟ್ಟಿದ್ದು ಇಲ್ಲಿಯೇ. ಇಷ್ಟೇ ಅಲ್ಲ, ಲಂಕೇಶರ ಬಂಡಾಯದ ಕಿಚ್ಚು ಹತ್ತಿದ್ದೇ ಈ ಮಣ್ಣಿನಲ್ಲಿ. ನಿಸಾರರ ಕವಿತೆಗಳು ಜನ್ಮತಾಳಿದ್ದೂ ಇಲ್ಲಿಯೇ. ಎ.ಎನ್. ಸುಬ್ಬರಾಯರ ಕಲಾಮಂದಿರ ಎಷ್ಟೊಂದು ಕಲಾಕಾರರನ್ನು ಬೆಳೆಸಿತು! ಇದು ಕೇವಲ ಬಡಾವಣೆಯಲ್ಲ, ಕನ್ನಡ ಸಾಹಿತ್ಯದ ತಾಯಿಮನೆ!" ಇದಕ್ಕೆ ಮಲ್ಲೇಶ್ವರದ ಉತ್ತರ ಹೀಗಿತ್ತು: "ಅಷ್ಟೆಲ್ಲಾ ಜಂಭ ಕೊಚ್ಚಿಕೊಳ್ಳಬೇಡಿ. ನಮ್ಮಲ್ಲೇನು ಸಾಹಿತಿಗಳು ಕಡಿಮೆಯೇ? ನಮ್ಮಲ್ಲಿ ಪು.ತಿ.ನ ಅವರ 'ಗೋಕುಲ ನಿರ್ಗಮನ' ಕಾವ್ಯವಿದೆ. ಜಿ.ಪಿ. ರಾಜರತ್ನಂ ಅವರ 'ರತ್ನನ ಪದಗಳು' ಇಲ್ಲಿನ ಜನಸಾಮಾನ್ಯರ ಧ್ವನಿಯಾಗಿವೆ. ಸಿದ್ಧವನಹಳ್ಳಿ ಕೃಷ್ಣಶರ್ಮ, ಮತ್ತೂರು ಕೃಷ್ಣಮೂರ್ತಿ ಇವರೆಲ್ಲಾ ಇದ್ದ ಸ್ಥಳ ಮಲ್ಲೇಶ್ವರ. ಕುವೆಂಪು ಇಲ್ಲೇ ಕುಳಿತು ತಮ್ಮ 'ರಾಮಾಯಣ ದರ್ಶನಂ' ಬರೆದರಂತೆ. ಅವರೆಲ್ಲ ಮಲ್ಲೇಶ್ವರದ ಹೆಮ್ಮೆ!" ಅವರು ಮುಗಿಸುವ ಮೊದಲೇ ಬಸವನಗುಡಿಯವರು ಹಾಸ್ಯದ ವಿಷಯ ಶುರು ಮಾಡಿದರು: "ಅಪಾರ ಹಾಸ್ಯಪ್ರಜ್ಞೆಯ ವೈ.ಎನ್.ಕೆ ಇದ್ದಿದ್ದು ನಮ್ಮಲ್ಲಿಯೇ. ದಾಶರಥಿ ದೀಕ್ಷಿತ್ ಇದ್ದಿದ್ದು ಇಲ್ಲಿಯೇ." ಅದಕ್ಕೆ ಮಲ್ಲೇಶ್ವರ ನಗುತ್ತಾ, "ಸ್ವಾಮಿ, ಹಾಸ್ಯ ದಿಗ್ಗಜರಾದ ಡಾಕ್ಟರ್ ಶಿವರಾಮ್ (ರಾಶಿ) ಅವರ 'ಕೊರವಂಜಿ'ಯ ಮನೆ ಇದು; ಎಷ್ಟು ಹಾಸ್ಯ ಲೇಖಕರನ್ನು ಅದು ಬೆಳೆಸಿತು! ಅದರ ಆಧುನಿಕ ಅವತಾರವಾದ 'ಅಪರಂಜಿ'ಯ ಮನೆ ಕೂಡ ಇದು."

ಅಧ್ಯಕ್ಷರು ತಡೆದರು: "ಆಯಿತು, ಆದರೆ ವಿಶ್ವವಿದ್ಯಾಲಯ ಎಂದರೆ ಬರಿ ಸಾಹಿತ್ಯವಲ್ಲ." ಮಲ್ಲೇಶ್ವರದವರು ವಿಜ್ಞಾನದ ವಾದ ಶುರು ಮಾಡಿದರು: "ವಿಜ್ಞಾನದ ವಿಷಯ ಬಂದರೆ ಮಲ್ಲೇಶ್ವರಂ ಅಜೇಯ! ಸರ್ ಸಿ.ವಿ. ರಾಮನ್ ಅವರಿಂದ ಹಿಡಿದು, ಭಾರತ ರತ್ನ

ಸಿ.ಎನ್.ಆರ್. ರಾವ್ ಅವರವರೆಗೆ ಜಗತ್ತನ್ನೇ ಬೆರಗುಗೊಳಿಸಿದ ವಿಜ್ಞಾನಿಗಳ ತಪೋಭೂಮಿ ಇದು. ಐ.ಐ.ಎಸ್.ಸಿ (IISc) ಎಂಬ ಜ್ಞಾನದ ದೇಗುಲವಿರುವುದು ಇಲ್ಲಿಯೇ. ಭಾರತದ ಖಭೌತ ವಿಜ್ಞಾನ ಲೋಕದ ಧ್ರುವತಾರೆಯಾದ ಬಿ. ವಿ. ಶ್ರೀಕಂಠನ್ ಅವರು ಬೆಳೆದದ್ದು ಮತ್ತು ಸಾಧನೆ ಮಾಡಿದ್ದು ಇದೇ ಮಲ್ಲೇಶ್ವರಂನಲ್ಲಿ. ಇಸ್ರೋ ಪಿತಾಮಹ ವಿಕ್ರಮ್ ಸಾರಾಭಾಯಿಯವರು ಇಲ್ಲಿಯೇ ಇದ್ದು ಸಂಶೋಧನೆ ನಡೆಸಿದರು."

ಅದಕ್ಕೆ ಬಸವನಗುಡಿ ಉತ್ತರ ಕೊಟ್ಟಿತು: "ಆ ವಿಜ್ಞಾನವೆಲ್ಲಾ ಕೆಲವರಿಗೆ ಮಾತ್ರ! ಬರಿ ವಿಜ್ಞಾನ ಓದಿದರೆ ವೈಜ್ಞಾನಿಕ ಮನೋಭಾವ ಬರುವುದಿಲ್ಲ. ಅದಿಲ್ಲದೆ ದೇಶ ಮುಂದೆ ಹೋಗಲು ಆಗುವುದಿಲ್ಲ. ವಿಜ್ಞಾನವನ್ನು ಕೇವಲ ಪ್ರಯೋಗಾಲಯಕ್ಕೆ ಸೀಮಿತ ಮಾಡದೆ ಜನರ ಬಳಿ ತಂದಿದ್ದು ನಾವು. ವೈಚಾರಿಕತೆಯ ಹರಿಕಾರ ಎಚ್. ನರಸಿಂಹಯ್ಯನವರ (HN) ಕರ್ಮಭೂಮಿ ಬಸವನಗುಡಿ. ವಿಜ್ಞಾನದ ಜೊತೆಗೆ ಸಮಾಜ ಸುಧಾರಣೆಯ ತತ್ವಗಳನ್ನು ಬೆಸೆದ ಕೀರ್ತಿ ಬಸವನಗುಡಿಗೆ ಸಲ್ಲುತ್ತದೆ! ಮರೆತಿದ್ದೆ, ಅನೇಕ ಕ್ರಿಕೆಟಿಗರು




ಬಸವನಗುಡಿಯವರು–ಪ್ರಸನ್ನ, ಚಂದ್ರಶೇಖರ್, ಕುಂಬ್ಳೆ ಎಲ್ಲ ನಮ್ಮವರು." ಮಲ್ಲೇಶ್ವರ ಅದಕ್ಕೆ ಚುಟುಕಾಗಿ ಉತ್ತರಿಸಿತು: "ಆಯಿತಪ್ಪ, ಆದರೆ ಅವರುಗಳೆಲ್ಲಾ ಆಡಿದ್ದೆಲ್ಲಿ? ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ! ಆ ಚಿನ್ನಸ್ವಾಮಿ ಎಲ್ಲಿಯವರು? ನಮ್ಮ ಮಲ್ಲೇಶ್ವರದವರು. ಖ್ಯಾತ ಬ್ಯಾಡ್ಮಿಂಟನ್ ಆಟಗಾರ ಪ್ರಕಾಶ್ ಪಡುಕೋಣೆ ಇಲ್ಲಿಯವರು."

ಅಧ್ಯಕ್ಷರು "ಬೇರೆ ಯಾವುದಾದರೂ ವಿಷಯ ಹೇಳಿ" ಎಂದಾಗ, ಬಸವನಗುಡಿ ಉತ್ಸಾಹದಿಂದ ಶುರು ಮಾಡಿತು: "ನಮ್ಮಲ್ಲಿನ ಬ್ಯೂಗಲ್ ರಾಕ್ ಕಲ್ಲುಗಳು ಶತಮಾನಗಳ ಇತಿಹಾಸ ಸಾರುತ್ತವೆ. ಹೈದರ್ ಮತ್ತು ಟಿಪ್ಪು ಸ್ಥಾಪಿಸಿದ ಲಾಲ್‌ಬಾಗ್ ಉದ್ಯಾನವಿದೆ. ಅಲ್ಲಿಯ ಪುಟ್ಟ ಬೆಟ್ಟದ ಕಲ್ಲೂ ಬಹಳ ಹಳೆಯದೇ. ಲಾಲ್‌ಬಾಗಿನಂತಹ ಸಸ್ಯಕಾಶಿ ಎಲ್ಲಿ ಸಿಗುತ್ತದೆ? ಅಲ್ಲಿನ ಕೆರೆ ಎಷ್ಟು ಚೆನ್ನ! ಇವೆಲ್ಲ ಬಸವನಗುಡಿಯನ್ನು ಬೆಂಗಳೂರಿನ ಶ್ವಾಸಕೋಶವನ್ನಾಗಿ ಮಾಡಿವೆ. ಬೆಂಗಳೂರಿನ 'ಗಾರ್ಡನ್ ಸಿಟಿ' ಎಂಬ ಬಿರುದು ಉಳಿದಿರುವುದೇ ಇವುಗಳಿಂದ."ಆಗ ಮಲ್ಲೇಶ್ವರ ಉತ್ತರಿಸಿತು: "ನಮ್ಮ ಲೇಔಟ್ ಹೇಗಿದೆ ಎಂದರೆ, ಇಲ್ಲಿನ ರಸ್ತೆಗಳೇ ಪಾರ್ಕ್‌ಗಳಂತೆ ಕಾಣುತ್ತವೆ. 18ನೇ ಅಡ್ಡರಸ್ತೆಯ ಆ ಕವಲೊಡೆದ ಸಾಲುಮರಗಳ ಕೆಳಗೆ ನಡೆದರೆ ಸಿಗುವ ನೆಮ್ಮದಿ ಜಗತ್ತಿನ ಬೇರೆ ಯಾವ ಆಧುನಿಕ ಪಾರ್ಕಿನಲ್ಲೂ ಸಿಗದು. ನಮ್ಮದು ಯೋಜಿತ ಹಸಿರು; ಪ್ರಕೃತಿಯನ್ನು ನಾಗರಿಕತೆಯೊಂದಿಗೆ ಹದವಾಗಿ ಬೆರೆಸಿದ ಕಲೆ ನಮಗೆ ಸಿದ್ಧಿಸಿದೆ. ನಮ್ಮ ಸಾಂಕಿ ಟ್ಯಾಂಕ್ ಯಾವ ಕೆರೆಗೂ ಕಡಿಮೆ ಇಲ್ಲ."

"ಆಯಿತು, ಈಗ ಮುಗಿಸೋಣವೇ?" ಎಂದು ಅಧ್ಯಕ್ಷರು ಕೇಳಿದಾಗ, ಮಲ್ಲೇಶ್ವರ ಕೊನೆಯದಾಗಿ ಹೇಳಿತು: "ಸಿ.ಟಿ.ಆರ್‌ನ ಆ ಗರಿಗರಿಯಾದ ಬೆಣ್ಣೆ ದೋಸೆಯ ರುಚಿ ನೋಡಿದವರು ಮತ್ತೆಲ್ಲೂ ಹೋಗಲಾರರು." ಅದಕ್ಕೆ ಬಸವನಗುಡಿ ನಗುತ್ತಾ, "ನಮ್ಮ ವಿದ್ಯಾರ್ಥಿ ಭವನದ ಮುಂದೆ ಸಾಲು ನಿಂತು ದೋಸೆ ತಿನ್ನುವ ಆ ಸಂಭ್ರಮವಿದೆಯಲ್ಲ, ಅದು ಬೆಂಗಳೂರಿನ ಸಂಸ್ಕೃತಿಯ ಭಾಗ. ಮಲ್ಟಿ–ಕ್ಯೂಸಿನ್ ಹೋಟೆಲ್‌ಗಳು ಬರಬಹುದು, ಆದರೆ ಗಾಂಧಿ ಬಜಾರ್‌ನ ಬೀದಿಬದಿಯ ಹೋಟೆಲ್‌ಗಳ ಆ ಸಾಂಪ್ರದಾಯಿಕ ರುಚಿಯನ್ನು ಮರೆಯಲು ಸಾಧ್ಯವೇ?"

ಅಧ್ಯಕ್ಷರು ಸಭೆ ಮುಕ್ತಾಯಗೊಳಿಸುತ್ತಾ ಹೇಳಿದರು: "ಇಲ್ಲಿ ಒಂದು ಹೆಚ್ಚು, ಇನ್ನೊಂದು ಕಡಿಮೆಯಲ್ಲ. ಎರಡು ಬಡಾವಣೆಗಳೂ ಬೆಂಗಳೂರಿನ ಹಾಗೂ ಭಾರತದ ಭವ್ಯತೆಗೆ ತಮ್ಮದೇ ಕೊಡುಗೆ ನೀಡಿವೆ. ಇವೆರಡೂ ಇಲ್ಲದೆ ಬೆಂಗಳೂರು ಪೂರ್ಣವಾಗುವುದಿಲ್ಲ. ನಿಶ್ಚಯಿಸಲು ನಮಗೆ ಸಮಯ ಬೇಕು."

ಇದಾದ ಒಂದು ವಾರದ ನಂತರ ಸರ್ಕಾರ ಒಂದು ಹೇಳಿಕೆಯನ್ನು ನೀಡಿತು: "ಈ ಎರಡೂ ಬಡಾವಣೆಗಳ ಸಂಸ್ಕೃತಿಯನ್ನು ಬೆಸೆಯುವ ಒಂದು ಹೊಸ ವಿದ್ಯಾಲಯವನ್ನೇ ಸ್ಥಾಪಿಸುತ್ತೇವೆ. ಬಿಡದಿಯ ಹೊರಗಡೆ 100 ಎಕರೆ ಜಾಗದಲ್ಲಿ ಇದು ಜನ್ಮತಾಳಲಿದೆ. ಇದರ ಹೆಸರು 'ಮಾಲ್ಗುಡಿ ವಿಶ್ವವಿದ್ಯಾಲಯ'." ■

## ಯುದ್ಧಕ್ಕೆ ಸೈನಿಕರು

ಇದು ಬಹಳ ಹಿಂದೆ ಕೇಳಿದ್ದು. ಆಗ ಬಹುಶ: ಎರಡನೇ ಮಹಾಯುದ್ಧ ನಡೆಯುತ್ತಿತ್ತಂತೆ. ಆಗ ಯಾರು ಬೇಕಾದರೂ ಯುದ್ಧಕ್ಕೆ ಹೋಗಬಹುದಿತ್ತಂತೆ. ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಕೆಲಸ ಕೊಡುತ್ತಿದ್ದರಂತೆ. ಸೂಕ್ತ ತರಬೇತಿ ಕೊಟ್ಟು ನೇರ ಯುದ್ಧ ಭೂಮಿಗೂ ಕಳಿಸುತ್ತಿದ್ದರಂತೆ. ಒಂದು ಊರಿನಲ್ಲಿ ಅನೇಕ ಜನ ಯುವಕರು ಯುದ್ಧಕ್ಕೆ ಹೋದರು. ಒಂದು ಮನೆಯಲ್ಲಿ ಒಬ್ಬಳು ಹೆಂಗಸು ಮೂರು ಜನ ಮಕ್ಕಳು ಇದ್ದರು. ಅವಳು ಹಿರಿಯವನನ್ನು ನೀನೂ ಯುದ್ಧಕ್ಕೆ ಹೋಗಿ ದೇಶಸೇವೆ ಮಾಡು ಅಂತ ಕಳಿಸಿದಳು. ಕೆಲವೇ ದಿನಗಳಲ್ಲಿ ಮಗ ಸತ್ತ ಸುದ್ದಿ ಅವಳಿಗೆ ಬಂತು. ಅವಳು ಅಳಲಿಲ್ಲ, ಕಣ್ಣೀರು ಹಾಕಲಿಲ್ಲ. ಎರಡನೇ ಮಗನನ್ನು ಕಳಿಸಿದಳು. ಅವನೂ ಯುದ್ಧಕ್ಕೆ ಹೋಗಿ ಒಂದಾರು ತಿಂಗಳ ಬಳಿಕ ಅವನೂ ಸತ್ತ ಸುದ್ದಿ ಬಂತಂತೆ. ಆಗೆಲ್ಲಾ ಈಗಿನ ಹಾಗೆ ಕಳೇಬರವನ್ನು ಹುಟ್ಟೂರಿಗೆ ಕಳಿಸುವ ಸಾಧ್ಯತೆ ಇರಲಿಲ್ಲವೇನೋ. ಹೋದರು ಅಂದರೆ ಹೋದರು ಅಷ್ಟೆ. ಕೆಲವರು ಬಂದು ಆ ಹೆಂಗಸನ್ನು ಸಮಾಧಾನ ಮಾಡಿದರು. ಮತ್ತೆ ಯುದ್ಧಕ್ಕೆ ಕರೆ ಬಂದಾಗ ಆ ಹೆಂಗಸು ಮೂರನೇ ಮಗನನ್ನೂ ಕಳಿಸಿದಳಂತೆ. ಊರಿನವರೆಲ್ಲಾ ಆ ಹೆಂಗಸಿನ ಧೈರ್ಯಕ್ಕೆ ಮೆಚ್ಚಿದರಂತೆ. ಇನ್ನೊಂದು ಆರು ತಿಂಗಳು ಕಳೆದ ಮೇಲೆ ಮೂರನೇ ಮಗನೂ ಸತ್ತ ಸುದ್ದಿ ಬಂತಂತೆ. ಆಗ ಆ ಹೆಂಗಸು ಜೋರಾಗಿ ಅಳೋಕೆ ಷುರು ಮಾಡಿದಳಂತೆ. ಅದನ್ನು ಕಂಡು ಊರಿನವರು ಏನಮ್ಮಾ ನಿನ್ನ ಹಿರಿ ಮಗ ಯುದ್ಧದಲ್ಲಿ ಸತ್ತಾಗ ಅಳಲಿಲ್ಲ, ಎರಡನೇ ಮಗ ಸತ್ತಾಗಲೂ ಅಳಲಿಲ್ಲ. ಈಗ ಮೂರನೇ ಮಗ ಸತ್ತಾಗ ಅಳುತ್ತಿದ್ದೀಯಲ್ಲ ಅಂತ ಕೇಳಿದರೆ ಆಕೆ ಅಳುತ್ತಲೇ ದೇಶಸೇವೆಗೆ ಕಳಿಸೋಣ ಅಂದರೆ ನನಗೆ ಇನ್ನು ಯಾವ ಗಂಡು ಮಕ್ಕಳು ಇಲ್ವಲ್ಲಾ ಅಂತ ಅಳ್ತಿದೀನಿ ಅಂದಳಂತೆ. ಊರಿನ ಜನ ನಿಜವಾದ ದೇಶಭಕ್ತಿ ಅಂದರೆ ಇದು ಅಂದುಕೊಂಡರಂತೆ.

## ಶಾಂತಿ–ವಿಶ್ರಾಂತಿ

**ಉಲ್ಲಾಸ್ ರಾಯಸಂ**

"ಆಫೀಸಿನಲ್ಲಿ ಭರ್ಜರಿ ಬೀಳ್ಕೊಡುಗೆ ಪಾರ್ಟಿ, ಯಾವಾಗಲೂ ನಾರಾಯಣ್ ರಾವ್ ಮೇಲೆ ಕೋಪಗೊಳ್ಳುತ್ತಿದ್ದ ಬಾಸ್ ಈಗ ಅವರೊಂದಿಗೆ ಚೆನ್ನಾಗಿ ಮಾತನಾಡುತ್ತಿದ್ದರು–ಇಂದು ನನ್ನ ಕೊನೆಯ ದಿನ ಎಂದು ಅವನು ಸಂತೋಷ–ಪಡುತ್ತಾನೋ ಅಥವಾ ನನಗಾಗಿ ನಿಜವಾಗಿಯೂ ಸಂತೋಷಪಡುತ್ತಾನೋ, ಆದರೆ ನಾರಾಯಣ್ ರಾವ್ ಮನೆಯಲ್ಲಿ ಇನ್ಮೇಲೆ ಬರೀ ವಿಶ್ರಾಂತಿ ಪಡೆದು ತನ್ನ ಬಾಸ್ ಮುಖವನ್ನು ಮತ್ತೆ ನೋಡದಿದ್ದಕ್ಕೆ ಸಂತೋಷಪಟ್ಟರು – ಇಬ್ಬರೂ ಪರಸ್ಪರ ನಗುತ್ತಿದ್ದರು. ಹಲವು ವರ್ಷಗಳ ಕಾಲ ಕಾರ್ಪೊರೇಟ್‌ನಲ್ಲಿ ಸೇವೆ ಸಲ್ಲಿಸಿದ ನಂತರ, ನಾರಾಯಣ ರಾವ್ ಅವರ ಹೊಸ ಜೀವನವು ಶಾಂತಿ, ವಿಶ್ರಾಂತಿ ಮತ್ತು ಸಂತೋಷದಿಂದ ಕೂಡಿದೆ ಎಂದು ಭಾವಿಸಿದರು

ಬೇಗನೆ ಎದ್ದು ಕಚೇರಿ ವಾಹನಕ್ಕಾಗಿ ಕಾಯಬೇಕಾಗಿಲ್ಲ. ಅವರು ಮಾಡಬೇಕಾ–ಗಿರುವುದು ಮಜಾ. ನಿದ್ದೆ, ತಿನ್ನೋದು ಮತ್ತೆ ನಿದ್ದೆ, ಆಹಾ !!! ನಾನೇ ಪುಣ್ಯವಂತಾ ನಾರಾಯಣರಾವ್‌ಗೆ ನಿದ್ದೆ ಬರಲಿಲ್ಲ – ಬೆಳಿಗ್ಗೆ 5 ಗಂಟೆಗೆ ಅಭ್ಯಾಸದ ಬಲದಿಂದ ದೇಹವು ಎಚ್ಚರ ವಾಯಿತು. ದೇಹದ ಗಡಿಯಾರ ನಿಗದಿಯಾಗಿತ್ತು, ಎದ್ದೇಳುತ್ತಾರೆ, ಶಾಂತಮ್ಮ ಅವರ ಹೆಂಡತಿ–ದಯವಿಟ್ಟು ಮಲಗಿ–ನಿಮಗೆ ಇವತ್ತು ಆಫೀಸ್ ಇಲ್ಲ ಮತ್ತು ಬಾತ್ರೂಮ್‌ಗೆ ಓಡುವುದನ್ನು ನಿಲ್ಲಿಸಿ–ಒಂದು Changeಗಾಗಿ ಎರಡು ದಿನ ನಾನು ಈಗ ನಿವೃತ್ತಿ ಹೊಂದಬಹುದೆಂದು ನಾನು ಭಾವಿಸುತ್ತೇನೆ ಮತ್ತು ನೀವು ಈಗ ಮನೆಯಲ್ಲಿ ಕೆಲಸ ಮಾಡಲು ಪ್ರಾರಂಭಿಸಿ ಎಂದು ಹೇಳಿದಳು, ದಯವಿಟ್ಟು ನನಗಾಗಿ ಕಾಫಿ ತಯಾರಿಸಿ ಎಂದು ಬೇಡಿದಳು ಶಾಂತಮ್ಮ.

ಸರಿ ಅಂತ ಹೇಳಿ ಫ್ರಿಡ್ಜ್ ಬಳಿ ನಡೆದು ಹೋಗುತ್ತಾರೆ, ಫ್ರಿಡ್ಜ್‌ನಲ್ಲಿ ಹಾಲು ಇಲ್ಲ, ಸರಿ ಪಕ್ಕದಲ್ಲೇ ಹಾಲಿನ ಡೇರಿ ಇದೆ ತಂದರಾಯಿತು, ಅಂಗಡಿಗೆ ನಡೆದುಕೊಂಡು ಹೋಗುತ್ತಿರುವಾಗ– ಅದೇ ರಸ್ತೆಯ ನೆರೆಹೊರೆಯ ಅನಂತ ಸ್ವಾಗತಿಸುತ್ತಾ ರೆ – ನಿವೃತ್ತ ಕ್ಲಬ್‌ಗೆ ಸ್ವಾಗತ. ಈಗ ನಿವೃತ್ತನಾಗಿರುವುದರಿಂದ ತಾವು ನಿಷ್ಪ್ರಯೋಜಕ ಮತ್ತು ವ್ಯರ್ಥ ಎಂದು ಭಾವಿಸುತ್ತಿದ್ದೇನೆ ಎಂದರು ಅನಂತ.

ಅದಕ್ಕೆ ನಾರಾಯಣ ರಾವ್ ಅವರು ಸಮಾಧಾನ ಪಡಸಿ–ಚಿಂತೆ ಮಾಡಬೇಡಿ, ಇಷ್ಟು ವರ್ಷ ನಾವು ಆಫೀಸ್‌ನಲ್ಲಿ ಕೆಲಸ ಮಾಡಿದ್ದೇವೆ, ಈಗ ನಾವು ನಮ್ಮ ಸ್ವಂತ ಮನೆ ಕೆಲಸ ಮಾಡಬೇಕು–ಮತ್ತು ಅದನ್ನು ಮಾಡುತ್ತಿರುವುದಕ್ಕೆ ಹೆಮ್ಮೆಪಡಬೇಕು ಮತ್ತು ಮದುವೆಯಾದ ದಿನದಿಂದ ನಮ್ಮ ಪತ್ನಿ ಎಂದಿಗೂ ವಿಶ್ರಾಂತಿ ಪಡೆಯದೆ ಭಾನುವಾರವೂ ಕೆಲಸ ಮಾಡುತ್ತಾರೆ,

ಹಾಲಿನ ಪಾರ್ಲರ್‌ನಲ್ಲಿ, ಕ್ಯೂನಲ್ಲಿದ್ದಾರೆ, ಒಬ್ಬ ಮಹಿಳೆ ನನ್ನ ಗಂಡನಿಗೆ ಕಾಫಿ ಮಾಡಬೇಕು, ಅವರು ಆಫೀಸಿಗೆ ಹೋಗಬೇಕು, ನಾನು ಮೊದಲು ಹೋಗಬಹುದೇ ಎಂದು ಕೇಳುತ್ತಾಳೆ, ನಂತರ ಇನ್ನೊಬ್ಬ ಶಾಲಾ ಮಗು ಬಂದು ಅಂಕಲ್, ನನಗೆ ಶಾಲೆ ಇದೆ, ನಾನು ಮುಂದೆ ಹೋಗಲೇ ಎಂದು ಕೇಳುತ್ತಾ ನೆ.

ಬರುವ ಜನರೆಲ್ಲರೂ ತಾವು "ಮೊದಲು" ಎಂದು ಹೇಳುತ್ತಲೇ ಇರುತ್ತಾರೆ, ಏಕೆಂದರೆ ಪ್ರತಿಯೊಬ್ಬರಿಗೂ ಏನಾದರೂ ಮುಖ್ಯವಾದ ಕೆಲಸವಿದೆ–ಮತ್ತು ಅವರು

ನಿವೃತ್ತನಾಗಿರುವುದರಿಂದ ಅವರು ಆತುರಪಡುವ ಅಗತ್ಯವಿಲ್ಲ.

ನಾರಾಯಣ ರಾವ್ ಎರಡು ಗಂಟೆಗಳ ನಂತರ ಮನೆಗೆ ತಲುಪುತ್ತಾರೆ, ಶಾಂತಮ್ಮ ತಿಂಡಿ ಮಾಡಿದ್ದಾರೆ–ಮನೆ  ಗುಡಿಸಿ ಸ್ವಚ್ಛ ಮಾಡಿದ್ದಾರೆ. ಬಿಬಿಎಂಪಿ ವ್ಯಕ್ತಿ ಬರುವ ಹೊತ್ತಿಗೆ ಶಾಂತಮ್ಮ ತ್ಯಾಜ್ಯವನ್ನು ವಿಂಗಡಿಸಿ ಇಟ್ಟುಕೊಳ್ಳಬೇಕು.

ಶಾಂತಮ್ಮ ಹೇಳುತ್ತಾರೆ–ನಿಮಗೆ ಗೊತ್ತು ನನಗೆ ಎದ್ದ ಕೊಡಲೇ, ಕಾಫಿ ಬೇಕೇ ಬೇಕು, ಇಲ್ಲ ಅಂದ್ರೆ ಕೈ ಕಾಲು ಆಡೋದಿಲ್ಲ. ಒಂದು ದಿನ ಕಾಫಿ ಮಾಡಿ ಅಂದ್ರೆ ಅದೇ ತಪ್ಪಾಯಿತು.

ನೀವು  ಹಸುವನ್ನು ಮೇಯಿಸಿ, ಹಾಲು ಕರೆದು ತಂದಿದ್ದರೂ ಸಹ, ಅದು ಬೇಗ ಆಗಿರುತ್ತಿತ್ತು. –ರಸ್ತೆಯ ತುದಿಯ ಅಂಗಡಿಯಿಂದ ಹಾಲು ತರಲು ನೀವು ಕೇವಲ 2 ಗಂಟೆಗಳನ್ನು ತೆಗೆದುಕೊಂಡಿದ್ದೀರಿ. ನೀವು ಕಚೇರಿಯಲ್ಲಿ ಹೇಗೆ ಕೆಲಸ ಮಾಡುತ್ತೀರಿ ಎಂದು ನನಗೆ ಅರ್ಥವಾಯಿತು,




ಅಲ್ಲೂ ಹೀಗೆ ಅಡಾವುಡಿ ಕೆಲಸನಾ ?, ಆ ದೇವರೇ ಮೆಚ್ಚ ಬೇಕು ? ಇನ್ಮೇಲೆ ನಾನೇ ಹಾಲನ್ನು ತರುತ್ತೇನೆ.

ಶಾಂತಮ್ಮ–ಹೆಸರಿನಲ್ಲಿ ಮಾತ್ರ ಶಾಂತಮ್ಮ. ಬಾಯಿ ಮತ್ತು ಕೈಗಳನ್ನು ಕಾರ್ಯನಿರತವಾಗಿ–ಟ್ಟುಕೊಂಡರು, ಕೊನೆಗೆ ಒಂದೇ ಬಾರಿಗೆ ನೆಲ ಮತ್ತು ಗಂಡ ಎರಡನ್ನೂ ಗುಡಿಸಿದರು.

ಅವಳು ತ್ಯಾಜ್ಯವನ್ನು ಹೊರಗೆ ಇಟ್ಟಿರಲಿಲ್ಲ–ಬಿಬಿಎಂಪಿ ಕಸ ಹಾಕುವ ವ್ಯಕ್ತಿ ಕೂಗಿದ– ಆಂಟಿ ವೇಸ್ಟ್. ವೇಸ್ಟ್. ಆಂಟಿ, ಶಾಂತಮ್ಮಾ ಅವಳು ಈಗಾಗಲೇ ತನ್ನ ಶಾಂತಿಯನ್ನು ಕಳೆದುಕೊಂಡಿದ್ದಳು. ಅವಳು ಮನೆಯ ಗೇಟಿನ ಕಡೆ ನುಗ್ಗಿ ,ಕಸ ಹಾಕುವವನಿಗೆ ಹೇಳಿದಳು–ಆಂಟಿ ವೇಸ್ಟ್ ಅಲ್ಲ  ಮತ್ತು ಅವರು ಸಮಯವನ್ನು ವೇಸ್ಟ್ ಮಾಡುವುದಿಲ್ಲ. ಅದು ನಿಜವೂ ಆಗಿತ್ತು. ಆದರೆ ಅಂಕಲ್ ವೇಸ್ಟ್ ಮತ್ತು ಇಂದಿನಿಂದ–ಅವನು ಅಂಕಲ್ ಅನ್ನು ವೇಸ್ಟ್‌ಗಾಗಿ ಕರೆಯಬೇಕು. ನಾರಾಯಣ ರಾವ್‌ಗೆ ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ, ಕಚೇರಿಗೆ ಹೋಗಲು ಸಾಧ್ಯವಿಲ್ಲ, ಬಾತ್ರೂಮ್‌ಗೆ ಹೋದರು.

10 ನಿಮಿಷಗಳು ಆಗಿಲ್ಲ , ಶಾಂತಮ್ಮ–ಏನ್ರಿ ಇದು , ಬಾತ್ರೂಮ್ ಬೇರೆಯವರು ಬಳಸಬೇಕು, ನಿಮ್ಮ ಮೊಬೈಲ್ ತಿಕ್ಕುತ್ತಾ ಕೂತುಕೋ ಬ್ಯಾಡರಿ. ಹೊರಗೆ ಬನ್ನಿ.

ನಾರಾಯಣರಾವ್‌ಗೆ–ಆಫೀಸ್ ನಲ್ಲಿ ಬಾತ್ರೂಮ್‌ಗೆ 30 ನಿಮಿಷ ಹೋದರೂ ಯಾರ  ಕಾಟನು ಇದ್ದಿಲ್ಲ–ಇವತ್ತಿನಿಂದ ನಿಮಗೆ ಸ್ವಲ್ಪ ಕೆಲಸ ಕೊಡುತ್ತೇನೆ. ಬೆಳಿಗ್ಗೆ ಹಾಲು ನಾನೇ ತರುತ್ತೀನಿ, ನೀವು ಕರೆಕ್ಟ್ ಆಗಿ, ಸರಿಯಾದ ಸಮಯಕ್ಕೆ  ಕಸ ಹೊರಗೆ ಇಟ್ಟು ಬಿಡಿ. ನಾನು ತಿಂಡಿ ಮತ್ತು ಅಡಿಗೆ ಮಾಡುತ್ತೀನಿ, ತಾವು ಸ್ವಲ್ಪ ಸಹಾಯ ಮಾಡಿ.

ಸಾಯಂಕಾಲ ನಾನು ಹೇಳಿದ ಹಣ್ಣು ಮತ್ತು ತರಕಾರಿ ತನ್ನಿ. ಇವತ್ತಿಗೆ ಇದೆ, ನಾಳೆ ಇಂದ ತನ್ನಿ. ಇವತ್ತು ನಿಮಗೆ ರೆಸ್ಟ್. ನಾರಾಯಣ–ಬಸವನ ಹಾಗೆ ತಲೆ ಆಡಿಸಿದರು.

ತಲೆ ಇದ್ದವರು ಹೆಂಡತಿ ಮಾತಿಗೆ ತಲೆ ಆಡಿಸಲೇ ಬೇಕು, ಬೆಳಿಗ್ಗೆ–ಬಿಬಿಎಂಪಿ ಮನುಷ್ಯ ಗೇಟ್ ಹತ್ತಿರ ಬಂದು, ಆಂ–ಅಂಕಲ್ ವೇಸ್ಟ್, ವೇಸ್ಟ್, ಅಂಕಲ್, ಮತ್ತೆ ಜೋರಾಗಿ ಅಂಕಲ್ ವೇಸ್ಟ್, ವೇಸ್ಟ್, ಅಂಕಲ್ ಅಂತ ಕೂಗಿದ . ಶಾಂತಮ್ಮ–ರೀ ನಿಮ್ಮ undefined ಕರಿತಾ ಇರೋದು , ಹೋಗಿ ಕಸ ಇಟ್ಟು ಬನ್ನಿ. ನಾರಾಯಣ ರಾವ್ – ಉಗ್ರ ನರಸಿಂಹ ಆದರೂ, ಗೇಟ್ ಹತ್ತಿರ ಬಂದು, ಯಾರೂ ವೇಸ್ಟ್, ನೀನು ವೇಸ್ಟ್, ನಿಮ್ಮಪ್ಪ ವೇಸ್ಟ್, ಅಂತ ಜೋರಾಗಿ ವದರಲಿಕ್ಕೆ ಶುರು ಮಾಡಿದರು, ಕಸದ ಬುಟ್ಟಿನ ಅವನ ಕೈಗೆ ಕೊಡೊ ಬದಲು–ಅವನ ಮುಖಕ್ಕೆ ಬಿಸಾಕಿದರು. ಮುಖಕ್ಕೆ ಕಸ ಬಿದ್ದ ತಕ್ಷಣ, ಕಸದಪ್ಪ, ನಾರಾಯಣ ರಾವ್‌ಗೆ ಒಂದು ಕೆನ್ನೆಗೆ ಕೊಟ್ಟ. ನಾರಾಯಣ ರಾವ್ ಅವನ ಆಮೇಲೆ ಮುಗಿಬಿದ್ದರು. ಬೀದಿಯಲ್ಲಿ ಹೋಗೋರಲ್ಲ ನಿಂತು ಈ ಸರ್ಕಸ್ ನೋಡುತ್ತಾ ನಿಂತರು. ವದರಾಟ, ಚೀರಾಟ ಜಾಸ್ತಿ ಆಯಿತು, ಗಾಡಿಯಲ್ಲಿದ ಇಡೀ ಬೀದಿಯ ಕಸವೆಲ್ಲ–ಇವರ ಕಾಂಪೌಂಡ್ ನಲ್ಲಿ ಬಿತ್ತು.

ಶಾಂತಮ್ಮ, ಏನು ಇದು ಗಲಾಟೆ ಅಂತ ಹೊರಗೆ ಬರ್ತಾರೇ–ಮೈ ತುಂಬಾ ಕಸ ಹಾಕಿಕೊಂಡು– ಇಬ್ಬರು ಜಗಳ ಆಡುತ್ತಿದ್ದಾರೆ. ಶಾಂತಮ್ಮಗೆ ನಯ, ನಾಜೂಕು ಗೊತ್ತಿಲ್ಲ, ದೊಡ್ಡ ಗಂಟಲು, ಆದ್ರೆ ಒಳ್ಳೆಯ ಹೆಂಗಸು, ಶಾಂತಮ್ಮ ಬಾಯಿಗೆ ಬೀಳುವ ಧೈರ್ಯ ಯಾರಿಗಿದೆ. "ಯ್ ! ಕಸದಪ್ಪ ಹೊಗೋ ಆಚೆ". ಹೇಳಿದ ತಕ್ಷಣ, ಇಬ್ಬರು ಹೊರಗೆ ಹೋದರು–ಕಸದಪ್ಪ ಓಡಿದ–ಸಧ್ಯ ಪಾರಾದ, ಆದರೆ ನಾರಾಯಣ ರಾವ್..

ಶಾಂತಮ್ಮ–ರೀ–ನೀವು ಎಲ್ಲಿ ಹೋಗುತ್ತೀರಿ, ಹೊರಗಿನ ನಲ್ಲಿಯ ಪೈಪಿನಲ್ಲಿ ಸ್ನಾನ ಮಾಡಿ, ಆದರೆ ಮೊದಲು–ಕಸ ಬರಿಕೆ ಇಂದ ಕ್ಲೀನ್ ಮಾಡಿ. ಮನೆ ತುಂಬಾ ವಾಸನೆ ಆಗಿದೆ.

ನಾರಾಯಣ ರಾವ್, ಕಸ ಬರಿಕೆ ಹಿಡಿದುಕೊಂಡು, ಕಸವನ್ನೆಲ್ಲಾ ತಂದು ಒಂದು ಗುಂಪು ಮಾಡಿದ್ದರು. ಶಾಂತಮ್ಮ– "ಏನು, ಇದು ಮೂರು ತಾಸು ಆದರೂ, ಇವರು ತಿಂಡಿನೂ ತಿಂದಿಲ್ಲ–ಊಟದ ಸಮಯ ಆಯಿತು,

ಹೊರಗೆ ಬಂದು ನೋಡುತ್ತಾರೆ. ಕಾಂಪೌಂಡ್‌ನಲ್ಲಿ ಇದ್ದ ಕಸ ಮೂಲೆ ಗುಂಪು ಮಾಡಿದ್ದಾರೆ, ಆದ್ರೆ ಮನೆ ಇಂದ ಕಾಂಪೌಂಡ್ ಕಡೆ ಬದಲು–ಎಲ್ಲ ಮನೆಯ ಹೊಸ್ತಿಲ ಕಡೆ ಕಸವನ್ನು ತಳ್ಳಿದ್ದಾರೆ.

ಶಾಂತಮ್ಮ, ನೀವು ಆಫೀಸ್ನಲ್ಲಿ ಹೀಗೆ ಕೆಲಸ ಮಾಡುತ್ತೀರಾ, ನನಗೆ ಡಬಲ್ ಡಬಲ್ ಕೆಲಸ. ಸರೋಜಮ್ಮ ಹೇಳುತ್ತಿದ್ದರು, ಅವರ ಗಂಡನ ಕಂಪನಿಯಲ್ಲಿ ರಿಟೈರ್ ಆಗಿರೋರು ಕೆಲಸಕ್ಕೆ ಬೇಕಂತೆ, ಸಂಬಳ ನಾನೇ ಕೊಡುತ್ತೀನಿ–ನೀವು ಅಲ್ಲೇ ಹೋಗರಿ.


ಈ ಗಂಡಸರು ಇದ್ದ ಕಡೆ ಬರಿ ಸಂಗ್ರಾಮ–ಯುದ್ಧ–ಮಹಾಯುದ್ಧ–ಈ ಅಮೇರಿಕಾ ಮತ್ತು ಇರಾನ್‌ನ ಹೆಂಗಸರು ಆಳುತ್ತಿದ್ದರೆ–ಯುದ್ಧ ಆಗುತ್ತಿದಿಲ್ಲ–ಜಗತ್ತು ಚನ್ನಾಗಿರುತ್ತಿತು.

ಅವತ್ತೇ ಕೆಲಸಕ್ಕೆ ನಾರಾಯಣ ರಾವ್ ಸೇರಿಕೊಳ್ಳುತ್ತಾರೆ–ಮನೆಗೆ ಸಾಯಂಕಾಲ ಬರಬೇಕಾದರೆ–ಆಫೀಸ್ ನಲ್ಲಿ ಸಿಗೋ ರೆಸ್ಟ್ ಮನೆಯಲ್ಲಿ–ಖಂಡಿತ ಇಲ್ಲ. ಈ ಖುಷಿಗೆ ಮಲ್ಲಿಗೆ ಹೂವು ಮತ್ತು ಹೆಂಡತಿಗೆ ಇಷ್ಟ ಅಂತ ತುಪ್ಪದ ಮೈಸೂರ್ ಪಾಕ ಕೊಂಡು ಮನೆಗೆ ಹೋಗುತ್ತಾರೆ .

ಗಂಡ ಹೆಂಡತಿ ಇಬ್ಬರ ಮುಖದಲ್ಲಿ ಮತ್ತೆ ಮೊದಲ ಅದೇ ಪ್ರೀತಿ ಪ್ರೇಮ. ■


ಹಾರ್ಮೂಜ್ ಜಲಸಂಧಿ
KOTERBA
JEFFREYKOTERBA.com
CAGLE.com/KOTERBA


ಇರಾನ್
Cagle.com


ತೈಲ
ಇರಾನ್
ಜಾಗತಿಕ
ಅರ್ಥವ್ಯವಸ್ಥೆ
ಹಾರ್ಮೂಜ್
ಜಲಸಂಧಿ



ದಂಸಳ

- ✓ ಒಳ್ಳೆಯ ಯುದ್ಧ ಎಂದಾಗಲಿ ಅಥವಾ ಕೆಟ್ಟ ಶಾಂತಿ ಎಂಬುದಿಲ್ಲ.
- ✓ ಯಾವಾಗ ಯುದ್ಧ ಮಾಡಬೇಕು ಯಾವಾಗ ಮಾಡಬಾರದು ಎಂದು ಗೊತ್ತಿದ್ದವನಿಗೆ ಜಯ ಲಭಿಸುತ್ತದೆ.
- ✓ ವಾರ್ ಟೀಚಸ್ ಮೆನಿ ಲೆಸನ್ಸ್ – ಮೋಸ್ಟ್ಲಿ ಅಬೌಟ್ ವೈ ಇಟ್ ಶುಡ್ ಹ್ಯಾವ್ ಬೀನ್ ಅವಾಯ್ಡ್.
- ✓ ಯುದ್ಧ ರೋಮಾಂಚಕಾರಿ ಎಂದು ಅನಿಸುತ್ತದೆ ಅದರ ಅನುಭವ ಇಲ್ಲದವರಿಗೆ.
- ✓ ವಾರ್ಸ್ ಬಿಗಿನ್ ವೆನ್ ಯು ವಿಲ್, ಬಟ್ ದೆ ಡು ನಾಟ್ ಎಂಡ್ ವೆನ್ ಯು ಪ್ಲೀಸ್.
- ✓ ಓಲ್ಡ್ ಮೆನ್ ಸ್ಟಾರ್ಟ್ಸ್ ವಾರ್ಸ್ / ಯಂಗ್ ಮೆನ್ ಫೈಟ್ ಅಂಡ್ ಡೈ ರಿಚ್ ಮೆನ್ ಕೌಂಟ್ ದೇರ್ ಪ್ರಾಫಿಟ್ಸ್ / ವೈಲ್ ಪೂರ್ ಸಿಟ್ ಅಂಡ್ ಕ್ರೈ.
- ✓ ಶ್ರೀಮಂತರು ಹೋರಾಡುವಾಗ ಸಾಯುವವರು ಬಡವರು.
- ✓ ವೆನ್ ಐ ಡೈ ಅಂಡ್ ಗೊ ಟು ಹೆವನ್ ಐ ವಿಲ್ ಟೆಲ್ ಗಾಡ್: ಒನ್ ಮೋರ್ ಸೋಲ್ಜರ್ ರಿಪೋರ್ಟಿಂಗ್ ಫಾರ್ ಡ್ಯೂಟಿ ಸರ್. ಐ ಹ್ಯಾವ್ ಸರ್ವಡ್ ಮೈ ಟೈಂ ಇನ್ ಹೆಲ್.
- ✓ ನಾವು ಯುದ್ಧ ಮುಗಿಸದಿದ್ದರೆ ಯುದ್ಧ ನಮ್ಮನ್ನು ಮುಗಿಸುತ್ತದೆ.
- ✓ ದಿ ಟ್ರಾಜೆಡಿ ಆಫ್ ವಾರ್ ಈಸ್ ದಟ್ ಇಟ್ ಯೂಸಸ್ ಮ್ಯಾನ್ಸ್ ಬೆಸ್ಟ್ ಟು ಡು ಮ್ಯಾನ್ಸ್ ವರ್ಸ್ಟ್.
- ✓ ವಾರ್: ಎ ಮೆಸಾಕರ್ ಆಫ್ ಪೀಪಲ್ ಹು ಡೋಂಟ್ ನೊ ಈಚ್ ಅದರ್ ಫಾರ್ ದಿ ಪ್ರಾಫಿಟ್ ಆಫ್ ಪೀಪಲ್ ಹು ನೊ ಈಚ್ ಅದರ್ ಬಟ್ ಡೋಂಟ್ ಮೆಸಾಕರ್ ಈಚ್ ಅದರ್.
- ✓ ವಾರ್ ಡಸ್ ನಾಟ್ ಡಿಟರ್‌ಮಿನ್ ಹು ಈಸ್ ರೈಟ್–– ಓನ್ಲಿ ಹು ಈಸ್ ಲೆಫ್ಟ್.

■

# ರಣನೀತಿ

**ಗೀತಾ ಕುಂದಾಪುರ**

ನಾನು ಈ ಪ್ರಬಂಧ ಬರೆಯುವಾಗ ಇರಾನ್, ಅಮೆರಿಕಾ, ಇಸ್ರೇಲ್ ಯುದ್ಧ 27ನೇ ದಿನಕ್ಕೆ ಕಾಲಿಟ್ಟಿದೆ... ನೀವು ಇದನ್ನು ಓದುವಾಗ ಯುದ್ಧ ಮುಗಿದಿರಬಹುದು ಎನ್ನುವ ಆಶಯ.

ಕೆಲವು ದೇಶಗಳು ಯುದ್ಧದ ಪರಿಣಾಮವಾಗಿ ಹತ್ತಿ ಉರಿಯುತ್ತಿವೆ, ಹಲವು ದೇಶಗಳು ಯುದ್ಧದ ಭೀತಿಯಿಂದ ನಡುಗುತ್ತಿವೆ, ದೂರದ ದೇಶಗಳೂ ಪೆಟ್ರೋಲ್, ಡಿಸೀಲ್, ಎಲ್‌ಪಿಜಿ ಇಲ್ಲದೆ ತತ್ತರಿಸುತ್ತಿವೆ. ಮುಂಬರುವ ದಿನಗಳು ಇನ್ನೂ ಭೀಕರವಾಗುವ ಸಾಧ್ಯತೆ ಇದೆ ಎನ್ನುವ ಸುದ್ದಿಯೂ ಹರಿದಾಡುತ್ತಿದೆ.

ಯುದ್ಧ ನಡೆಯುತ್ತಿರುವುದು ನಮ್ಮ ಪಕ್ಕದ ದೇಶದಲಲ್ಲದಿದ್ದರೂ ಯುದ್ಧದ ಬಿಸಿ ಭಾರತಕ್ಕೂ ತಟ್ಟುತ್ತಿದೆ. ಯುದ್ಧದ ಆಗು ಹೋಗುಗಳನ್ನು ಚರ್ಚಿಸಲು, ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಲು ಬೆಂಗಳೂರಿನ ಲೇಔಟ್ ಒಂದರ ಕಿಟ್ಟಿ ಗ್ರೂಪಿನ ಮಹಿಳಾ ಮಣಿಗಳು ಸರೋಜಮ್ಮನ ಮನೆಯ ಹಾಲ್‌ನ ಫ್ಯಾನಿನಡಿಯಲ್ಲಿ ಸಭೆ ಸೇರಿದ್ದರು. ಹಬೆಯಾಡುವ ಕಾಫಿ ಕಪ್ ಇರಬೇಕಾದ ಕೈಯಲ್ಲಿ ತಣ್ಣನೆಯ ಜ್ಯೂಸ್ ಗ್ಲಾಸಿತ್ತು, ಟೇಬಲ್ಲಿನ ಮೇಲೆ ಬಿಸಿ ಬಿಸಿ ಪಕೋಡ, ಸಮೋಸ ಇರದೆ ಮಾರಿ, ಗ್ಲೂಕೋಸ್ ಬಿಸ್ಕಿಟ್ ಇತ್ತು.

ಯುಗಾದಿಗೆ ತೆಗೆದುಕೊಂಡಿದ್ದ ಹೊಸ ಸೀರೆಯನ್ನು ಉಟ್ಟುಕೊಂಡಿದ್ದ ಸರೋಜಮ್ಮ ಸೆರಗನ್ನು ಒಪ್ಪಗೊಳಿಸುತ್ತಾ ಅಲ್ಲಿ ಸೇರಿದ್ದ ಮಹಿಳಾ ಮಣಿಯರನ್ನು ಉದ್ದೇಶಿಸಿ.....?ನಮ್ಮಂತಹ ಹೋಂ ಮೇಕರ್ಸ್‌ಗೆ ಗ್ಯಾಸಿನದ್ದೇ ದೊಡ್ಡ ಚಿಂತೆ. ನಿನ್ನೆ ಗ್ಯಾಸಿನ ಬಿಸಿ ಮುಟ್ಟಿತು ಕಣ್ರೀ; ಗ್ಯಾಸ್ ಸಿಲಿಂಡರ್ ಬುಕ್ ಮಾಡಲು ಹೊರಟೆ, 35 ದಿನಗಳ ನಂತರ ಬುಕ್ ಮಾಡಿ ಎನ್ನುವ ಮೆಸೇಜ್ ಬಂತು, ಟೆನ್ಶನ್ ಜಾಸ್ತಿಯಾಗಿ ಬೀಪಿ ಚಕ್ ಅಂತ ಏರಿತು. ವಾಟ್ಸಾಪ್‌ನ ಎಲ್ಲಾ ಗ್ರೂಪಗಳಲ್ಲೂ ಖಾಲಿ ಸಿಲಿಂಡರುಗಳ ಉರುಳಾಟ, ನ್ಯೂಸ್ ಹಾಕಿದರೆ ಗ್ಯಾಸ್ ಸಿಲಿಂಡರಿಗಾಗಿ ಹೋರಾಟ ಕಾಣಿಸುತ್ತಿದೆ. ಇಂತಹ ಟೆನ್ಶನ್ ಪರಿಸ್ಥಿತಿಯಲ್ಲಿ ಸುಖ, ದುಃಖಗಳನ್ನು ಮೊದಲು ಹೇಳಿಕೊಳ್ಳೋಣ, ನಂತರ ಸೊಲುಶನ್ ಹುಡುಕೋಣ, ಯುದ್ಧದ ಸಮಯದಲ್ಲಿ ನಮಗೂ ಬೇಕು ರಣನೀತಿ. ಕೊನೆಯಲ್ಲಿ ಟೆನ್ಶನ್ ಕಡಿಮೆ ಮಾಡಲು ದುರಂಧರದ ಸಿನೆಮಾದ ಶರಾರ ಹಾಡಿಗೆ ಹೆಜ್ಜೆ ಹಾಕಿ ಸಭೆಯನ್ನು ಮುಕ್ತಾಯ ಮಾಡೋಣ' ಎಂದರು.

ಸರೋಜಮ್ಮ ಅಷ್ಟು ಹೇಳಿದ್ದೇ ತಡ ಕುರ್ಚಿಯಿಂದ ಟಪ್ಪನೆ ಎದ್ದು ಅಳುವ ದನಿಯಲ್ಲಿ ವಿಮಲ ಎಂದರು ನೆಕ್ಸ್ಟ್ ವೀಕ್ ಕಿಟ್ಟಿ ಪಾರ್ಟಿ ಇಟ್ಕೊಂಡಿದ್ದೆ ಕಣ್ರೀ, ರೆಡ್ ಡ್ರೆಸ್ ಮಿಂತ್ರಾದಿಂದ ತರಿಸಿದ್ದೆ, ರಿಟರ್ನ್ ಗಿಫ್ಟ್, ಗೇಮ್ಸ್ ಎಲ್ಲವೂ ರೆಡಿ ಮಾಡ್ಕೊಂಡಿದ್ದೆ. ಪಲಾವ್ ಮಾಡಿ ಎಲ್ರಿಗೂ ನನ್ನ ಕೈ ರುಚಿ ತೋರಿಸ್ಬೇಕಂತ ಇದ್ದೆ...ಆದ್ರೆ ಗ್ಯಾಸ್ ಮುಗಿಯುತ್ತಾ ಬಂತು, ಅಂಗಡಿಗಳಲ್ಲಿ ಎಲೆಕ್ಟ್ರಿಕ್ ಹೀಟರ್ ಖಾಲಿಯಾಗಿದೆ.' ವಿಮಲಾಗೆ ಏನು ಮಾಡಲು ಹೊರಟರೂ ಯಾವುದಾದರೂ ಸಮಸ್ಯೆ ಎದುರಾಗುತ್ತದೆ, ಹಾಗೇನು ಸಮಸ್ಯೆ ಇಲ್ಲದಿದ್ದರೂ ಅವರೇ ಸಮಸ್ಯೆಗಳನ್ನು ಹುಟ್ಟು ಹಾಕುತ್ತಾರೆ, ಚಿಕ್ಕ ಸಮಸ್ಯೆಯನ್ನೂ ದೊಡ್ಡದು ಮಾಡುತ್ತಾರೆ ಎನ್ನುವುದು ಅವರ ಗೆಳತಿಯರ ಅಭಿಪ್ರಾಯ.

ಕಿಟ್ಟಿ ಗ್ರೂಪಿನ ಅತ್ಯಂತ ಕಿರಿಯ ಸದಸ್ಯೆ ಅನಿತಾ ಖುಷಿಯಲ್ಲಿದ್ದಂತೆ ಕಾಣಿಸಿದಳು

ಏನೇ ಇಷ್ಟೊಂದು ಖುಷಿ' ಎಂದು ಅವಳನ್ನು ತಿವಿದಾಗ ಕಿವಿಗೆ ಹಾಕಿಕೊಂಡಿದ್ದ ಇಯರ್ ಫೋನನ್ನು ಎಳೆದು ತೆಗೆದು ?ಯುದ್ಧ ಶುರುವಾಗಿ ಗ್ಯಾಸ್ ಅಭಾವವಾಗಿದ್ದು ನಂಗಂತೂ ಒಳ್ಳೆಯದೇ ಆಯ್ತು' ವರ್ತಮಾನದಲ್ಲಿ ಇರುವ, ಭವಿಷ್ಯದಲ್ಲಿ ಬರಬಹುದಾದ ಗ್ಯಾಸ್ ಸಮಸ್ಯೆಯಿಂದ ಕಂಗಾಲಾದವರು ಅವಳನ್ನು ಕೆಂಗಣ್ಣಿನಿಂದ ನೋಡಿದರು. ಇದ್ಯಾವುದಕ್ಕೂ ಕೇರ್ ಮಾಡದೆ ತನ್ನದೇ ಸ್ಟೈಲಿನಲ್ಲಿ ಮುಖದ ಮುಂದೆ ಹಾರಾಡುತ್ತಿದ್ದ ತಲೆಕೂದಲನ್ನು ಬದಿಗೆ ಸರಿಸಿ ಯುದ್ಧ ನಡೆಯಬಾರದಿತ್ತು, ಆದರೂ ನಡೆಯಿತು, ಇನ್ನೂ ನಡೆಯುತ್ತಿದೆ, ನಂಗೂ ಬೇಜಾರಿದೆ, ಆದ್ರೆ ಕೆಲವು ಸಲ ಆಗುವುದೆಲ್ಲಾ ಒಳ್ಳೆಯದಕ್ಕೇ ಎಂದುಕೊಳ್ಳಬೇಕು' ಎಂದವಳು ಒಂದು ಕ್ಷಣ ತನ್ನ ಮಾತಿಗೆ ಪಾಸ್ ಕೊಟ್ಟು ನಮ್ಮ ಮನೆಯಲ್ಲಿ ನಾವಿಬ್ಬರೇ ಅಲ್ಲ, ನಮ್ಮೊಂದಿಗೆ ಅತ್ತೆ, ಮಾವಾನೂ ಇದ್ದಾರೆ ಅಂತ ಗೊತ್ತಲ್ವಾ ಅನ್ನ ಮಾಡ್ಲಿ, ಮುದ್ದೆ ಇರ್ಲಿ, ನಮ್ಮತ್ತೆ, ಮಾವಂಗೆ ದಿನಕ್ಕೆ ಎರಡು ಅಡ್ಗೆ ಬೇಕೇ ಬೇಕು, ಅದರೊಂದಿಗೆ, ಹಪ್ಪಳ, ಸಂಡಿಗೆ ಕರಿಯಬೇಕು. ಗಂಡಂಗೆ ರಾತ್ರಿಗೆ ಚಪಾತಿ ಬೇಕೇ ಬೇಕು, ಈಗ ಗ್ಯಾಸ್ ಸಿಗೋಲ್ಲ ಅಂತ ಒಂದೇ ಅಡ್ಗೆ ಮಾಡ್ತಿದ್ದೀನಿ, ರಾತ್ರಿ ಚಪಾತಿನೂ ಇಲ್ಲ, ದಿನಗಳು ಹೀಗೇ ಮುಂದುವರಿದರೆ ಸಾಕು' ಎಂದಳು. ಅವಳ ಮಾತಿಗೆ ತಲೆಯಲ್ಲಾಡಿಸಿದ ಮೀನಾ ಹೌದು ನಮ್ಮ ಮನೆಯಲ್ಲೂ ಅಷ್ಟೇ, ಗ್ಯಾಸ್ ಅಭಾವದಿಂದ ಅಡಿಗೆ ಮನೆಯ ಕೆಲಸ ಕಡಿಮೆಯಾಗಿದೆ, ನೆಟ್‌ಫ್ಲಿಕ್ಸ್ ಹಾಕ್ಸಿಕೊಂಡಿದ್ದೀನಿ, ದಿನಕ್ಕೊಂದು ಸಿನೆಮಾ ನೊಡ್ತಿದ್ದೀನಿ. ದುರಂಧರ್ 2 ಯಾವಾಗ ಓಟಿಟಿಯಲ್ಲಿ ಬಿಡುಗಡೆಯಾಗುತ್ತದೆ ಅಂತ ಕಾಯ್ತಿದ್ದೀನಿ.' ಅಂತೂ ಹತ್ತಿ ಉರಿಯುವ ಯುದ್ಧ ಮತ್ತು ಗ್ಯಾಸ್ ಅಭಾವವನ್ನು ಹೀಗೂ ಸುಖಿಸುವವರಿದ್ದಾರಲ್ಲಾ ಎನಿಸಿತು.



ಉಗುರಿನ ತುದಿಯನ್ನು ತೀಡುತ್ತಾ ಕೂತಿದ್ದ ಮೂಲೆ ಮನೆಯ ಕವಿತಾ ಪರಿಸ್ಥಿತಿಯನ್ನು ಹುಶಾರಾಗಿ ಹೆಂಡಲ್ ಮಾಡುವುದನ್ನು ಕಲಿಯಬೇಕಪ್ಪ....ನಾನಂತೂ ಅಡ್ಗೆ ಕಡ್ಮೆ ಮಾಡಿ ಸಾಕಷ್ಟು ಹಸಿ ತರಕಾರಿ, ಹಣ್ಣುಗಳನ್ನು ಕತ್ತರಿಸಿ ಇಡ್ತೀನಿ, ಇದ್ರಿಂದ ಗಂಡನ ಶುಗರ್, ಕೊಲೆಸ್ಟ್ರಾಲ್ ಕಂಟ್ರೋಲಿಗೆ ಬಂದಿದೆ ಕಣ್ರಿ, ಹೊಟೇಲುಗಳೂ ಒಂದೊಂದಾಗಿ ಬಂದ್ ಆಗಿ ಮಕ್ಕಳೂ ಮನೆಯಲ್ಲೇ ಮಾಡಿದ್ದನ್ನು ತಿನ್ನುತ್ತಿದ್ದಾರೆ? ಎಂದರು. ಕರೋನಾ ಕಾಲದಲ್ಲಿ ಅಡಿಗೆ, ಕೇಕ್ ಮಾಡಲು ಕಲಿತ್ತಿದ್ದರು ಕೆಲವರು; ಜೇಡರ ಬಲೆ ತೆಗೆಯುವ, ಮನೆ ಕೆಲಸ ಮಾಡುವ ಅಭ್ಯಾಸವನ್ನು ರೂಡಿಸಿಕೊಂಡಿದ್ದರು ಹಲವರು, ಕಾಲ ಪಾಠ ಕಲಿಸುತ್ತದಂತೆ, ನಾವು ಕಲಿಯಲು ಸಿದ್ಧರಾಗಬೇಕು ಅಷ್ಟೇ. ಗ್ಯಾಸ್ ಅಭಾವ ಬೆಂಕಿ ಇಲ್ಲದ ಅಡುಗೆ ಮಾಡುವುದರತ್ತ ನಮ್ಮನ್ನು ಹೊರಳಿಸಬಹುದು; ಹಸಿರು ತರಕಾರಿಗಳು, ಮೊಳಕೆ ಬರಿಸಿದ ಕಾಳುಗಳು, ಹಣ್ಣು ಹಂಪಲುಗಳನ್ನು ಹಸಿಯಾಗಿಯೇ

ತಿಂದು ಹೊಟ್ಟೆ ತುಂಬಿಸಿಕೊಳ್ಳಬಹುದಲ್ವಾ? ಇದೂ ಆರೋಗ್ಯಕ್ಕೆ ಒಳ್ಳೆಯದೇ ಎನಿಸಿತು.

ಕಿಟ್ಟಿ ಗ್ರೂಪಿನಲ್ಲಿ ಎಲ್ಲರಿಗಿಂತ ವಯಸ್ಸಾದ ಕಮಲಮ್ಮನ ಅಭಿಪ್ರಾಯ ಕೇಳಿದಾಗ ಯುದ್ಧ ಶುರುವಾದಾಗಿನಿಂದ ಸಂತೋಷವಾಗಿದ್ದೀನಿ ಕಣ್ರಿ, ಮಗ, ಸೊಸೆ ರಜಾ ಬಂತೆಂದರೆ ತಿರುಗಾಟಕ್ಕೆ ಹೋಗುತ್ತಿದ್ದರು, ಮನೆಯಲ್ಲಿ ನಾನು ಮೊಮ್ಮಕ್ಕಳನ್ನು ನೋಡಿಕೊಳ್ಳಬೇಕಿತ್ತು, ಈಗ ಪೆಟ್ರೋಲ್, ಡೀಸಿಲ್ ಸಿಗೋಲ್ಲಾ ಅಂತೆ... ಅವ್ರ ತಿರುಗಾಟವೆಲ್ಲಾ ಬಂದ್, ಮನೆಯಲ್ಲೇ ಕೂತು ಕ್ಯಾರಮ್, ಕಾರ್ಡ್ಸ್ ಆಡ್ತಿದ್ದಾರೆ. ಪ್ರಾಯದ ಕಾಲದಲ್ಲಿ ನಾನೂ, ನಮ್ಮೆಜಮಾನ್ರು ಬಹಳ ಆಟ ಆಡಿದಿವಿ' ಎಂದು ಕಣ್ಣು ಮಿಟುಕಿಸಿ ಕಿಸಕ್ಕನೆ ನಕ್ಕರು.

ಅತೃಪ್ತಿಯಿಂದ ಕುದಿಯುತ್ತಿದ್ದ ಉಮಾ ಟ್ಯೂಷ್ ಪೇಪರ್‌ನಿಂದ ಕಣ್ಣೊರೆಸಿಕೊಳ್ಳುತ್ತಾ ನೀವೆಲ್ಲಾ ಖುಷಿಯಲ್ಲಿದ್ದೀರಾ, ನನ್ನದೇ ತಾಪತ್ರಯ ಆಗಿರೋದು. ದುಬೈ ಟೂರ್ ಹಾಕಿದ್ದೆ, ಟಿಕೆಟ್ ಕ್ಯಾನ್ಸಲ್ ಆಗಿದೆ. ಮಕ್ಕಳಿಗೆ ರಜಾ ಬಂತೆಂದ್ರೆ ಟೂರ್ ಹೋಗ್ತಿದ್ದೆ, ಈ ಸಲದ ರಜಾಗೆ ನಮ್ಮ ಅತ್ತೆ, ಮಾವ ಇರೋ ಹಳ್ಳಿಗೇ ಹೋಗ್ಬೇಕು, ಅಲ್ಲಿಗೆ ಹೋಗೋದನ್ನ ನಾಲ್ಕಾರು ವರ್ಷಗಳಿಂದ ತಪ್ಪಿಸಿಕೊಳ್ತಿದ್ದೆ.' ಕರೋನಾ ಕಾಲದಲ್ಲಿ ಸಿಟಿಯಲ್ಲಿ ಇರುವವರು ಹಳ್ಳಿಗೆ ಹೊರಟಿದ್ದು ನೆನಪಾಯಿತು. ಯುದ್ಧದಿಂದ ಸಿಟಿಯ ಜನರು ಹಳ್ಳಿಯಲ್ಲಿ ಗೋಬರ್ ಗ್ಯಾಸ್, ಸೌದೆ ಒಲೆಯಲ್ಲಿ ಅಡಿಗೆ ಮಾಡುವ ಚಿತ್ರ ಕಣ್ಣ ಮುಂದೆ ಸಾಗಿತು, ಅದರೊಂದಿಗೆ ಹಳ್ಳಿಯಲ್ಲಿ ಗೋಡೆಗೆ ಸಗಣಿ ಬೆರಟೆ ತಟ್ಟಿದರೆ ಹೇಗೆ ಎನಿಸಿತು.

ಗ್ಯಾಸ್ ಪೆಟ್ರೋಲ್, ಡೀಸೆಲ್ ಅಭಾವದ ಬಿಸಿ ತಾಕಿದ್ದರೂ ಕಿಟ್ಟಿಯ ಗೆಳತಿಯರು ಕಷ್ಟದ ದಿನಗಳಲ್ಲೂ ಕೆಲವರಾದರೂ ಖುಷಿಯಲ್ಲಿ ಇರುವುದನ್ನು ನೋಡಿ ರಣನೀತಿಯ ಬಗ್ಗೆ ಚರ್ಚೆಯನ್ನು ಮುಂದಿನ ಮೀಟಿಂಗ್‌ಗೆ ವರ್ಗಾಯಿಸಲಾಯಿತು. ■

**ಕಗ್ಗದಲ್ಲಿ ಯುದ್ಧ**

ಸೈನಿಕನು ನೀನು ಸೇನಾಧಿಪತಿಯಲ್ಲಿಹನೋ
ಆಣತಿಯ ಕಳುಹುತಿಹನದನು ನೀನರಿತು
ಜಾಣಿನಧಟ ಪೋರು, ಸೋಲುಗೆಲವವನೆಣಿಕೆ
ಕಾಣಿಸದನಾಳ್ಕೆಯದು ಮಂಕುತಿಮ್ಮ //734//

ಯುದ್ಧವಾಗಲಿ ರಾಜವಿದ್ಯೆಯಾಗಲಿ ಶಾಸ್ತ್ರ
ವೃದ್ಧಿಯಾಗಲಿ ನರನಹಣೆಯಿನಳಿಯಿಸದಾ
ಕ್ಷುದ್ರಕಾರ್ಪಣ್ಯದನ್ಯಾಯದನಿತಿನಿತುಳಿಕೆ
ಯಿದ್ದೆಯಿರುವುದು ನಮಗೆ ಮಂಕುತಿಮ್ಮ //634//
(ಅನಿತಿನಿತುಳಿಕೆ – ಅನಿತು ಇನಿತು ಉಳಿಕೆ ಅಷ್ಟು ಇಷ್ಟು ಉಳಿದದ್ದು)

# ಈ ಯುದ್ಧ ಯಾಕ್ ಮಾಡ್ತಾರೋ....

**ಸುಮಾವೀಣಾ**

ಎಲ್ಲೋ ಹೋಗುವ ಅವಸರದಲ್ಲಿದ್ದಂತೆ ಪರಪರನೆ ಬಾಗಿಲು ಗುಡಿಸಿ ರಪರಪನೆ ಬಾಗಿಲಿಗೆ ನೀರುಹಾಕಿ ದಡಬಡನೆ ಪಾತ್ರೆ ತೊಳೆತಿದ್ಲು ಸುಬ್ಬಮ್ಮ. ಯಜಮಾನ್ರು ಮಗ ಪ್ರಜ್ವಳ ದುಬೈ ನಿಂದ ಬಂದಿದ್ದಾನೆ ಯುದ್ದ ಕಣ್ಣಾರೆ ಕಂಡವ್ನೆ ಏನ್ ಹೇಳ್ತಾನೆ ಕೇಳ್ಬೇಕು ಅಂತ ಕುತೂಹಲ ಅವ್ಳಿಗೆ. ಅವತ್ಯಾಕೊ ಸುಬ್ಬನ್ನ ಗ್ರಹಚಾರ ಚೆನ್ನಾಗಿರ್ಲಿಲ್ಲ ಪ್ರಜ್ವಳ ನಿದ್ರೆ ಮಾಡ್ತಿದ್ದ. ಏನ್ ಮಾಡದು ಕೆಲ್ಸ ಮುಗಿತಲ್ಲ ಅಂತ ಸುಬ್ಬಮ್ಮ ಮನೆ ಕಡೆ ಹೊರಟ್ಲು

ಪಕ್ಕದ ಮನೆಲಿ ಕೆಲಸ್ ಮಾಡ್ತಇದ್ದ ನಿಂಗಿನೂ ಕುತೂಹಲ ತಡಿಲಾರದೆ ಸುಬ್ಬಮ್ಮ ಆಚೆ ಬರೋದನ್ನ್ ಕಾಯ್ತಾ ಇವಳು ಕಂಡ್ ಕೂಡ್ಲೆ ಯುದ್ದ ಹೆಂಗಾಯ್ತಂತೆ ಸುಬ್ಬಮ್ಮ ಅಂದ್ಲು. ಸುಬ್ಬಮ್ಮನ್ನ ಕೇಳ್ಬೇಕ ಅಯ್ಯೋ ಸಿವನೆ ಪ್ರಜ್ವಳಪ್ಪ ಬಚಾವ್ ಆಗ್ ಬಂದಿರದೆ ದೊಡ ವಿಸ್ಯ ಕಣೆ ನಿಂಗಿ! ಪ್ರಜ್ವಳಪ್ಪಂಗು ಪೆಟ್ ಆಗ್ಯೆತೆ ಕಾಲ್ಗೆ ತಲೆಗೆಲ್ಲವ ಇವನ್ ಕೆಲಸ್ ಮಾಡ್ತಿದ್ ಆಯಿಲ್ ಕಂಪನಿ ತವನೆ ಬಾಂಬ್ ಬಿದು ಬುಡ್ತಂತೆ.... ಎನ್ನುತ್ತ ಲೊಚಗುಟ್ಟುತ್ತಿದ್ದರೆ

ನಿಂಗಿ "ಅಯ್ಯೋ ಪಾಪ ಇವ್ರುವೆ ಬಾಂಬ್ ಎಸಯಕೆ ಹೋಗಿದ್ರಂತ" ಅಂತ ಕೇಳಿದಳು. "ಅಲ್ಲ ಕಣೆ ಇವನು ಅಲ್ಲೆ ಇಂಜಿನಿಯರ್ ಅಲ್ವ ಅವ್ರ ಕಂಪ್ನಿ ಹತ್ರುಕೆ ಬಾಂಬ್ ಬಿದ್ದು ಬುಡ್ತಂತೆ ಆಗ ಚೂರು ಪಾರು ಪೆಟ್ಟಾಯ್ತು" ಅಂತ ಹೇಳ್ತಾರೆ ಗ್ಯಾನ್ ತಪ್ಪಿಬಿದ್ದಿದ್ದರಂತೆ ಇವರ್ನ ನೀರ್ ಹಾಕಿ ಎಚ್ಚರ ಮಾಡುದ್ರಂತೆ" ಎನ್ನುತ್ತಿದ್ದಂತೆ ನಿಂಗಿ ಗಾಬರಿಯಿಂದ "ಅಂದ್ರೆ ರಕ್ತ ಬಿಡ್ದಂಗೆ ಹರ್ದ್ಯೆತೆ ಅಲ್ವ! ಅಂದಿದ್ದಕ್ಕೆ ಸುಬ್ಬಮ್ಮ ಮತ್ತೆ ಮಾತು ಸುರು ಹಚ್ಕಂಡು "ಅಲ್ಲ ಕಣೆ ಬಿಡ್ದಂಗೆ ಹರಿಯಕೆ ಪ್ರಜ್ವಳ ಏನ್ ಪೆಟ್ರೋಲ್ ಬಾವಿನ ? ಔಷ್ದಿ ಹಾಕಿ ಬ್ರೀಡಿಂಗ್ ನಿಲ್ಸುದ್ರಂತೆ..! ಬ್ರೀಡಿಂಗ್ ನಿಂತ್ಕಂತಂತೆ ವಿಸ್ಯ ಗೊತ್ತ? ಪ್ರಜ್ವಳಪ್ಪನ್ ಕಂಪ್ನಿಲಿ ಮೇಲ್ ನರ್ಸ್ ಇದ್ನಂತೆ ಇವರ್ ಮೈಯ್ಯಲ್ಲಿ ರಕ್ತ ಹರಿಯದ್ ನೋಡಿ ಅವನೆ ಗ್ಯಾನ ತೆಪ್ಪಿದ್ನಂತೆ ಆಗ ಅವ್ನ ಗಾಯ ಆದೋರೆ ಏಳ್ಸಿ ನೀರ್ ಕುಡುಸುದ್ರಂತೆ. ಪ್ರಜ್ವಳಪ್ಪ ಇಲ್ಲಿಗ್ ಬಂದ್ ಮ್ಯಾಕೆ ಈಗ್ ಪರ್ವಾಗಿಲ್ಲ ಎಲ್ಲಬುಟ್ಟಂಗೆ ಬುಟ್ ಬಂದವ್ರಂತೆ ಮತ್ತೆ ಹೋಯ್ತಿನಿ ಅಂತಿದ್ರು ನನಗೂ ಏನೇನೋ ತೆಗೆದುಇಟ್ಕಂಡವ್ರಂತೆ ಹೋಗಿ ತಗಬರ್ಲಿ. ಆದರೆ ಇವರ್ ಜೊತೆಯೆವ್ನು ಇನ್ನುವೆ ತುಂಬಾ ಸೀರಿಯಸ್ ಆಗಿ ದುಬೈಲೆ ಅವರಂತೆ ಬಿಪಿ ಇರ್ಲಿಲ್ವಂತೆ ಅವರ್ ಮನೆಯವರು ಉಪಿನಕಾಯ್ ಉಪ್ಪು ತಿನ್ಸಿ ಆಸ್ಪತ್ರೆಗೆ ಕರ್ಕೊಂಡ ಹೋಗ್ತಿದ್ದಂಗೆ ವಾಂತಿ ಶುರುವಾಯ್ತಂತೆ ಅದೇನೊ ಬ್ರೆಡ್ ಟೆಸ್ಟು ಎಲ್ಲಾಮಾಡ್ತಾವರಂತೆ ಲಿವರ್ರು ಕೆಲಸ ಮಾಡ್ತಿಲ್ವಂತೆ ಅದಕ್ಕೆ ಫಿವರ್ ಅಂತೆ. ಐಸ್ಯೂಲಿ ಇಟ್ಕಂಡು ಡಾಕ್ಟರು ನೋಡ್ತಾ ಅವರೆ ಎಲ್ಲಾ ಕ್ಯೂರಿಂಗ್ ಆಗ್ತ್ಯೆತಂತೆ ಅಂತ ಮಾತಾಡ್ಕತಾ ಇದ್ರು ನಾನು ಅಂಗೆ ಕಸ ಹೊಡಿತ ಕೇಳ್ಸ್ ಕೊಂಡೆ" ಎನ್ನುತ್ತಾ ಎಲೆಅಡಿಕೆ ಚೀಲಕ್ಕೆ ಸುಬ್ಬಮ್ಮ ಕೈ ಹಾಕ್ತಾ ಇದ್ದಂಗೆ.

"ಅಲ್ಲ ಮೇಲ್ ನರ್ಸ್ ಅಂದರೆ ಏನಗ್ಗಿ.." ಅನ್ನೋ ನಿಂಗಿ ಮಾತಿಗೆ ಸುಬ್ಬಮ್ಮ "ನಂಗೂ ಗೊತ್ತಿಲ್ಲ ತಗೋ ಮೇಲೋ... ಕೆಳಗೊ... ಅಂತವ ಒಟ್ನಲ್ಲಿ ನರ್ಸು ಅಷ್ಟೆಯ. ಯುದ್ಧ ಸುರು ಅಯ್ತಿದ್ದಂಗೆ ದುಬೈನಾಗೆ ಅಕ್ಕಿ– ಬ್ಯಾಳೆ ಎಲ್ಲಾ ಜಾಸ್ತಿ ಆಗ್ಯೆತಂತೆ. ಮಕ್ಳಿಗೆಲ್ಲ ಆಲ್ ಲೈನ್ ಕ್ಲಾಸಂತೆ. ಅದ್ಯಾವ್ದೋ ಸಂದಿ ಒಳ್ಗೆ ಹಡಗೆಲ್ಲ ನಿಲ್ಕ್ಸಂಡು..

ಮುಂದುಕ್ಕೆ ಬುಡ್ತಿಲ್ವಂತೆ ಅದ್ಕೆ ಸಿಲಿಂಡ್ರು ಸಿಕ್ಕಕ್ಕುಲ್ವಂತೆ... ಬುಡು ಒಂದ್ ಲೆಕ್ಕುಕ್ಕೆ ಒಳ್ಳೆದೆ ಆಯ್ತು ಗ್ಯಾಸ್ ಇದ್ಬುಟ್ರೆ ಫೋನ್ ನೋಡದು ವಿಟೂಬ್ ನೋಡದು ಬೇಯಸದು.



ಬೇಯಸದು.. ಸುಮ್ಕೆ ಏಳ್ ಬಾರ್ದು ಅವರು ಮಾಡಿದ್ ಅಡುಗೆ ಎಲ್ಲಾ ರುಚಿಯಾಗಿರವ್ರು ಆದ್ರೆ ಅದು ಇದು ಅಂತ ಎರಡು ಡಬ್ ಪಾತ್ರೆ ಬೀಳವ್ರು. ಈಗ ಕರೆಂಟ್ ಸ್ಟವ್ ಬ್ಯಾರೆ ಕೆಟ್ಟೋಗ್ಯೆತೆ...ಓಟ್ಲುಗಳು ಎಲ್ಲ ಬಾಗ್ಲ್ ಹಾಕಂಡವಂತೆ ಸಿಲಿಂಡ್ರು ಸಿಕ್ಕಕ್ಕುಲ್ಲ ಅಂತ. ಈಗೇನು ಅನ್ನ– ರಸ ಮಾಡ್ಕತರೆ ಪುರಿ– ಗಿರಿ ತಿನ್ಕತರೆ ಸುಮ್ನೆ ಇರ್ತಾರೆ ವಸೀ.. ಪಾತ್ರೆ ಆಯ್ತುವೆ. ಅಯ್ಯೋ! ನಿನ್ನೆಯ ಮೈದುನ್ ಮಗ ಆಸ್ಪತ್ರೆಲ್ ಅಡ್ಮಿಂಡ್ ಅಗಿದಿನಿ ಚಿಕವ ಸಿಲಿಂಡ್ರು ಇಲ್ಲ ಅಂತ ಕ್ಯಾಂಟಿನ್ ಎಲ್ಲಾ ಬಾಗ್ಲ್ ಆಕಂಡವೆ ಊಟ ತಗಬಾ ಅಂತ ಫೋನ್ ಮಾಡಿದ್ದ ನಾನು ಊಟ ತಗಂಡ್ ಹೊಂಟ್ರೆ ಆಟವೆ ಸಿಗದ್ ಬ್ಯಾಡ್ವ ಏನ್ ಡಿಮ್ಯಾಂಡು ಅಂತೀಯ ಆಟದವ್ರಿಗೆ. ಬುಡು ಹೋಗ್ಲಿ ಟಿಬಿಲಿ ನೋಡ್ದೆ ಐವತ್ಸಾವ್ರ ಆಟಗಳು ನಿಂತ್ ಹೋಗವಂತೆ. ಆಟದವ್ರು ಪಾಡು ಹೇಳು ನಮ್ಮಂಗೆ ಚೀಟಿ ಪಾಟಿ ಹಾಕಂಡು ಸಿಟಿ ಒಳ್ಗೆ ಮಕ್ಳು ಓದುಸ್ಕಂಡು ಇರ್ತಾರೆ. ಇಸ್ಕೂಲ್ಗಳು ಬ್ಯಾರೆ ರಿಜಲ್ಟ್ ಆದ್ಮೇಕೆ ಪೀಜ್ ಕಟ್ಟಿ ಹೊಸ ಪುಸ್ತ್ಕ ಇಸ್ಕಳಿ ಅಂತಾರೆ ಆಟಗಳು ಬ್ಯಾರೆ ಓಡ್ತಿಲ್ಲ ಎಂಗ್ ಮಾಡ್ತಾರೋ ಭಗವಂತನಿಗೆ ಗೊತ್ತು! ಪಕ್ಕದ ಮನೆಯವ್ರು ಗೋಬಿ ಪಾನಿಪೂರಿ ಗಾಡಿ ಹಾಕ್ತಾವಲ್ಲ ಸಿಲಿಂಡ್ರು ಇದ್ರೆ ಕೊಡಿ ಜಾಸ್ತಿನೆ ಕಾಸ್ ಇಸ್ಕಳಿ ಅಂದ್ರು ನಮಗೆ ಇಲ್ಲ ನಿನಗೆಲ್ ಕೊಡನ ಅಂತ ಹೇಳ್ದೆ ಅದ್ರಲ್ಲೆ ಜೀವ್ನ ಮಾಡೋರು ಆಚೆ ಮನ್ನೆಯ ಸುಮ್ನೆ ಕೂತ್ಕಂಡವಲ್ಲ ಅಂತ ಕಳ್ಳು ಚುರುಕ್ ಅಂತು ಎರಡು ಸತಿ ಕುಕ್ಕರ್ ಕೂಗಿಸಿ ಕೊಟ್ಟೆ. ಈ ಗ್ಯಾಸ್ ಕೊಡೋರ್ಗಂತೂ ಬರ್ಬಾದ್ದೆ ಬಂದ್ ಬುಟ್ಟೈತೆ ಧಿಮಾಕು ಫೋನೆ ಎತ್ತಕ್ಕಿಲ್ಲ! ಅದ್ಯಾರೊ ಟ್ರಂಪ್ ಅಂಥ ಅವ್ನಲ್ಲ ಅವುನ್ದೆ ಅಂತೆ ಕರಾಮತ್ತು ಸುಮ್ಮುನಿರ್ದೋರ್ನು ಇರ್ವೆ ಬಿಟ್ಟುಕೊಂಡ ಹಾಗೆ ಅಂತ ಕಾಲು ಕೆರದು ಜಗಳಕ್ಕೆ ಕರದು ಈಗ ಮಕ್ಕೆ ಉಗುಸ್ಕೊತ ಅವ್ನೆ ಟಿಬಿಲಿ ತೋರ್ತಿರ್ತರೆ ಕೋಡಂಗಿ ಕತ್ ಹಾಕ್ದಂಗ್ ಕತ್ ಹಾಕ್ತಿರ್ತಾನೆ ಅನ್ನೋ ಮಾತಿಗೆ ನಿಂಗಿ ಕತ್ತಾಡಿಸುತ್ತಲೇ ನಮ್ಮಂಥ ಬಡುರು ಬಗ್ಗರ್ಗೆ ಎಂಥ ಪಜೀತಿ ಅನ್ನುತ್ತಿದ್ದಂತೆ ಯಾರೋ ಬಂದು ಸುಬ್ಬಮ್ಮನ ಏನೋ ಕೇಳ್ತಾ ಇದ್ರು ಅದಕ್ಕವಳು ಏನ್ ಬೇಕಾದರು ಎಲ್ಪ್ ಮಾಡನ ಅದ್ರೆ ಈ ಗ್ಯಾಸ್ ವಿಸ್ಯ ಬಿಟ್ಟು ಈ ಯುದ್ದ ಯಾಕ್ ಮಾಡ್ತಾರೋ ಎಲ್ಲದ್ರು ರೇಟ್ ಹೆಚ್ಸಿ ಜನಗಳ್ ಗೋಳೊ ಅನ್ಸಾಕೆ ಎಂದು ಜೋರಾಗೆ ಹೇಳ್ತಿದ್ಲು... ನಿಂಗಿನು ಹೂಗುಡುತ್ತಿದ್ದಳು.

■

# ತೆಂಗಿನ ಮರಕ್ಕೆ ಚೇಳು ಕುಟುಕಿದರೆ !

ಚಿತ್ರಾ ರಾಮಚಂದ್ರನ್

"ಹಲೋ ಶಾಂತೂ , ನಾನು ಸ್ವರ್ಣಾ ಕಣೇ !"

"ಸ್ವರ್ಣಾ ! ಇದೇನೇ ಇಷ್ಟೊತ್ತಿಗೆ ಅಪರೂಪಕ್ಕೆ ಕಾಲ್ ಮಾಡಿದ್ಯಾ ! ಬಿಡುವು ಸಿಕ್ತಾ ? ಅಡುಗೆ ಕೆಲಸವೆಲ್ಲ ಮುಗೀತಾ?"

"ಏನ್ ಅಡುಗೆ ಮಾಡೋದೆ ? ಅಡುಗೆಮನೆ ಬಂದ್ ಮಾಡಿ ಇವತ್ತಿಗೆ ಮೂರು ದಿನಗಳಾಯಿತು !"

"ಅಯ್ಯೋ ಯಾಕೆ ?"

"ಸಿಲಿಂಡರ್ ಅಭಾವ ! ಸ್ಪೇರ್ ಇಟ್ಟಿದ್ದೂ ಖಾಲಿ ! ಬುಕ್ ಮಾಡಿದ್ದು ಯಾವಾಗ ಬರತ್ತೋ ಗೊತ್ತಿಲ್ಲ. 'ಅಮ್ಮ, ನಿನ್ನ ಕೈ ಅಡುಗೆ ರುಚಿಯೋ ರುಚಿ', ಅಂತಾ ಚಪ್ಪರಿಸ್ಕೊಂಡು ತಿನ್ನುತ್ತಿದ್ದ ಅದೇ ಬಾಯಲ್ಲಿ,' ಪಂಚ ಭಕ್ಷ್ಯ ಪರಮಾನ್ನದ ಅವಶ್ಯಕತೆ ಏನಿತ್ತು ? ಒನ್ ಪಾಟ್ ಮೀಲ್ ಮಾಡಿದ್ರೆ ಆಗ್ತಿರ್ಲಿಲ್ವೇ ?'ಅಂತ ಕೂಗಾಡಿಬಿಟ್ಟ. 'ಅಮ್ಮನಿಗೆ ವಯಸ್ಸಾಯ್ತು! ಪರಿಸ್ಥಿತಿ ಅರ್ಥವಾಗಲ್ಲ ! ನೀನಾದ್ರೂ ಕಂಟ್ರೋಲ್ ಮಾಡ್ಬೇಕಿತ್ತು !' ಅಂತ ಹೆಂಡತಿಗೆ ಬೈದಿದ್ದ. ಮಗನ ನರಸಿಂಹಾವತಾರ ! ಮುಖ ಊದಿಸ್ಕೊಂಡ ಸೊಸೆ ! ಎಂತ ಗತಿ ಬಂತು ನೋಡು ನನ್ಗೆ ! ಎಲ್ಲೋ ನಡೀತಿದೆ ಯುದ್ಧ ! ಅದರ ಪರಿಣಾಮ ನಮ್ಮ ಮನೇಲಿ ವಾಗ್ ಯುದ್ಧ !"

"ಬೇಜಾರ್ ಮಾಡ್ಕೋಬೇಡ್ವೇ. ಮಕ್ಕಳೆಲ್ಲ ಒಳ್ಳೇವ್ರೆ ! ಕೆಲ್ಸದ ಒತ್ತಡ ! ಜೊತೆಗೆ ಈ ಪದಾರ್ಥಗಳ ಅಭಾವ ! ಆಫೀಸ್ ಕಡೆ, ಮನೆ ಕಡೆ, ಎಲ್ಲ ಕಡೆಯಿಂದ್ಲೂ ಸ್ಟ್ರೆಸ್ ಇದ್ರೆ ಎಂತಾವ್ರಿಗೂ ಕೋಪ ಬರಲ್ವೇ ? ಅದನ್ನ ಮನೇಲಿತಾನೆ ತೋರಿಸಕ್ಕಾಗೋದು ? ಎಲ್ಲ ಸರಿಹೋಗತ್ತೆ ಬಿಡು."

"ಇರ್ಲಿ ಬಿಡು ! ನಿನ್ನ ಕಥೆ ಏನು ಹೇಳು !"

"ನಮ್ಮನೇಲಿ ಸಧ್ಯ ಸ್ಪೇರ್ ಇದೆ ! ತುಂಬಾ ಜೋಪಾನ ಮಾಡಿ ಇಟ್ಟಿದ್ದೀವಿ ! ಇಂಡಕ್ಷನ್ ಸ್ಟವ್ ಇದೆ ! ಮ್ಯಾನೇಜ್ ಮಾಡ್ಕೋತಿದ್ದೀವಿ ! ನಿಮ್ ಮನೇಲಿ ?"

"ಕೇಳ್ಬೇಡಾ ನಮ್ಮನೆ ರಾಮಾಯಣ. ಮಗ ಸೊಸೆ ಇಬ್ರದ್ದೂ ಆಫೀಸಲ್ಲೆ ಊಟ ಆಗತ್ತೆ. ಮಗು ಬಾಕ್ಸ್ಲಿ ಸ್ಯಾಂಡ್ವಿಚ್, ಹಣ್ಣು, ಎನರ್ಜಿ ಬಾರ್ ಹಾಕಿ ಹಳಿಸ್ತಾರೆ. ನನ್ನೊಬ್ಬಳಿಗೆ ಕ್ಯಾರಿಯರ್ ಮೀಲ್ಸ್ ಬಂದ್ಬಿಡತ್ತೆ ! ಅಂತೂ ಊಟ ಹೇಗೋ ನಡೀತಿದೆ. ನಾಳೆಯಿಂದ ಅದೂ ಬರೋದಿಲ್ವಂತೆ ! ತಂದು ಕೊಡೊ ಹುಡುಗ ಹೇಳಿ ಹೋದ. ಮುಂದೆ ಹೇಗಪ್ಪಾ ಅನ್ನಿಸ್ಬಿಟ್ಟಿದೆ."

"ನಿನ್ನ ಮಗ ಸೊಸೆ ಏನೋ ಒಂದ್ಮಾಡ್ತಾರೆ ಬಿಡು !"

"ಇವತ್ತು ಕೆಲ್ಸ ಮುಗಿಸಿ ಬರೋವಾಗ ಎಲೆಕ್ಟ್ರಿಕ್ ಕುಕ್ಕರ್ ತರ್ತಾರಂತೆ ! ಚಿಕ್ಕಂದಿನಲ್ಲಿ ಸೌದೆ ಒಲೆ ನೋಡಿದ್ದಾಯ್ತು. ಆಮೇಲೆ ಸೀಮೆ ಎಣ್ಣೆ ಸ್ಟವ್, ಕಾಯಿಲ್ ಹೀಟರ್ ! ನಂತರ ಗ್ಯಾಸ್ ಸ್ಟವ್ ಬಂತು ! ಈಗ ಎಲೆಟ್ರಿಕ್ ಕುಕ್ಕರ್ ಅಂತೇ ! ಮೈಕ್ರೋವೇವ್ ಅಂತೆ ! ಇವರುಗಳ ನೂರಾರು ಇನ್ಸ್ಟ್ರಕ್ಷನ್ಸ್ ಕೇಳ್ಕೊಂಡು ಯೂಸ್ ಮಾಡ್ಬೇಕು ! ಒಂದೊಂದಕ್ಕೂ ಹೊಂದ್ಕೊಂಡು ನನಗೆ ಸಾಕಾಗಿದೆ. ಇಷ್ಟೆಲ್ಲಾ ಸಾಲದೂ ಅಂತ, ಮಗುವನ್ನ ಶಾಲೆಗೆ ಬಿಟ್ಟು ಕರೆತರೋ ಆಟೋದವ, ಗ್ಯಾಸ್ ಅಭಾವದಿಂದ, ಆಟೋ ಓಡ್ಸೋದು ನಿಲ್ಲಿಸಿ ಹಳ್ಳಿಗೆ ಹೋಗ್ತಾನಂತೆ! ಸಧ್ಯ ನನ್ ಮಗ ಎಲೆಕ್ಟ್ರಿಕ್ ಕಾರ್ ಕೊಂಡ್ಕೊಂಡಿದ್ದು ಒಳ್ಳೇದೇ ಆಯ್ತು ಅನ್ನು. ಕೆಲ್ಸದ ನಡುವೆ ತಾನೇ ಪುಟ್ಟೀನ ಶಾಲೆಗೆ ಬಿಟ್ಟು ವಾಪಸ್ ಕರ್ಕೊಂಡು ಬರ್ತಾನೆ. ಹೀಗೇ ಆದ್ರೆ, ಮುಂದೆ ಎಲೆಕ್ಟ್ರಿಸಿಟಿ ಅಭಾವ ಸಹ ಉಂಟಾದ್ರೆ ಹೇಗಪ್ಪಾ ಅನ್ನಿಸ್ಬಿಟ್ಟಿದೆ ! ಛೆ ! ಇದೆಂತಾ ಯುದ್ಧವೋ !"

"ಅಷ್ಟೆಲ್ಲ ಯೋಚ್ನೆ ಮಾಡಕ್ಕೆ ಹೋಗ್ಬೇಡವೇ ! ಪ್ರಪಂಚದ ಯಾವ ಮೂಲೇಲಿ ಏನೇ ಆದರೂ, ಪರಿಣಾಮವನ್ನ ಇಡೀ ಪ್ರಪಂಚವೇ ಅನುಭವಿಸ್ಬೇಕು ಎಂಬುದು ಈ ಕಲಿಗಾಲದ ನಿಯಮ ಆಗ್ಬಿಟ್ಟಿದೆ. ಏನ್ ಮಾಡೋದು ಹೇಳು ! ನೀನೇ ಹೇಳಿದ ಹಾಗೆ ಎಲ್ಲದ್ದಕ್ಕೂ ಹೊಂದ್ಕೊಂಡು ಹೋಗ್ತಾನೇ ಇರ್ಬೇಕು."

"ನಮ್ಮ ಲಕ್ಷ್ಮಿ ಹೇಳ್ತಿದ್ದ ಒಂದು ತಮಿಳು ಗಾದೆ ನೆನಪಿಗೆ ಬಂತು ನೋಡು ! ತೆಂಗಿನ ಮರವನ್ನ ಚೇಳು ಕುಟುಕಿದರೆ, ತಾಳೆ ಮರದಲ್ಲಿ ನೀಲಿಗಟ್ಟುತ್ತದಂತೆ ! ಎಲ್ಲೋ ನಡೀತಿದೆ ಯುದ್ಧ ! ಅದರ ಪರಿಣಾಮ ನಮ್ಮ ಮನೇಲಿ ವಾಗ್ ಯುದ್ಧ ! ಮನಸ್ಸಿಗೆ ಅಶಾಂತಿ."



"ಹೋಗ್ಲಿ ಬಿಡು ! ನಮ್ಮ ಲೈಫಲ್ಲಿ ಎಷ್ಟೋ ಇಕ್ಕಟ್ಟುಗಳನ್ನ ನೋಡಿದ್ದಾಯಿತು ! ದಿಸ್ ಟೂ ಶ್ಯಾಲ್ ಪಾಸ್ !"

"ನಿನ್ ಜೊತೆ ಮಾತಾಡಿ ಮನಸ್ಸು ಹಗುರಾಯಿತು ಕಣೆ. ಎಲೆಕ್ಟ್ರಿಕ್ ಕುಕ್ಕರ್ ಅಡುಗೆ ಮಾಡಿ ನೋಡಿ, ಮತ್ತೆ ನಿನಗೆ ಕಾಲ್ ಮಾಡ್ತೀನಿ !"

"ತಡಿ ತಡಿ ! ಈಗ್ಲೇ ವೋಟ್ ಆಫ್ ಥ್ಯಾಂಕ್ಸ್ ಹೇಳ್ಬೇಡ ! ಇಷ್ಟೊತ್ತು ಯುದ್ಧದಿಂದಾಗೋ ಋಣಾತ್ಮಕ ಪರಿಣಾಮಗಳ ಬಗ್ಗೆಯೇ ಮಾತಾಡಿದ್ದಾಯಿತು. ಕೆಲವೊಮ್ಮೆ ಧನಾತ್ಮಕ ಪರಿಣಾಮ ಸಹ ಉಂಟಾಗಬೋದು !"

"ಯುದ್ದದಿಂದ ಧನಾತ್ಮಕ ಪರಿಣಾಮವೇ ?"

"ಹೂಮ್ ! ವಿಶ್ವ ಸಮರದ ಸಮಯ ಅಕ್ಕಿಯ ಕೊರತೆ ಉಂಟಾಗಿತ್ತು. ಆ ಸಮಯದಲ್ಲೇ ಅಲ್ವೇ 'ಎಂ ಟಿ ಆರ್' ಹೋಟೆಲ್ನಲ್ಲಿ ಅಕ್ಕಿಗೆ ಬದಲು ರವೆ ಬಳಸಿ ಮಾಡೊ ರವೆ ಇಡ್ಲಿಯ ಅನ್ವೇಷಣೆ ಆಗಿತ್ತು ?"

"ಹೌದಲ್ಲಾ ? ನಮ್ಮನೇಲಿ ಎಲ್ರಿಗೂ ರವೆ ಇಡ್ಲಿ ಅಂದ್ರೆ ಪಂಚ ಪ್ರಾಣ !"

"ಇರು ! ಇನ್ನು ಒಂದೇ ಒಂದು ತಮಾಷೆ ಹೇಳ್ತೀನಿ ಕೇಳು. ಇತ್ತೀಚಿಗೆ ಬೇರೆಯೇ ಒಂದು ಯುದ್ಧ ನಡೆದಿತ್ತು ನೋಡು, ಅದೇ ಕರೋನಾ ಯುದ್ಧ ! ಆ ಸಮಯದಲ್ಲೂ ಅನೇಕ ವಸ್ತುಗಳ ಅಭಾವ ಏರ್ಪಡಬಹುದು ಎಂಬ ಗಾಳಿ ಮಾತು ಹರಡಿತ್ತು. ಅವುಗಳ ಪೈಕೆ ಒಂದೇ ಒಂದು ವಸ್ತುವಿಗೆ ಮಾತ್ರ ಅಪಾರ ಬೇಡಿಕೆ ಇತ್ತು ಪಾಶ್ಚಾತ್ಯ ದೇಶಗಳಲ್ಲಿ. ಲಾಕ್‌ಡೌನ್ ಜಾರಿಗೆ ಬರುವ ಮುಂಚೆ ಅಂಗಡಿಗಳಿಗೆ ನುಗ್ಗಿದ ಗ್ರಾಹಕರು ತಮ್ಮ ಕಾರ್ಟ್ ತುಂಬ ಅದೇ ವಸ್ತುವನ್ನು ತುಂಬ್ಕೊಂಡು ಹೋಗ್ತಿದ್ರಂತೆ. ಆ ವಸ್ತು ಏನಿರಬೋದು? ಎನಿ ಗೆಸ್ !"

"ತುಂಬಾ ಯೋಚಿಸಿದ್ರೂ ಗೆಸ್ ಮಾಡಕ್ಕೆ ಆಗ್ತಿಲ್ಲ ! ನೀನೇ ಹೇಳು !"

"ಚಿನ್ನಕ್ಕಿಂತ ಅಮೂಲ್ಯವಾದ ಆ ವಸ್ತು ಏನು ಗೊತ್ತೆ ? ಟಾಯ್ಲೆಟ್ ಪೇಪರ್ !"

ಹಗುರಾದ ಮನಸ್ಸಿನೊಂದಿಗೆ ಇಬ್ಬರು ಸ್ನೇಹಿತೆಯರೂ ನಗುನಗುತ್ತ ಮಾತು ಮೊಟಕಿಸಿ ಫೋನ್ ಇಟ್ಟರು.

# ನಾನ್ಯಾವೂರ ದಾಸಯ್ಯ ಅಲ್ವೇ...!

ವಿ.ವಿಜಯೇಂದ್ರ ರಾವ್

ಸಂಗಮ... ಸಂಗಮ... ಅನುರಾಗ ತಾನ ಸಂಗಮ, ಸಂಭ್ರಮ...ಸಂಭ್ರಮ... ರಾಗ ತಾನ ತಾಳ ಸಂಭ್ರಮ, ಎಲ್ಲೆಲ್ಲೂ... ಸಂತೋಷವೇ, ಎಲ್ಲೆಲ್ಲೂ... ಸಂಗೀತವೇ, ಎನ್ನುತ್ತಾ ನಮ್ಮ ಬಾಲ್ಯದಲ್ಲಿ ಕೇಳಿದ ಗುಂಗು ಇನ್ನೂ ಕಿವಿಯಲ್ಲಿ ಇರುವಾಗಲೇ........

ಈಗಿನ ಎಲ್ಲೆಲ್ಲೂ ಸಂಗ್ರಾಮವೇ..ಎಲ್ಲರೊಡನೆಯೂ ಸಂಗ್ರಾಮವೇ... ಇರುವುದನ್ನು ಗಮನಿಸಿ ಮನಸ್ಸು ಖಿನ್ನವಾಗುತ್ತಿದೆ. ಅತ್ತ ಅಮೆರಿಕ– ಇರಾನ್, ಇಸ್ರೇಲ್– ಲೆಬನಾನ್, ರಷ್ಯಾ– ಉಕ್ರೇನ್, ಪಾಕಿಸ್ತಾನ– ಆಫ್ಘಾನಿಸ್ತಾನ, ಸುಮ್ ಸುಮ್ಮನೆ ಕೆಣಕಿದರೆ ಭಾರತ– ಪಾಕಿಸ್ತಾನ, ದ.ಕೊರಿಯಾ– ಉ.ಕೊರಿಯಾ ಗಳ ನಡುವೆ ಸಂಗ್ರಾಮ ನಡೆಯುತ್ತಲೇ ಇದೆ.




ನಂತರ.. ಇನ್ನು ಭಾಷೆ– ಭಾಷೆಗಳ ನಡುವೆ, ನದಿಯ ನೀರಿನ ಹಂಚಿಕೆಯ ಬಗ್ಗೆ, ಅಣೆಕಟ್ಟು ಗಳ ಎತ್ತರದ ಬಗ್ಗೆ, ಆಚಾರ ವಿಚಾರಗಳ ಬಗ್ಗೆ, ಉತ್ತರ– ದಕ್ಷಿಣ ಭಾರತದ ನಡುವಿನ ಅಂತರದ ಬಗ್ಗೆ ಇನ್ನೂ ಹಲವಾರು ವಿಚಾರದ ನಡುವೆ ದಿನನಿತ್ಯ ನಡೆಯುವ ಸಂಗ್ರಾಮಗಳನ್ನು ನೋಡಿಕೊಂಡೇ ಇದ್ದೇವೆ.

ಆದರೆ... ಇತ್ತೀಚಿನ ಅಮೆರಿಕ, ಇಸ್ರೇಲಿನೊಂದಿಗೆ ಇರಾನ್ ನಡೆದ ಸಂಗ್ರಾಮದ ಪರಿಣಾಮ ಇಡೀ ವಿಶ್ವವನ್ನೇ ಆವರಿಸಿದೆ ಎಂದರೆ ತಪ್ಪಾಗಲಾರದು. ಆಯಾ ದೇಶದ ಜನರ ಸಾವು, ಶಸ್ತ್ರಾಸ್ತ್ರಗಳ ನಾಶ, ಜನಜೀವನದ ಅಸ್ತವ್ಯಸ್ತತೆ ಜೊತೆಗೆ ಅಲ್ಲಿನ ತೈಲಘಟಕ, ಕೈಗಾರಿಕಾ ವಲಯಗಳ ನಾಶ, ಮುಂತಾದವುಗಳ ಪರಿಣಾಮ ಇಡೀ ವಿಶ್ವಕ್ಕೆ ಆವರಿಸಿ..ಅದು ಎಲ್ಲರ ಅಡಿಗೆಮನೆ ವರೆಗೂ ಬಂದು ನಿಂತಿದೆ. ಧಾರಾಳವಾಗಿ ಗ್ಯಾಸ್ ಬಳಸುತ್ತಿದ್ದವರಿಗೆ ಕೈ ಹಿಡಿದ ಹಾಗೆ ಆಗಿದೆ. ಸಿ ಎನ್ ಜಿ ಅಭಾವದಿಂದ ಆಟೋ ಚಾಲಕರ ಪರದಾಟ ಮುಗಿಲು ಮುಟ್ಟಿದೆ.

ಇದುವರೆಗೂ ಹೇಗೋ ಏನೋ ನಂಗೆ ಗೊತ್ತಿಲ್ಲ, ಆದರೆ ನನ್ನ ಪ್ರೀತಿಯ ಗಂಡಸರಿಗೆ ಒಂದು ಕಿವಿ ಮಾತು, ಹತ್ತಿರ ಬಂದು ಕೇಳಿಸಿಕೊಳ್ಳಿ. (ಗ್ಯಾಸ್ ಅಭಾವದಿಂದ ಅನೇಕ ಹೋಟೆಲ್‌ಗಳು ಮುಚ್ಚಿವೆ. ನಮ್ಮ ಮೆಚ್ಚಿನ ದೋಸೆ ಮಾಸ್ಟರ್ ಹೋಟೆಲ್ ಮುಚ್ಚಿದೆ. ತೆಗೆದಿರುವ ಹೋಟೆಲ್ ಗಳಲ್ಲೂ ಸಹ ನಮಗೆ ಇಷ್ಟವಾಗುವ ತಿನಿಸುಗಳು ಸಿಗುತ್ತಿಲ್ಲ. ಆದ್ದರಿಂದ ನಿಮ್ಮ ನಿಮ್ಮ ಹೆಂಡತಿಯರ ಜೊತೆಗೆ ಆದಷ್ಟು ಸಂಗ್ರಾಮ ಘೋಷಣೆ ಮಾಡಬೇಡಿ, ಅಕಸ್ಮಾತ್ ಮಾಡಿದ್ದರೆ, ತಕ್ಷಣವೇ ಕದನ ವಿರಾಮವನ್ನು ಘೋಷಿಸಿ, ಯಾಕೆಂದರೆ.. ಹೊರಗೆ ಹೋಟೆಲ್ ನಲ್ಲಿ ನಮಗೆ ಬೇಕಾದ್ದೆಲ್ಲಾ ಸಿಗುತ್ತಿಲ್ಲ, ಮನೆಯಲ್ಲಿ ಸಿಗುವುದನ್ನೇ ಮಹಾಪ್ರಸಾದವೆಂದೆಣಿಸಿ ಭುಂಜಿಸಿದರೆ, ನಿಮ್ಮ ಹೊಟ್ಟೆಗೂ ಕ್ಷೇಮ, ನಿಮಗೂ ಯಾವುದೇ ಗ್ಯಾಸ್ಟ್ರಿಕ್ ತೊಂದರೆ ಇಲ್ಲದೆ ಜೀವನ ಸಾಗುತ್ತದೆ..!) ಏನೋ ಹೇಳಬೇಕೊ ಅನ್ನಿಸ್ತು , ಅದಕ್ಕೆ ಹೇಳಿದೆ. ಇದನ್ನು ಪಾಲಿಸುವುದು ಬಿಡುವುದು ನಿಮ್ಮ, ನಿಮ್ಮ ವಿವೇಚನೆಗೆ ಬಿಟ್ಟದ್ದು.

ಅಷ್ಟಕ್ಕೂ ನಿಮಗೂ, ಆ ಟ್ರಂಪಣ್ಣಂಗೂ ಬುದ್ದಿ ಹೇಳಲು ನಾನ್ಯಾವೂರು ದಾಸಯ್ಯಾ ಅಲ್ವೇ....!

# ವಾರ್ ಅಂಡ್ ಪೀಸ್ ! ಪೀಸ್ !!

✍ ಗಣೇಶ ಹೆಗ್ಗಡೆ

ಇತ್ತೀಚೆಗೆ, ಅಮೆರಿಕ ಮತ್ತು ಇರಾನ್ ನಡುವೆ ನಡೆದ ಭೀಕರ ಯುದ್ಧಕ್ಕೆ ನಲ್ವತ್ತೈದು ದಿನಗಳ ಕದನ ವಿರಾಮ ಘೋಷಣೆಯಾಗಿದ್ದಕ್ಕೆ ನಿಟ್ಟುಸಿರು ಬಿಟ್ಟ ಜನ ಸಾಮಾನ್ಯರ ಪೈಕಿ ನಾನೂ ಒಬ್ಬ, ಆದರೆ ನಲ್ವತ್ತೆಂಟು ವರ್ಷಗಳಿಂದ ಅಂದರೆ ನನ್ನ ಪದ್ದಿಯ ಮದುವೆಲಾಗಾಯ್ತಿನಿಂದ ನಡೆಯುತ್ತಿರುವ ಕದನ ವಿರಾಮಕ್ಕೆ ಯಾವ ಸಂಧಾನಕಾರರೂ ಇದುವರೆಗೆ ಮುಂದೆ ಮುಂಚೂಣಿಯಲ್ಲಿ ನಿಂತಿಲ್ಲದಿರುವುದು ಅಷ್ಟೆ ಶೋಚನೀಯ. ಹೋಗ್ಲಿ ಬಿಡಿ.

ಈ ಯುದ್ಧದಿಂದಾಗಿ ನಾವು ತಟಸ್ಥ ರಾಷ್ಟ್ರವಾದರೂ ನಮ್ಮ ಬದುಕಿನ ಮೇಲೆ ದುಷ್ಪರಿಣಾಮವುಂಟಾಗಿ, ಶಾಂತಿ ಕದಡಿರುವುದಂತೂ ಸತ್ಯ. ಈ ಸಂದರ್ಭದಲ್ಲಿ ನಾನು ವಾರೆನೋಟದಿಂದ ವಾರ್ ನೋಟಕ್ಕೆ ದೃಷ್ಟಿ ಬದಲಿಸಿಕೊಂಡು, ವಾರ್ ಎಫೆಕ್ಟ್‌ನ ಕೆಲವು ಝಲಕುಗಳನ್ನು ನಿಮ್ಮ ಅವಗಾಹನೆಗೆ ತರಲು ಇಚ್ಛಿಸುತ್ತಿದ್ದೇನೆ.

**ಎಪಿಸೋಡ್ – 1**

'ಅಮ್ಮಾ, ಗಂಡಿನ ಕಡೆಯವರು ಬಂದ್ರೂಂತ ಕಾಣ್ಸತ್ತೆ. ಮನೆ ಮುಂದೆ ಜೋಡೆತ್ತಿನ ಗಾಡಿ ನಿಂತಂಗಾಯ್ತು'

'ಥೂ ಹೋಗೆ, ನಿನಗೆಲ್ಲೋ ಭ್ರಮೆ. ಈ ಮಾಡ್ರನ್ ಕಾಲದಲ್ಲಿ ಆಟೋ, ಓಲಾ, ಊಬರ್ ಇತ್ಯಾದಿ ಬಿಟ್ಟು ಜೋಡೆತ್ತಿನ ಗಾಡಿಯಲ್ಲೆ ಯಾಕೇ ಬರ್ತಾರೆ?'

'ವಾರ್ ಎಫೆಕ್ಟ್ ಕಣಮ್ಮ. ಗ್ಯಾಸ್ ಅಭಾವ ಅವರಿಗೂ ತಟ್ಟಿರ್ಬೇಕಮ್ಮ ಮತ್ತು ನೀನು ತಿಳಿದಿರೋ ಹಾಗೆ, ಇದು ಮಾಡ್ರನ್ ಕಾಲವಲ್ಲ, ಮಾ'ಡ್ರೋನ್' ಕಾಲ. ಇವರೇನೊ ಹಳ್ಳಿ ಬ್ಯಾಕ್‌ಗ್ರೌಂಡಿನವರು. ಹ್ಯಾಗೋ ಬಚಾವಾಗಿದ್ದಾರೆ.

'ಗಾಡಿಯಿಂದ ಮೊಲದು ಇಳಿದವನನ್ನು ಕೊಂಚ ದಿಟ್ಟಿಸಿ ನೋಡು. ಬಹುಷಃ ಅವನೇ ಮದುವೆ ಗಂಡಿರ್ಬೇಕು. ಬಿಳೀ ಕಚ್ಚೆ, ಪಂಚೆ, ಬಿಳೀ ಶರ್ಟ್, ಕರೀಕೋಟು, ಅದೇ ಬಣ್ಣದ ಟೊಪ್ಪಿಗೆ ಇವನ್ನೆಲ್ಲಾ ನೋಡಿದರೆ ಗಂಡಿಗೆ ಕಡು ಬೇಸಿಗೆಯ ಕಲ್ಪನೆಯೆ ಇಲ್ಲಾ ಎನಿಸುತ್ತಿದೆ. ನನಗೆ ಈಗ ಮೈಸೂರು ಮಲ್ಲಿಗೆಯ ಕವಿ ನರಸಿಂಹ ಸ್ವಾಮಿಗಳು ನೆನಪಾಗುತ್ತೆ. ಬಹುಷಃ ಇವನು ಆ ಕಾಲದ ಸಂಸ್ಕೃತಿಯನ್ನು ಇನ್ನೂ ಮರೆತಿಲ್ಲದವನು ಅಂತನ್ಸುತ್ತೆ. ನಿಮ್ಮಪ್ಪನಿಗೆ ತುಂಬಾ ಇಷ್ಟವಾಗ್ತಾನೆ. ಯಾರಿಗೆ ಗೊತ್ತು? ನಿನಗೆ ಅದೃಷ್ಟವಿದ್ದರೆ ತಲೆಗೆ, ಮಲ್ಲಿಗೆ ಹೂವನ್ನು ಮುಡಿಸಿದರೂ ಮುಡಿಸಿಯಾನು. ಮದುವೆಯಾದ್ಮೇಲೆ ನೀನೂ ಮತ್ತು ನಿನ್ನ ಗಂಡ ಜೋಡೆತ್ತಿನ ಗಾಡಿಯಲ್ಲಿ ಕುಳಿತು ಕಮರ್ಷಿಯಲ್ ಸ್ಟ್ರೀಟಿನಲ್ಲಿ ಷಾಪಿಂಗ್‌ಗೆ ಹೋಗುವ ದೃಶ್ಯ ಕಲ್ಪಿಸಿಕೊಂಡರೆ....ನನ್ನ ಮೈ ಝುಮ್ಮೆನಿಸುತ್ತದೆ.

"ಥೂ, ಹೋಗಮ್ಮ"

**ಎಪಿಸೋಡ್ – 2**

'ಅಂದ್ಹಾಗೆ ಹುಡುಗ ಏನ್ಮಾಡ್ಕೊಂಡಿದ್ದಾನೆ'

'ಹುಡುಗ ಸಾಫ್ಟ್‌ವೇರ್ ಇಂಜಿನಿಯರ್ರು. ಇಷ್ಟು ದಿನ ದುಬಾಯ್‌ನಲ್ಲಿ ಕೆಲ್ಸಕ್ಕಿದ್ದ. ಯಾವಾಗ 'ವಾರ್' ಶುರುವಾಯ್ತೊ ಧೃತಿಗೆಡದೆ, ಅಲ್ಲಿನ ಕೆಲಸಕ್ಕೆ ರಾಜೀನಾಮೆ ನೀಡಿ ನಮ್ಮ ದೇಶಕ್ಕೆ ಓಡಿ ಬಂದ ಪ್ರಥಮ ಹೆಗ್ಗಳಿಕೆ ಇವನದ್ದು. ಬ್ರೇವ್ ಫೆಲೋ!'

‘ಈಗ ಇಲ್ಲಿ ಜೀವನೋಪಾಯಕ್ಕೆ?’

ಅದನ್ನೇ, ಹೇಳೋಕೆ ಬಂದೆ ಹಾಗೆ ಬಂದ ಒಂದ್ವಾರದಲ್ಲೆ, ಹಾರ್ಡ್‌ವೇರ್ ಕಡೆ ಗಮನಹರಿಸಿ ಸೌದೆ, ಬೆರಣಿ, ತೆಂಗಿನಮೊಟ್ಟೆ, ಮರದಹೊಟ್ಟು, ಇತ್ಯಾದಿಗಳನ್ನು ನಮ್ಮ ತೋಟದಿಂದಲೇ ತರಿಸಿ ಸಿಟಿ ಸೆಂಟರಿನಲ್ಲಿ ವ್ಯಾಪಾರಕ್ಕೆ ಧುಮುಕಿ ಚೆನ್ನಾಗಿ ಕೈ ಕುದುರಿಸಿಕೊಂಡಿದ್ದ. ಆದರೆ ಈಗ ಕದನ ವಿರಾಮದ ದಿನಗಳಲ್ಲಿ ವ್ಯಾಪಾರ ಕೊಂಚ ಡಲ್ಲಾಗಿದೆ. ಈಗ ಯುದ್ಧ ಕಂಟಿನ್ಯೂ ಆಗಲಿ ಅಂತ ಕಂಡ ಕಂಡ ದೇವರಿಗೆ ಹರಕೆ ಹೊತ್ತಿದ್ದಾನೆ. ಇಂಟರೆಸ್ಟಿಂಗ್ ಫೆಲೋ!

‘ವೆರಿಗುಡ್ ಮೆ ಟ್ರಂಪ್ ಬ್ಲೆಸ್ ಹಿಮ್’

**ಎಪಿಸೋಡ್ – 3**

‘ಇದೇನ್ರಿ? ಪದ್ದಮ್ಮ, ನಿಮ್ಮೆಜಮಾನರು ಮನೆಯಿಂದ ಹೊರಗೆ ಹೋದ ಅರ್ಧ ಘಂಟೆಯಲ್ಲೇ ಕರ್ಚೀಫಿನಲ್ಲಿ ಮುಖ ಮುಖ ಮುಚ್ಚಿಕೊಂಡು ದಿಢೀರನೆ ಮನೆಗೆ ವಾಪಸ್ಸು ಬಂದಿದ್ದು, ಎಲ್ಲಾದ್ರು ಬಿದ್ರೇನ್ರಿ?




‘ನಿಮ್ಹತ್ರ ಮುಚ್ಚು ಮರೆಯಾಕೆ ಸೀತಮ್ಮ, ಇವರಿಗೆ ಭಾನುವಾರ ಬಂತೂಂದ್ರೆ ಹಾಳ್ಲು ಇಸ್ಪೀಟು ಬಡಿಯುವ ಚಟ. ಇವರು, ಇತರರ ತರಹ ರಮ್ಮಿ ಆಡದೆ, ಅದೇನೋ ಬುದ್ಧಿವಂತರ ಆಟವಂತೆ. ಟ್ವೆಂಟಿಏಯ್ಟ್ ಅಂತಾರೆ. ಆ ಬ್ಯಾಚಿನಲ್ಲಿ ಕುಳಿತರಂತೆ. ಮೊದಲನೇ ಆಟಕ್ಕೇ ವಳ್ಳೆಯ ಎಲೆಗಳು ಬಿದ್ದು, ಆಟ ಹದಿನಾಲ್ಕರವರೆಗೂ ಏರಿಸಿದರಂತೆ. ಟ್ರಂಪ್ ಹೇಳಿ ಎಂಬ ಒತ್ತಾಯಕ್ಕೆ ಟ್ರಂಪ್ಡ್ ಡೈಮೆಂಡ್! ಅಂತ ಎಲ್ಲಾ ಟೇಬಲ್ಲುಗಳಿಗೂ ಕೇಳಿಸುವಂತೆ ಕೂಗಿದರಂತೆ. ಮುಂದೇನಾಯ್ತೋ ಏನೋ ಒಂದೈದಾರು ಜನ ಸಿಟ್ಟಿನಿಂದ ಎದ್ದು ಬಂದು ದಬದಬ ಅಂತ ಇವರ ಮುಖ ಮೂತಿ ನೋಡದೆ ಚಚ್ಚಿ ಹಣ್ಣುಗಾಯಿ ನೀರುಗಾಯಿ ಮಾಡಿದರಂತೆ. ಇವರು ಗಾಬರಿಯಿಂದ ಎಲೆಗಳನ್ನು ಬಿಸಾಕಿ, ಮನೆಯ ಕಡೆ ಸ್ಪೀಡಾಗಿ ಓಡಿ ಬಂದರಂತೆ. ಆ ಟ್ರಂಪ್ ನಿಜಕ್ಕೂ ದೊಡ್ಡವನು ಕಣ್ರೆ. ಇವರ ಜೀವ ಹೋಗಲಿಲ್ಲ.

‘ನೋಡಿದ್ರಾ ಪದ್ಮಮ್ಮ, ಈ ವಾರ್ ಎಫೆಕ್ಟ್ ಕೇವಲ ಆಟೋ, ಡ್ರೈವರ್‌ಗಳಿಗೆ, ಹೋಟೆಲ್ ಮಾಲೀಕರಿಗೆ, ಪಾನಿಪೂರಿ ಅಂಗಡಿಯವರಿಗೆ ತಟ್ಟಿಲ್ಲ. ಹಸುಗೂಸಿನಂತಿರುವ ನಿಮ್ಮೆಜಮಾನರಿಗೂ ತಟ್ಟಿದೆ. ಅಂದ್ಹಾಗೆ, ಈಗ ಹ್ಯಾಗಿದ್ದಾರೆ?

‘ಮುಖ ಕ್ಲೀನಾಗಿ ತೊಳೆಸಿ, ಗಾಯಕ್ಕೆ ಆಯಿಂಟ್‌ಮೆಂಟ್ ಹಚ್ಚಿ ಪೇನ್ ಕಿಲ್ಲರ್ ಮಾತ್ರೆ ಕೊಟ್ಟು ಮಲಗಿಸಿದ್ದೆ. ಮಲಗಿದ್ದ ಇವರನ್ನು ಊಟಕ್ಕೆಬ್ಬಿಸಲು, ಎಲೆ ಹಾಕಿದ್ದೀನಿ. ಬನ್ರೀ ಅಂತಾ ಕೂಗಿದ್ದಕ್ಕೆ ಎದೆಯೆಂಬ ಶಬ್ಧ ಕೇಳಿ, ಕಿಟಾರನೆ ಕಿರುಚಿ, ಗಡಗಡನೆ

ನಡುಗಲು ಆರಂಭಿಸಿದ್ರು ಕಣ್ರೀ ಸೀತಮ್ಮ" ಗಾಬರಿಯಾಗ್ಬೇಡಿ ಪದ್ಮಮ್ಮ, ಇಲ್ಲೇ ಕಾಟನ್ ಪೇಟೆ ಮೇನ್ ರೋಡಿನಲ್ಲಿ ಟ್ರಂಪ್ ತಾಯಿತ ಕಟ್ಟೋ ಮಾಂತ್ರಿಕರ ಅಂಗಡಿಗಳಿವೆ. ಬೇಕಾದಷ್ಟು ಜನ ಅಟೋ ಚಾಲಕರು ಇಲ್ಲಿ ತಾಯಿತ ಕಟ್ಟಿಸಿಕೊಂಡ ಮೇಲೆ ಈಗ ಕದನ ವಿರಾಮ ಘೋಷಣೆಯಾದದ್ದು. ನಿಮ್ಮ ಜತೆಗೆ ನಾನೂ ಬರ್ತೀನಿ. ನೆರೆ ಹೊರೆಯವರು ಅಂದ್ರೆ ಅಷ್ಟೂ ಆಗಬ್ಯಾಡ್ವೇನ್ರೀ'

'ಥ್ಯಾಂಕ್ಸ್ ಸೀತಮ್ಮ'

**ಎಪಿಸೋಡ್ – 4**

'ಇಲ್ಲಿ ಗ್ಯಾಸ್ ಕಾಲೇಜು ಅಂದ್ರೆ ಎಲ್ಲಿ ಬರುತ್ತೆ ಸ್ವಾಮಿ'

ಇಲ್ಲೆ ಇಲ್ಲೇ ನೀವು ಬಹಳ ಹತ್ರ ಇದ್ದೀರಿ. ಸೀದಾ ಹೋಗಿ ಎಡಕ್ಕೆ ತಿರುಗಿಕೊಂಡರೆ ಯಾರನ್ನು ಕೇಳಿದ್ರು ಹೇಳ್ತಾರೆ. ಅಂದ್ಹಾಗೆ ಈ ವಿಳಾಸಾನ ಬೆಳಗಿನಿಂದ ಐದಾರು ಜನ ಆಟೋ ಚಾಲಕರು ವಿಚಾರಿಸ್ಕೊಂಡ್ರು. ಮೊನ್ನೆ ಪಿಯುಸಿ ರಿಸಲ್ಟ್ ಬಂದಿದೆ. ಕಾಲೇಜು ಆಡ್ಮಿಷನ್‌ಗೆ ತಾನೆ?

'ಛೆ ಛೇ ಅದಕ್ಕಲ್ಲಾ ಮಹಾಸ್ವಾಮಿ ಅಲ್ಲಿ ಗ್ಯಾಸ್ ! ಸಿಗುತ್ತೆ ಅಂಥಾ ಬೆಳಗ್ಗಿನಿಂದ ಗುಲ್ಲೆಬ್ಬಿದೆ ಅದಕ್ಕೆ....

* * *

'ಏನಣ್ಣ ಬೆಳಗ್ಗಿನಿಂದ ಕಾಣ್ತಾನೆ ಇರಲಿಲ್ಲ. ಎಲ್ಲಿ ಹೋಗಿದ್ರೀ?'

'ಆಟೋ ಹಿಂದೆ ಡಿಸ್‌ಪ್ಲೆ ಮಾಡಿದ್ದ ಬೋರ್ಡ್ ತೆಗೆಸೋಕ್ಕೆ'

'ಈ ಹಿಂದೆ, ತಂದೆ–ತಾಯಿಗಳ ಆಶೀರ್ವಾದ ಅಂತಾ ಇತ್ತಲ್ಲವೆ?

'ಹೌದು ಈಗ 'ಟ್ರಂಪ್'ನ ಆರ್ಶೀವಾದ ಅಂತ ಬರೆಸಿದ್ದೇನೆ'

***

"ಏ..ಏನಾ...ಗುಂಡೇಶೀ??

ನಿನ್ ಮದ್ವಿ ಆಗಿ ತಿಂಗಳಾತಲ್ಲೋ?? ಏನ್ಪಾ?? ಹೆಂಗೈತಿ ಮದ್ವಿ ಜೀವ್ನ?? ಅಂತ ಕೇಳಿದ್ರು ಗುಂಡೇಶಿ ಗೆಳೆಯರು..

ಏ..ಬಿಡ್ರಪಾ, ಸಾಕು ಸಾಕು ಅನಿಸ್ತತಿ, ಒಂದು ತಿಂಗಳೇ ಹತ್ತು ವರ್ಸದ್ಹಂಗಾಗೇತಿ, ಇನ್ನು ಸಿಲ್ವರು, ಗೋಲ್ಡನ್ನು, ವಾರ್ಷಿಕೋತ್ಸವ ಅಂತ ಅದು ಬ್ಯಾರಿ ಚಿಂತಿ..

ಹೆಂಡತೀ, ನೀ ಯಾಕ ಪ್ರಾಣ ಹಿಂಡುತೀ ಅನ್ನೂ ಹಂಗಾಗೇತೀ..

ಹ್ಞೂ.. ಅದ್ಕೇನು ಮಾಡ್ತೀಯಪಾ ಅಂದ್ರು ಮತ್ತೆ ಗೆಳೆಯರು..

ನಾನು ದೇವ್ರನ್ನ ಬೇಡ್ಕೋಳಾತೀನಿ, ಒಂದು ಛೊಲೋ ವರ ಕೊಟ್ಟು ಕಾಪಾಡು ಅಂತ..ಬರೀ ನನಗ ಮಾತ್ರ ಅಲ್ಲ, ನನ್ ಹೇಣ್ತೀಗೂ ಅಂದ ಗುಂಡೇಶಿ..

ಏನಪಾ, ಅಂಥಾ ಛೊಲೋ ವರ ನೀನ್ ಬೇಡೋದು..ಅಷ್ಟು ಪ್ರೀತಿ ನಿನ್ ಹೆಣ್ತಿ ಮೇಲೂ ಅಂತಂದ ಗೆಳೆಯರಿಗೆ ಗುಂಡೇಶಿ ಅಂದ..ನಂಗೂ, ನನ್ ಹೆಣ್ತಿಗೂ ಪೂರ್ತಿ ಮರೆವು ಬರ್ಬೇಕು, ನಾವಿಬ್ರೂ ಗಂಡ,ಹೆಣ್ತಿ ಅನ್ನೋದೇ ಮರ್ತು ಹೋಗ್ಬೇಕು ಅಂದವನ ಮಾತು ಕೇಳಿದ ಗೆಳೆಯರು ಸುಸ್ತಾದ್ರು.

**–ಸುಮನಾ**

# ಹೀಗೊಂದು ಯುದ್ಧ ಸಂವಾದ

**ಶರಣಬಸವೇಶ್ವರ ಅಂಗಡಿ**

ಮುಗುಟ ಖಾನ ಹುಬ್ಬಳ್ಳಿಯ ಮಟ ಮಟ ಮದ್ಯಾಣ ದಾಗ ಬಜ್ಜಿ ಬಂಡಿ ಬಾಬು & ಚಹಾದಂಗಡಿ ಚಂದ್ರು ಆಜೂ ಬಾಜೂ ನಿಂತಗೊಂಡ ಚಿಂತಿ ಮಾಡಕೊಂತ ಮಾತಾಡಾಕ ಹತ್ತಿದ್ರು ಮಗ್ಗಲದಾಗಿನ ಪೆಟ್ರೋಲ್ ಬಂಕಿನ ಬಸ್ಯಾ ಇವರ ಜೋಡಿ ನಿಂತಿದ್ದ ಬಾಬು ಬಾಂಡ್ಲಿಗೆ ಎಣ್ಣೆ ಹಾಕ್ಕೊಂತ "ಏನಪಾ ಚಂದ್ರು... ಈ ಎಣ್ಣೆ ರೇಟ್ ನೋಡಿದ್ರ ಬಜ್ಜಿ ಮಾಡಾಕ ಒಲ್ಲೆ ಅನಸ್ತದ" ಚಂದ್ರು; ಚಹದ ಕೇಟ್ಲಿ ತಿರಿಗಿಸ್ಕೊಂತ ಅದೇನು ಹೊಸಾದ ಬಿಡೋ ಯಪ್ಪಾ ಈ ಸೀಸನ್ ಸುರು ಆತಂದ್ರ ಹೀಂಗನ

ಬಾಬು: ಸೀಸನ್ನಾ? ಯಾವದು, ಮತ್ತ ಐಪಿಎಲ್ ಐತೇನ?

ಚಂದ್ರು: ಅಲ್ಲೋ ಮಾರಾಯ ಅಮೇರಿಕಾ ಇರಾನ ಇಸ್ರೇಲ್ ಯುದ್ಧ ದಫುಲ್ ಸ್ವಿಂಗ್ ಮ್ಯಾಚ್ ಮಿಸ್ಸೈಲ್ ಮ್ಯಾಚ್ ಮಿಸ್ಸೆಲ್ ಆಂದ್ರ ?

ಆವೇನ ವಾರ್ ಹೆಡ್ ಮಿಸ್ಸೈಲ್ ಯುದ್ಧ ತಲಿ ಕ್ಷಿಪಣಿ ಹೌದಾ? ಅವನ್ನ ಯಾಕ ಯುದ್ಧ ತಲಿ ಕ್ಷಿಪಣಿ ಅಂತಾರ?

ಅವುಗೊಳ ತಲ್ವಾಗ ಯುದ್ಧ ತುಂಬಿರ್ತದೇನ?

ಹಂಗ ಅಂದ್ರೆ. ನಿನಗ ಬಿಡಿಸಿ ಹೇಳೇಕಂದ್ರ ಮಿಸ್ಸೈಲ್ ಅಂದ್ರ ಒಂಥರಾ ಡೆಲಿವರಿ ಹುಡುಗ ಇದ್ದ ಹಾಂಗ. ಅದ್ರಾಗ ಫ್ಯುಯೆಲ್ ಆದ ಇಂಧನ ಅಂದ್ರ ಅವನಿಗೆ ಬೇಕಾದ ಊಟ, ಗೈಡನ್ಸ್ ಸಿಸ್ಟಮ್ ಅಂದ್ರ ಗೂಗಲ್ ಮ್ಯಾಪ್? ಪೆಟ್ರೋಲ್ ಬಂಕಿನ ಬಸ್ಯಾ ಬಾಯಿ ಹಾಕಿದ ಕರೆಕ್ಟ್ ಆದ್ರ ಎಲ್ಲಾ ಗಲಾಟೆ, ಡ್ರಾಮಾ ನಡಿಯೂದು ಮುಂದ ಇರೂ ಹೆಡ್ ನ್ಯಾಗ ಅದಕ್ಕೆ ಅದನ್ನ ವಾರ್‌ಹೆಡ್ ಅನ್ನೋದು.

ಮಿಸ್ಸೈಲ್ ಅಂದ್ರ ಸಾದಾ ಊಬರ್ ಡ್ರೈವರ್ ಹಾಂಗ ಶಾಂತಿಲಿಂದ ಓಡಕೊಂತ ಹೊಂಟಿರ್ತದ. ಅದರ ಮುಂದ ಕುಂತ ಪ್ಯಾಸೆಂಜರ್ ಮಾತ್ರ ಗುರಿ ಮುಟ್ಟಿದ ಮ್ಯಾಲ ಏನ್ ಮಾಡ್ತಾನಂತ ತಿಳಿಯೂದಿಲ್ಲ. ಕಡೀಕಿ ಹೇಳೇಕಂದ್ರ ನಮ್ಮ ಜೀವನದ ಹಾಂಗ ಇಲ್ಲಿ ಸೈತ ಎಲ್ಲಾ ಡ್ರಾಮಾ "ಹೆಡ್"ನ್ಯಾಗನ ನಡಿಯೂದು ಒಟ್ಟಾರೆ ನೋಡಿದ್ರೆ, ಇಂದಿನ ಯುದ್ಧ ಸ್ವಲ್ಪ "ವೀಡಿಯೋ ಗೇಮ್ ಲೆವೆಲ್ ಆಪ್" ತರ–ಆದ್ರೆ ಇಲ್ಲಿ ಲೈಫ್‌ಗೆ "ರಿಸ್ಟಾರ್ಟ್ ಬಟನ್" ಇಲ್ಲ ಅನ್ನೋದು ಮಾತ್ರ ನಿಜ!

ಇವಾಗಿನ ಯುದ್ಧ ಅಂದ್ರ ಹಿಂದಿನ ಕಾಲದಂಗ ಕತ್ತಿ, ಗುರಾಣಿ ಹಿಡಕೊಂದ ಕುದರಿ ಮ್ಯಾಲ ಕುಂತು ಹೋಗೂದಲ್ಲ ರಾಜರೂ ಇಲ್ಲ ಹೀರೋ ಎಂಟ್ರಿನೂ ಇಲ್ಲ. "ಮನ್ಯಾಗನ ಕುಂತು ಯುದ್ಧ ಮಾಡೂ" ಜಮಾನ! ಒಂದ ರೀತಿಲೆ ವರ್ಕ್ ಫ್ರಾಮ್ ಹೋಮ್. ಅಮೆರಿಕಾ ಕಳಿಸೂ ಡ್ರೋನ್ ಎಷ್ಟು ಸ್ಮಾರ್ಟ್ ಇರ್ತಾವಂದ್ರ ನಮ್ಮ ಮೊಬೈಲ್‌ಗೆ ಬರೋ ಅಪ್ ಡೇಟ್ ಗಿಂತ ಲಗೂನ ತಮ್ಮದ ಅಪ್‌ಡೇಟ್ ಮಾಡ್ಕೊತಾವಂತ.

ಇಸ್ರೇಲ್ ಡ್ರೋನ್ ಗೂಗಲ್ ಮ್ಯಾಪ್ ಮೀರಸ್ತಾವ. ಟಾರ್ಗೆಟ್ ತಪ್ಪಿದ್ರ "ಅಯ್ಯೋ ಸಾರಿ, ಇನ್ನೊಂದು ದಾರೀಲೆ ಹೋಗೂಣು ಅಂತಾವ. ಇರಾನ್ ಅನಕಾ ನಮ್ಮ ಹುಬ್ಬಳ್ಳಿ–ಧಾರವಾಡ ಸ್ಟೈಲ್–ಜುಗಾಡ್ ಕಿಂಗ್! "ಒಂದೇ ಸಾರಿಗೆ ಸಾವಿರ ಡ್ರೋನ್ ಹಾರ್ಸೋಣು, ಒಂದಾದ್ರೂ ತಗಲ್ತಾವ" ಅನ್ನೂ ಲಾಜಿಕ್. ಪಕ್ಕಾ ಡಿಸಕೌಂಟ್ ಸೇಲ್ ಒಂದು ಕೊಂಡ್ರ ಎರಡು ಫ್ರೀ"

ಇದ್ದಾಂಗ ಇಲ್ಲಿ ಮಜಾ ನೋಡ್ರಿ ಕೋಟಿ ಕೋಟಿ ಬೆಲೆ ಬಾಳೂ ಕ್ಷಿಪಣಿಗಳು, ಈ ಚಿಲ್ಲರ ಡ್ರೋನ್ ಗೊಳ ಹೊಡ್ಯಾಕ ಹೋಗ್ತಿರದು.! ಅಂದರ, ಒಂದು ದೊಡ್ಡ ಫಾರ್ಚುನರ್

ಕಾರು, ಆಟೋದ ಮ್ಯಾಲ ಅಟ್ಯಾಕ್ ಮಾಡಿದ್ದಂಗ ಇನ್ನೂ ಮಜಾ ಏನ ಅಂದ್ರ ಹಿಂದ ಯೋಧರು ಯುದ್ಧದ ಮೈದಾನದೊಳಗ ಹೊಡದಾಡ್ತಿದ್ರು. ಮಣ್ಣು, ಬೆವರು, ಧೈರ್ಯ– ಅದೇ ಯುದ್ಧ! ಈಗ ಯಾರೂ ಕಾಣಿಸೂದಿಲ್ಲ. ಎಲ್ಲರೂ ದೂರ ಕುಂತು ಜಾಯ್ ಸ್ಟಿಕ್ ಹಿಡ್ಕೊಂಡು "ಗೇಮ್" ಆಡ್ತಿರ್ತರ ನಡುವ ಕುಂತಗೊಂಡವಾಂ ಒಬ್ಬ "ಮೈಕ್ ಮ್ಯೂಟ್ ಮಾಡ್ರಿ!" ಅಂತ ಕೂಗ್ತಿರ್ತಾನೇನ? ಬಸ್ಯಾನ ಅನುಮಾನ ಒಟ್ಟಾರೆ ಇವತ್ತಿನ ಯುದ್ಧ ನೋಡ್ರಿ ಪಕ್ಕಾ "ವೀಡಿಯೋ ಗೇಮ್ ಇದ್ದಾಂಗ. ಆದ್ರ ಇಲ್ಲಿ ಒಂದೇ ವ್ಯತ್ಯಾಸ "ರೀಸ್ಟಾರ್ಟ್" ಬಟನ್ ಇರಂಗಿಲ್ಲ...



ಬಾಬು: ಅದಕ್ಕೇನಾ ಎಣ್ಣೆ rate ಜಿಗಿತ?

ಚಂದ್ರು: ಹೌದು! ಮತ್ತ

ಬಾಬು: ನನಗೆ ಒಂದು doubt... ಅವರು ಯುದ್ಧ ಯಾಕ ಮಾಡ್ತಾರ

ಚಂದ್ರು: simple ಅವರಿಗೆ power ಬೇಕು...

ನಮಗ power bill ಕಡಿಮೆ ಆಗ್ಬೇಕು

ಬಾಬು: ಅಯ್ಯೋ ಖರೆ ಉಕ್ರೇನ್ ಯುದ್ಧ ಆಗಾಗನೂ ಇದ story ಅಲ್ಲೇನ?

ಚಂದ್ರು: ಪಕ್ಕಾ

ಬಾಬು: ಚಹಾ ಕುಡ್ಕೊಂತ ಇನ್ನೊಂದು ನೆನಪಾತು ಅಮೆರಿಕಾ ಮೊದಲು ವೆನೆಜುವೆಲಾದಾಗನೂ ಹೀಂಗ ಮಾಡಿತ್ತು.

ಚಂದ್ರು: ಹೌದು!

ಅಲ್ಲಿ ಅರಾಮಿಲೆ ಗೆದ್ರು confidence ಹೆಚ್ಚಾತು.

ಬಾಬು: (ಸೂಕ್ಷ್ಮವಾಗಿ) ಅಂದರ ಅವರಿಗೆ ಅದು practice match...ನಮಗೆ final bill?

ಚಂದ್ರು: correct!

ಬಾಬು: ಇಲ್ಲಿ ಮಜಾ ಏನಪಾಂತಂದ್ರ ಅವರು hitಗಾಗಿ ಯುದ್ಧ ಮಾಡ್ತಾರ

ಚಂದ್ರು: ನಾವು ಇಲ್ಲಿ oil save ಮಾಡಾಕ bike park ಮಾಡ್ತೀವಿ ಬಂಕ್ ಬಸ್ಯಾ ನಾನು ಕಸ್ಟಮರ್ಗೆ "ಪೆಟ್ರೋಲ್ ಇವತ್ತು rate ಹೆಚ್ಚಾಗದ್ರಿ" ಅಂದ್ರ ಅವರು ಯಾಕ? ಅಂತಾರ. "ಯುದ್ಧ ರೀ" ಅಂದ್ರ ಸುಮ್ನಾಗ್ತಾರ.

ಬಾಬು: ನನಗೆ ಖರೇನ tension ಆಗ್ತದಪಾ ನಾಳೆ ಏನಾಗತದೋ ಗೊತ್ತಿಲ್ಲ...

ಚಂದ್ರು: ನಾಳಿದು ಬಿಡೋ ಇವತ್ತು gas cylinder price ನೋಡೋ

ಬಾಬು: war ಯಾವಾಗ ಮುಗೀತದ?

ಚಂದ್ರು; ಯಾರಾದ್ರೂ ಗೆದ್ದ ಮ್ಯಾಲ ಅಲ್ಲ. ಎಲ್ಲರೂ ಸುಸ್ತಾದ ಮ್ಯಾಲ. ■

# ಸೋಮು ಮನೆ ಗ್ಯಾಸಾಯಣ

**ಸುಕೇಶವ**

ಸೋಮು ಆಫೀಸಿನ ಕೆಲಸಾನ ಮನೇಲಿ ಮಾಡ್ತಿದ್ದ ಅಡುಗೆ ಮನೆಯಿಂದ ರೀ............. ಎನ್ನುವ ಸೋಮಿ ಧ್ವನಿ ಕೇಳಿಸಿತು ಏನಾಯ್ತೇ ಗ್ಯಾಸ್ ಮುಗಿದು ಹೋಯ್ತಾ ಅಂತ ಕೇಳಿದ ಸದಾಶಿವನಿಗೆ ಅದೇಧ್ಯಾನ ಅಂದ್ರಂತೆ. ನನ್ನ ಕೂಗು ಅಂದ್ರೆ ಗ್ಯಾಸು ಖಾಲಿ ಅಂತಾನೇನ್ರೀ ಬನ್ರೀ ಇಲ್ಲಿ ಅಂದಳು. ಬೇರೆದಾರಿ ಇಲ್ಲ. ಎದ್ದು ಹೋದ. ಏನೇ ಅಂದ ಪಕ್ಕದ ಮನೆ ಗಣೇಶರಾಯರ ಮಗನಿಗೆ ಮದುವೆ ನಿಷ್ಕರ್ಷೆ ಆಗಿತ್ತಲ್ಲ. ಅದು ಕ್ಯಾನ್ಸಲ್ ಆಗೋ ಹಾಗೆ ಕಾಣ್ತಿದೆಯಂತೆ ರೀ ಯಾಕಂತೆ ಗಣೇಶರಾಯರು ಬೀಗರಿಗೆ ನಮ್ಮ ಮನೆಗೆ ಹೊಸ ಗ್ಯಾಸ್‌ಕನಕ್ಷನ್ ಕೊಡಿಸಿ, ಒಂದು ಸ್ಪೇರ್ ಸಿಲಿಂಡರ್ ಕೊಡಿಸಿ ಅಂತ ಡಿಮ್ಯಾಂಡ್ ಇಟ್ಟಿದಾರಂತೆ.

ಟ್ರಂಪ್‌ಗೆ ಪೋನ್ ಮಾಡಿ ಅನ್ನಬೇಕಿತ್ತು, ಏನು ಟ್ರಂಪ್ ಬಂದು ಗ್ಯಾಸ್ ಕೊಡಿಸ್ತಾರಾ ಇಲ್ಲಾರೀ ಹೋರ್ಮುಜ್ ತಂಟೆಗೆ ಟ್ರಂಪ್ ಹೋಗದಿದ್ರೆ ನಾವಿಲ್ಲಿ ಟ್ರಂಪ್ ಊದಬಹುದು ಏನೇ ಅದು ಟ್ರಂಪ್ ಊದಬಹುದು ಅಂದ್ರೆ ರೀ ಈಗೊಂದು ತಿಂಗಳಿನಿಂದ ಟ್ರಂಪ್ ಒಂಥರ ಹುಚ್ಚುಚ್ಚಾಗಿ ಆಡ್ತಿದಾರಲ್ಲಾ, ಟ್ರಂಪ್ ಆಂದ್ರೆ ಏನು ಅಂತ ಪದಕೋಶ ನೋಡಿದೆ ಏನಿತ್ತು ಅದರಲ್ಲಿ ಟ್ರಂಪ್ ಅಂದ್ರೆ ಕಹಳೆ ಅಂತ. ಅದಕ್ಕೇ ಅವರ ಕಹಳೆ ಊದೋತರಹ ಹೇಳಿದ್ದನ್ನೇ ಹೇಳ್ತನೇ ಇದಾರೆ ನೋಡ್ರು ಟ್ರಂಪ್ ಏನು ಹೇಳ್ತಿದಾರೆ ಅನ್ನೋದು ಮುಖ್ಯ ಅಲ್ಲ. ಹೋರ್ಮುಜ್ ತಂಟೆಗೆ ಹೋಗೋದನ್ನು ಬಿಟ್ರಾ ಇಲ್ವಾ ಅನ್ನೋದು ಮುಖ್ಯ ಇದೊಳ್ಳೆ ತಮಾಷೆ ಕಣ್ರೀ. ಅಮೆರಿಕಾ, ಇಸ್ರೇಲ್, ಇರಾನ್ ಹೀಗೆ ಕಿತ್ತಾಡ್ತಾರೆ ಅಂತಾನೇ ನಮ್ಮ ಹಿರಿಯರು ಮೊದಲೇಗಾದೆ ಮಾಡಿಟ್ಟಿದಾರೆ.

ಅದೇನು ಗಾದೆನೇ ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯ್ತು ಅಂತ ಈಗ ಅಮೆರಿಕಾ ಇಸ್ರೇಲ್ ಇರಾನ್ ಜಗಳದಲ್ಲಿ ಗ್ಯಾಸು ತಗುಲಿ ಹಾಕ್ಕೊಂಡ್ತು ಅಂತ ಬದಲಾಯಿಸಬಹುದು.

ಅದಿರ್ಲಿ, ಈ ಟ್ರಂಪ್ ಗಾಳಿ ಬರೀ ಅಮೆರಿಕಾದಲ್ಲಿ ಅಲ್ಲ ಇಲ್ಲಿಯೂ ಬೀಸ್ತಿರೋ ಹಾಗಿದೆ ಕಣ್ರೀ ಅದೇನೇ ಹೊಸಾ ವಿಷಯ ಎದುರು ಮನೆ ಸತೀಶ ಇದಾರಲ್ಲ, ಅವರು ಬಾಡಿಗೆಗೆ ಇರೋರ್ನ ಮನೆ ಖಾಲಿ ಮಾಡಿ ಒಂದು ತಿಂಗಳು ಟೈಮ್ ಕೊಡ್ತೀನಿ ಅಂದ್ರಂತೆ. ಒಂದು ತಿಂಗಳಾದರೂ ಖಾಲಿ ಮಾಡಲಿಲ್ಲ. ಆಗ ಸತೀಶ ಬಂದು ನೋಡಿ ನಾನೇನು ಮಾಡ್ತೀನೋ ನನಗೇ ಗೊತ್ತಿಲ್ಲ. ಬೇಗ ಖಾಲಿ ಮಾಡಿ, ನಿಮಗೆ ಇನ್ನೊಂದು ವಾರ ಟೈಮ್ ಕೊಡ್ತೀನಿ ಅಂದ್ರಂತೆ. ಆದರೂ ಬಾಡಿಗೆಯವರು ಖಾಲಿ ಮಾಡಲಿಲ್ಲ. ಆಗ ಸತೀಶ ಮತ್ತೆ ಬಂದು ನೀವು ನನ್ನ ಮಾತಿಗೆ ಬೆಲೆ ಕೊಡ್ತಿಲ್ಲ. ಇದಕ್ಕೆ ಸರಿಯಾದ ಬೆಲೆ ತೆರಬೇಕಾಗುತ್ತೆ. ನಾಳೆ ಬೆಳಗ್ಗೆ ಎಂಟು ಗಂಟೆಗೆ ನೋಡಿ ಏನಾಗುತ್ತೆ ಅಂದು ಹೋದರಂತೆ. ಬಾಡಿಗೆಯವರು ಈಯಪ್ಪನ ಕೈಲಿ ಏನೂ ಕಿಸಿಯೋಕೆ ಆಗಲ್ಲ. ಏಕೆಂದ್ರೆ ಇವನು ಹೆದರುಪುಕಲ. ಇವನ ಭಾಮೈದ ಒಬ್ಬ ಇದಾನೆ ಥೇಟ್ ನೇತನ್ಯಾಹು ತರಹಾನೇ. ಅವನು ಜೊತೆಗಿದ್ರೆ ಮಾತ್ರ ಸತೀಶನ ಬಾಲ ಬೆಳೆಯುತ್ತೆ ಅಂದ್ಕೊಂಡ್ರು.

ಮಾರನೇ ದಿನ ಬೆಳಗ್ಗೆ ಎಂಟು ಗಂಟೆಗೆ ಏನೂ ಆಗಲಿಲ್ಲ. ಮತ್ತೆ ಸತೀಶ ಬಂದು ಹೋಗಲಿ ಇನ್ನೂ ಒಂದು ವಾರ ಟೈಮ್ ಕೊಡ್ತೀನಿ ಅಂದು ಹೋದ್ರಂತೆ. ಆಗ ಬಾಡಿಗೆಯವರು ಸತೀಶನನ್ನು ಕರೆದು ಸರ್. ನೀವು ನಿಮ್ಮ ಹೆಸರನ್ನು ಟ್ರಂಪ್ ಅಂತ ಬದಲಾಯಿಸಿಕೊಳ್ಳಿ ಅಂದ್ರಂತೆ. ಯಾಕ್ರೀ ಅಂತ ಕೇಳಿದ್ದಕ್ಕೆ ಈಗೊಂದು ತಿಂಗಳಿನಿಂದ ಆ

ಟ್ರಂಪ್ ತರಹ ನಮ್ಮನೆ ಮುಂದೆ ಬಂದು ಕಹಳೆ ಊದ್ತನೇ ಇದೀರ ಅಂದ್ನಂತೆ. ಅಲ್ಲಿಗೆ ಈ ಬಂಧನಾ, ಮುರಿದು ಹೋದ ಬಂಧನಾ ಆಯಿತು ಸೋಮಿ "ಇನ್ನೇನು ಗ್ಯಾಸ್ ಮುಗೀತಾ ಬಂದಿದೆ. ಗ್ಯಾಸ್ ಅಂಗಡಿಗೆ ಹೋಗಿ ಕೇಳ್ಕೊಂಡು ಬನ್ನಿ" ಅಂದಳು.

"ಕೇಳೋದೇನೇ, ಮೊಬೈಲಲ್ಲಿ ಬುಕ್ ಮಾಡೋದು. ಆದ್ರೆ ಆಯಿತ್ವಾರ ಇಲ್ದಿದ್ರೆ ಸೊಮ್ವಾರ" ಅಂದ ಸೋಮಿ "ಆಮೇಲೆ ನಿಮಗೆ ಇಡ್ಲಿ, ದೋಸೆ, ಪೊಂಗಲ್ ಬದಲಿಗೆ ತಟ್ಟೇಲಿ ಕೋಸಂಬರಿ, ಹಸಿ ತರಕಾರಿ ಇರುತ್ತೆ ಆಮೇಲೆ ನಿಜವಾದ ಅರ್ಥದಲ್ಲಿ ನಾವೆಲ್ಲಾ ಸಸ್ಯಾಹಾರಿಗಳು" ಅಂದಳು. ಸೋಮು ಹೇಗಾದರೂ ಆಗಲಿ ಅಂತ ಗ್ಯಾಸ್ ಅಂಗಡಿಗೆ ಹೋದ. ಅಲ್ಲಿ ಉದ್ದಕ್ಯೂ ಇತ್ತು. ಏನಿಲ್ಲಾ ಅಂದ್ರು ಒಂದು ಗಂಟೆಯಾದರೂ ಆಗುತ್ತೆ ಅಂತ ಕ್ರಾಸ್‌ಕನಕ್ಷನ್ ತಗೊಳೋಕೆ ಹೋದಾಗ ಒಬ್ಬ ಅನಾಮತ್ತಾಗಿ ಸೋಮುನ ಎಳೆದು "ಕಮ್‌ಇನ್‌ದಕ್ಯೂ" ಅಂದ. ಅದಕ್ಕೆ ಸೋಮು "ನಾನು ಗ್ಯಾಸ್ ಬುಕ್ ಮಾಡಿದೀನಿ, ಅದುಯಾವಾಗ ಬರುತ್ತೆ ಅಂತ ಕೇಳೊಕೆ ಬಂದಿದೀನಿ"ಅಂದ. ಅವನು ಸಿಟ್ಟಿನಿಂದ ಸೋಮು ಮುಖ ನೊಡಿ "ನಾವೇನು ಕಡ್ಲೆಪುರಿ ತಿನ್ನೋಕೆ ಬಂದಿದೀವಾ" ಅಂದು ಹೋಗ್ರೀ ಹಿಂದಕ್ಕೆ ಅನ್ನೋ ಹಾಗೆ ದುರುಗುಟ್ಟಿ ನೋಡಿದ.

ಅಷ್ಟರಲ್ಲಿ" ಸರ್, ಸೋಮು ಸರ್" ಅನ್ನೋಧ್ವನಿ ಕೇಳಿಸಿತು. ಸೋಮು ಆ ಕಡೆ ನೋಡಿದರೆ ಮಾಲಿನಿ ನಿಂತಿದ್ದಳು."ಏನು ಮೇಡಂ ನೀವಿಲ್ಲಿ" ಅಂತ ಕೇಳಿದ. ಅದಕ್ಕೆ ಅವಳು "ಎಲ್ಲಿ ಹೋದ್ರೂ ಟೈಮೇ ಹೋಗ್ತಿರಲಿಲ್ಲ ಅದಿಕ್ಕೆ ಇಲ್ಲಿ ಬಂದು ಕ್ಯೂನಲ್ಲಿ ನಿಂತೆ" ಅಂದು ಸೋಮು ತಲೆ ಮೇಲೆ ಒಂದು ಮಟ್ಟಿ "ನಮ್ಮನೇಲಿ ಗ್ಯಾಸ್ ಮುಗಿದು ಹೋಗಿದೆ ಅದಕ್ಕೆ ಬಂದೆ" ಅಂದಳು.

"ಸ್ಪೇರ್‌ಇಟ್ಕೊಂಡಿಲ್ವ ಮೇಡಂ" ಅಂತ ಸೋಮು ಕೇಳಿದ.

"ಇಲ್ಲ ಸರ್. ನಮ್ಮನ್ಲಿ ಯಾವುದಕ್ಕೂ ಸ್ಪೇರ್ ಇಲ್ಲ. ಈಗ ಅನಿಸ್ತಾ ಇದೆ ಒಂದು ಕೆಟ್ಟುಹೊದ್ರೆ ಇನ್ನೊಂದು ಇರ್ಲಿ ಅಂತ ಸ್ಪೇರ್ ಇಟ್ಕೊಬೇಕು ಅನಿಸ್ತಿದೆ" ಅಂದಳು. ಅಷ್ಟರಲ್ಲಿ ಯಾರೋ ಒಬ್ಬ "ಸರ್‌ಡೋರ್ ಲಾಕ್ ಅಂತ ಎರಡು ಗ್ಯಾಸ್ ಸಿಲಿಂಡರ್ ನನ್ನತ್ರನೇ ಉಳ್ಕೊಂಡಿದೆ. ನೀವು ಸ್ವಲ್ಪ ಜಾಸ್ತಿ ಕೊಟ್ಟರೆ ನಿಮ್ಮನೆಗೇ ತಂದುಕೊಡ್ತೀನಿ" ಅಂದ.

"ನೀನು ಯಾರಪ್ಪ" ಅಂತ ಕೇಳಿದ ಸೋಮು "ಗ್ಯಾಸ್ ಸಿಗ್ತಾ ಇರುವಾಗ ಯಾರು ಏನು ಎತ್ತ ಅಂತ ಕೇಳಬಾರದು. ಸುಮ್ನೆತಗೋತಾ ಇರಿ" ಅನ್ನೋ ಹೊತ್ತಿಗೆ ಮಾಲಿನಿ "ನನಗೊಂದು ಗ್ಯಾಸ್ ಸಿಲಿಂಡರ್ ಕೊಡಪ್ಪಾ ಎಷ್ಟು ಕೊಡ್ಬೇಕು ಹೇಳು" ಅಂದಳು. ಇವಳ ಮುಂದೆ ನಾನು ಸೋಲಬಾರದು ಅಂತ ಸೋಮು "ನನಗೂ ಒಂದು ಇರಲಿ, ಸಿಲಿಂಡರ್ ಮನೇಲಿ ಕೊಟ್ಟುದುಡ್ಡು ಇಸ್ಕೊಂಡು ಹೋಗು" ಅಂದ. ಅದಕ್ಕೆ ಸಿಲಿಂಡರಿನವನು "ಅದೆಲ್ಲಾ ಮೈನ್ ರೋಡಲ್ಲಿ ಹೋಗುವಾಗ, ಕ್ರಾಸ್ ರೋಡಲ್ಲಿ ಹೋಗುವಾಗ ಮೊದಲು ದುಡ್ಡು ಆಮೇಲೆ ಗ್ಯಾಸು" ಅಂದ. ಸೋಮು ದುಡ್ಡು ತಂದಿರಲಿಲ್ಲ. ಮಾಲಿನಿ ಎಟಿಎಂನಲ್ಲಿ ದುಡ್ಡು ಡ್ರಾ ಮಾಡಿ ಎರಡು ಸಿಲಿಂಡರಿನದೂ ದುಡ್ಡು ಕೊಟ್ಟಳು. ಸೋಮು ಇದೊಂದು ಅವಕಾಶ ಅಂತ ಮಾಲಿನಿ ಕೈ ಕುಲುಕಿ "ಥ್ಯಾಂಕ್ಯೂ ಮಾಲಿನಿ" ಅಂದ. ಅವಳು ನಗುತ್ತಾ" ಸ್ವಾಮಿ ನಾನು ಕೊಟ್ಟಿರೋದು ಸಾಲ, ವಾಪಸ್ ಕೊಡಬೇಕು" ಅಂದಳು. ಇನ್ನೊಂದು ಛಾನ್ಸು ಅಂತ ಅವಳ ಭುಜತಬ್ಬಿ "ಅಫ್‌ಕೋರ್ಸ್ ವಿಥ್ ಇಂಟರೆಸ್ಟ್" ಅಂದ.

ಸಿಲಿಂಡರಿನವನು ಇಬ್ಬರ ಮನೆ ವಿಳಾಸನೂ ತಗೊಂಡ. "ಇನ್ನೊಂದು ಗಂಟೇಲಿ

ತಂದುಕೊಡ್ತೀನಿ ನೀವು ಹೋಗಿ. ಆದರೆ ಈ ವಿಚಾರಯಾರಿಗೂ ಹೇಳಬೇಡಿ. ಆಮೇಲೆ ಎಲ್ಲರೂ ನನಗೊಂದು ನಮ್ಮಪ್ಪನಿಗೊಂದು ಅಂತ ನನ್ನ ಮುಂದೆನೇಕ್ಯೂ ನಿಂತ್ಕೊತಾರೆ" ಅಂದ. ಸೋಮು ಮಾಲಿನಿ ಕೈ ಕುಲುಕಿ ಥ್ಯಾಂಕ್ಸ್ "ನಿಮ್ಮಿಂದ ಇನ್ನೊಂದು ತಿಂಗಳು ನಮ್ಮನೆ ಅಡುಗೆ ಮನೆ ಉರಿಯುತ್ತಿರುತ್ತೆ" ಅಂದ. ಮಾಲಿನಿ ನಕ್ಕು ಹೊರಟಳು.

ಆದರೆ ಅವತ್ತೆಲ್ಲ ಕಳೆದರೂ ಸೋಮು ಮನೆಗೂ ಮಾಲಿನಿ ಮನೆಗೂ ಗ್ಯಾಸ್ ಬರಲಿಲ್ಲ. ಅವರಿಬ್ಬರೂ ಒಟ್ಟಿಗೇ ಮಾಡಿದ ತಪ್ಪು ಅಂದರೆ ಅವನ ಫೋನ್ ನಂಬರಾಗಲೀ, ವಿಳಾಸವನ್ನಾಗಲೀ ತಗೊಳ್ದೇ ಇದ್ದುದು. ಮಾಲಿನಿ ಸೋಮು ಇಬ್ಬರ ಮೊಬೈಲು ಅರ್ಧರ್ಧ ಗಂಟೆಗೂ ಹೊಡ್ಕೋತಿತ್ತು.

ಸೋಮಿ "ನೀವು ಮಾಡೋದೆಲ್ಲಾ ಇಂಥಾ ಕೆಲಸಾನೇ"ಅಂತ ಬೈದಳು.

"ನಾನೇನೇ ಮಾಡ್ದೆ ಇದಕ್ಕೆಲ್ಲಾ ಟ್ರಂಪೇ ಕಾರಣ" ಅಂದ.

"ಏನು ಟ್ರಂಪು ಬಂದು ನಿಮಗೆ ಅವನಿಗೆ ದುಡ್ಡುಕೊಡಿ ಅಂತ ಹೇಳಿದ್ರಾ" ಅಂತ ರೇಗಿದಳು.

"ಅಲ್ಲಾ ಕಣೆ ಹೊರ್ಮೂಜಿನಿಂದ ನಮಗೆ ಆರಾಮವಾಗಿ ಗ್ಯಾಸ್ ತುಂಬಿದ ಹಡಗು ಬರ್ತಿತ್ತು. ನೇತನ್ಯಾಹು ಮಾತು ಕೇಳ್ಕೊಂಡು ಇರಾನ್ ಮೇಲೆ ಕಾಲು ಕೆರ್ಕೊಂಡು ಯುದ್ಧಕ್ಕೆ ಹೋದ. ಇಲ್ಲಿ ನಾವು ತಗುಲಿಹಾಕ್ಕೊಂಡ್ವು."ಗ್ಯಾಸ್ ಆಫೀಸಿನಲ್ಲಿ ಹೋಗಿ ಕೇಳ್ಕೊಂಡು ಬರ್ತೀನಿ"ಅಂದ ಹೋದ.

ಆದರೆ ಅಲ್ಲಿ ಏನೂಂತ ವಿಚಾರಿಸೋದು, ಅವನ ಹೆಸರಾಗಲೀ, ವಿಳಾಸವಾಗಲೀ, ಫೋಟೋ ಆಗಲಿ ಏನೂ ತಗೊಂಡಿರಲಿಲ್ಲ. ಸರ್ ಅವನು ಹೀಗಿದ್ದ ಅಂತ ಸೋಮು ಹೇಳಿದ್ರೆ "ಅಯ್ಯೋ ಹೋಗ್ರಿ ಟ್ರಂಪ್ ಗಲಾಟೆ ಷುರುಮಾಡಿದ ಮೇಲೆ ಮೋಸ ಹೋಗಿರೋರ ಪೈಕಿ ನೀವು ಎಷ್ಟನೆಯವರೋ. ನೀವು ಅಂಗಡೀಲಿ ಗ್ಯಾಸ್ ಬುಕ್ ಮಾಡೋದು ಬಿಟ್ಟು ಅವನ್ಯಾವೋನೋ ಅಬ್ಬೇಪಾರಿ ಕೈಲಿ ಯಾಕ್ರೀ ದುಡ್ಡುಕೊಟ್ರೀ" ಅಂದು ಅಂಗಡಿಯವನು ಸೋಮುನೇ ದೂರಿದ.

ಸೋಮು ಸಪ್ಪೆ ಮುಖ ಹಾಕಿಕೊಂಡು ಮನೆಗೆ ಬಂದಾಗ ಸೋಮಿ ಏನಾಗಿರಬಹುದು ಎನ್ನುವುದನ್ನು ಊಹಿಸಿ "ನಿಮ್ಮುಖ ನೋಡ್ಕೊಳಿ. ಬನ್ನಿ ನನಗೆ ಮೋಸ ಮಾಡಿ ಅಂತ ಜನರನ್ನು ಕರೆಯೋ ಹಾಗಿದೆ. ಎಷ್ಟು ಮೋಸ ಹೋದ್ರೂ ನಿಮಗೆ ಬುದ್ಧಿ ಬರಲ್ಲ" ಅಂದಳು.

ಸೋಮು ಬೇಜಾರಿನಿಂದ "ಲೇ ನನಗ್ಯಾಕೇ ಬೈತೀಯ, ಬೈಯೋದಾದ್ರೆ ಟ್ರಂಪಿಗೆ ಬೈಯಿ. ಸಾಧ್ಯವಾದರೆ ಯುದ್ದ ನಿಲ್ಸು ಅಂತ ಹೇಳು. ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯ್ತು ಅನ್ನೋ ಹಾಗೆ ಇರಾನ್, ಅಮೆರಿಕ, ಇಸ್ರೇಲ್ ನಡುವಿನ ಯುದ್ಧದಲ್ಲಿ ಇಂಡಿಯಾ ಬಡವಾಯ್ತು, ಅಲ್ಲಲ್ಲ ಇಂಡಿಯಾದಲ್ಲಿರೋ ನನ್ನಂಥವರು ಬಡವಾದ್ರು ಅನ್ನೋ ಹಾಗಾಯ್ತು. ಹೋಗ್ಲಿ ಇರೋ ಗ್ಯಾಸಿಂದನೇ ಒಂದ್ಲೋಟ ಕಾಫಿ ಕಾಯ್ಸಿಕೊಡು ಈ ಯುದ್ಧದ ಸಮಾಚಾರ ಏನಾಯ್ತೋ ನೋಡೋಣ" ಅಂತ ಸೋಮು ರಿಮೋಟ್ ಹಿಡಿದು ಗುಂಡಿ ಅದುಮಿದ. ■

# ಚಿವುಟಿ, ತೂಗುವ ಶಾಂತಿದೂತ

ಜಿ.ವಿ. ಅರುಣ

ಜೀವನದಲ್ಲಿ ಮುಂದೆ ಬರಲು ಮಗನಿಗೆ ತಾಯಿ ಅನೇಕ ವಿಚಾರಗಳನ್ನು ಕಲಿಸುತ್ತಿದ್ದಳು. "ಪ್ರಪಂಚದಲ್ಲಿ ನೀನು ಯಾವತ್ತೂ ಮುಂಚೂಣಿಯಲ್ಲಿರಬೇಕು. ದುಡ್ಡೇ ದೊಡ್ಡಪ್ಪ. ನೀನು ದೊಡ್ಡಣ್ಣನಾಗಬೇಕಾದರೆ, ಎಣಿಸಲಾಗದಷ್ಟು ದುಡ್ಡು ನಿನ್ನ ಹತ್ತಿರ ಇರಬೇಕು, ಅದು ನಿನ್ನತ್ತ ನಿರಂತರ ಹರಿಯುತ್ತಿರಬೇಕು. ಆ ಗುರಿ ಸಾಧಿಸಲು ಇತರರ ಸಹಾಯ ಪಡೆಯಬೇಕು. ಅಕಸ್ಮಾತ್ ಅದು ತಪ್ಪುದಾರಿಯಾಗಿದ್ದರೆ, ಕೆಟ್ಟ ಹೆಸರು ಅವರದ್ದು –ದುಡ್ಡು ನಿನ್ನದು ಹೀಗೆ ನಿಷ್ಪಕ್ಷಪಾತನಾಗಿ ನೋಡಿಕೊಳ್ಳಬೇಕು. ಯಾರೊಡನೆ ಮಾತನಾಡಿದರೂ ನಿನಗೆ ಅದರಿಂದ ಏನು ಲಾಭ; ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಹೇಗೆ ಲಾಭ ಮಾಡಿಕೊಳ್ಳಬಹುದು ಎಂಬುದನ್ನು ಮನವಿಟ್ಟು ಗಮನಿಸಬೇಕು. ಇತರರ ಒಳ್ಳೆಯತನ, ಕೆಟ್ಟತನಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಡ. ಅಂಥವರನ್ನು ಯಾವಾಗ ಬೇಕಾದರೂ ನಿನ್ನ ಮಾತನ್ನು ಅವರು ಕೇಳುವಂತೆ ಇಟ್ಟುಕೊಂಡಿರು. ಕೆಟ್ಟವರನ್ನು ಬೆಳೆಯಲು ಬಿಡಬೇಡ. ಶಾಖಾಯ ಲವಣಾಯ ಒಂದಷ್ಟು ದಕ್ಷಿಣೆ ಅವರಿಗೆ ಕೊಡುತ್ತಿರು. ಆಗ ಅವರು 'ಇವನಷ್ಟು ಒಳ್ಳೆಯ, ಶಾಂತಿಪ್ರಿಯ ಮನುಷ್ಯ ಈ ಪ್ರಪಂಚದಲ್ಲೇ ಇಲ್ಲ' ಎಂದು ಹೊಗಳುತ್ತಿರುತ್ತಾರೆ..." ಹೀಗೆ ಶಿಕ್ಷಣ ಸಾಗಿತ್ತು. ಇವನ್ನೆಲ್ಲ ಕಲಿಯಲು ಆ ಹುಡುಗನಿಗೆ ಇನ್ನಿಲ್ಲದ ಆಸಕ್ತಿ.

"ನಾನು ಒಳ್ಳೆಯವನು ಅನ್ನಿಸಿಕೊಳ್ಳಬೇಕಾದರೆ ದುಡ್ಡನ್ನು ಖರ್ಚುಮಾಡಬೇಕೇ? ಹಾಗೆ ಖರ್ಚುಮಾಡದೆ ಇನ್ನೇನು ಮಾಡಬಹುದು?" ಆ ಹುಡುಗ ಕೇಳಿದ. ಮಗನ ಆಲೋಚನೆ ಸರಿಯಾದ ದಾರಿಯಲ್ಲಿ ಸಾಗುತ್ತಿರುವುದನ್ನು ನೋಡಿ ತಾಯಿಗೆ ಮಹದಾನಂದವಾಯಿತು.

"ಅಲ್ಲಿ ನೋಡು ಆ ಪ್ರಾಮ್‌ನಲ್ಲಿ ಮಗುವನ್ನು ಮಲಗಿಸಿದ್ದಾರೆ. ಅದರ ಅಪ್ಪ, ಅಮ್ಮ ಪಕ್ಕದಲ್ಲಿರುವ ಗೂಡಂಗಡಿಯಲ್ಲಿ ಐಸ್ ಕ್ರೀಮ್ ಕೊಳ್ಳುತ್ತಿದ್ದಾರೆ. ನೀನು ಸಾವಧಾನವಾಗಿ ಹೋಗಿ, ಯಾವುದೇ ಅನುಕಂಪವಿಲ್ಲದೆ, ನಿರ್ದಯತೆಯಿಂದ ಆ ಮಗುವನ್ನು ಚೆನ್ನಾಗಿ ಅಂದರೆ ಕಟುವಾಗಿ ಚಿವುಟು. ಅದು ಜೋರಾಗಿ ಅಳಲು ಪ್ರಾರಂಭಿಸುತ್ತದೆ. ನೀನು 'ಅಳಬೇಡ ಮರಿ, ಅಮ್ಮ ಇಲ್ಲೇ ಇದ್ದಾರೆ.... ಬಂದುಬಿಡುತ್ತಾರೆ...' ಎಂದು ಜೋರಾಗಿ ಎಲ್ಲರಿಗೂ ಕೇಳುವಂತೆ ಹೇಳಿ, ಅದನ್ನು ಸಮಾಧಾನ ಪಡಿಸು. ನಿನ್ನ ಮುಖದಲ್ಲಿ ಮಂದಹಾಸವಿರಲಿ. ಆಗ ನೋಡು ಏನಾಗುತ್ತದೆ" ಎಂದು ಸ್ವಕೌಶಲಾಭಿವೃದ್ಧಿಯ ತರಬೇತಿಗೆ ಮಗನನ್ನು ಕಳುಹಿಸಿದಳು.

ಇವನು ಮೆಲ್ಲಗೆ ಹೋಗಿ, ತಾಯಿಯ ಮಾರ್ಗದರ್ಶನವನ್ನು ಚಚೂತಪ್ಪದೆ ಪಾಲಿಸಿದ. ಅದರ ಪರಿಣಾಮವಾಗಿ ಕನಸು ಕಾಣುತ್ತಾ ಮಲಗಿದ್ದ ಆ ಮಂದಸ್ಮಿತ ಮಗು ಕಿಟಾರನೆ ಕಿರುಚಿತು. ತಮ್ಮ ಅಳುತ್ತಿರುವ ಮಗುವನ್ನು ಹುಡುಗನೊಬ್ಬ ಸಮಾಧಾನ ಪಡಿಸುತ್ತಿರುವುದನ್ನು ಆ ಮುಗ್ಧಮಗುವಿನ ತಂದೆತಾಯಿಯರು ನೋಡಿದರು. ಆತಂಕದಲ್ಲೂ ಅವರಿಗೆ ಬಹಳ ಸಂತೋಷವಾಯಿತು. "ಅಳುವ ಮಕ್ಕಳನ್ನು ನೋಡಿದರೆ ನಿನಗೆ ಎಷ್ಟು ಕಾಳಜಿಯಪ್ಪ ! ನೀನು ಬೆಳೆದು ದೊಡ್ಡ ಮನುಷ್ಯನಾಗು..." ಎಂದು ಹರಸಿ, ಅವನಿಗೆ ಎರಡು ಐಸ್ ಕ್ರೀಮ್ ಕೊಡಿಸಿದರು.

"ವಾವ್! ಒಂದು ಮಲಗಿದ್ದ ಮಗುವನ್ನು ಚಿವುಟಿದರೆ ಎರಡು ಐಸ್ ಕ್ರೀಮ್! ಹಾಗಿದ್ದರೆ ಒಂದು ರಸ್ತೆಯ ಮಕ್ಕಳನ್ನು ಚಿವುಟಿದರೆ!, ಒಂದು ಊರಿನ ಮಕ್ಕಳನ್ನು ಅವನ ಲೆಕ್ಕಾಚಾರ ತಾಯಿ ತೋರಿಸಿಕೊಟ್ಟಿದ್ದ ಸರಿಯಾದ ದಾರಿಯಲ್ಲಿ ಮುಂದುವರೆಯಿತು.

ಹುಡುಗ ಇದೇ ರೀತಿ ಬೆಳೆದು ದೊಡ್ಡವನಾದ. ತನಗೆ ಗುರುತು ಪರಿಚಯವಿಲ್ಲದ ವ್ಯಕ್ತಿಗಳಿಗೆ 'ಪ್ರಪಂಚದಲ್ಲಿ ಶಾಂತಿ ನೆಲೆಸಲು ಇವರು ಸಹಾಯ ಮಾಡಿದ್ದಾರೆ' ಎಂದು ಹಾಡಿಹೊಗಳಿ ಸನ್ಮಾನ ಮಾಡುವುದನ್ನು ನೋಡಿದ. 'ಮುಂದಿನ ಬಾರಿ ಇದಕ್ಕೆ ನನ್ನನ್ನು ಆಯ್ಕೆಮಾಡಿ' ಎಂದು ಯಾರ ಯಾರ ಮೂಲಕವೋ ಹೇಳಿಸಿದ. ತನ್ನ ಸಾಧನೆಗಳನ್ನು– ಅಳುತ್ತಿರುವ ಮಕ್ಕಳನ್ನು ಸಮಾಧಾನ ಮಾಡಿದ ಸಾಧನೆಗಳನ್ನು, ಬಣ್ಣಿಸಿದ. ಕೊನೆಗೂ ಅವರು ಅವನಿಗೆ ಪೇಟ ಹಾಕಿ, ಶಾಲುಹೊದಿಸಿ ಸನ್ಮಾನ ಮಾಡಲಿಲ್ಲ.

ಈ ಬಗ್ಗೆ ಕುಳಿತು ಯೋಚಿಸಿದ. ಇದಕ್ಕೆ ತಕ್ಕ ಕಾರ್ಯಯೋಜನೆಯನ್ನು ರೂಪಿಸಿದ. 'ಎಲ್ಲೋ ಗಲಾಟೆ ಆಗುವಂತೆ ಮಾಡಿ, ಅದು ಹೆಚ್ಚುವಂತೆ ನೋಡಿಕೊಂಡು, ಕೊನೆಗೆ ಅದರ ಉಪಶಮನಕ್ಕೆ ನಾನೇ ಕಾರಣ' ಎಂದು ಬಿಂಬಿಸಿಕೊಂಡರೆ ಹೇಗೆ? ತನ್ನ ಯೋಜನೆಗೆ ತಾನೇ ತಲೆದೂಗಿದ. ಆಲೋಚನೆ ಬಂದದ್ದೇ ತಡ ಅನುಷ್ಠಾನವನ್ನು ಪ್ರಾರಂಭಿಸಿಬಿಟ್ಟ. ಮೊದಲು ಮಗುವನ್ನು ಚಿವುಟಿದ ಆದರೆ 'ಹಾಗೆ ಚಿವುಟುವಾಗ ಯಾರು ನಿನ್ನನ್ನು ಗಮನಿಸುತ್ತಿರಬಾರದು' ಎಂದು ಅವನ ಅಮ್ಮ ಹೇಳಿಕೊಟ್ಟಿದ್ದ ಮುಂಜಾಗ್ರತೆಯ ಕ್ರಮವನ್ನು ಸಂಪೂರ್ಣವಾಗಿ ಮರೆತುಬಿಟ್ಟಿದ್ದ.


ಮಗು ಅಳಲು ಪ್ರಾರಂಭಿಸಿದ ತಕ್ಷಣ, ಸುತ್ತಮುತ್ತ ಇದ್ದವರು "ಯಾಕೆ ಸುಮ್ಮನೇ ಮಲಗಿದ್ದ ಮುಗ್ಧ ಮಗುವನ್ನು ಚಿವುಟಿದೆ?" ಎಂದು ಖಾರವಾಗಿ ವಿಚಾರಿಸಲು ಪ್ರಾರಂಭಿಸಿದರು. ಅವನು "ನಾನೇನು ಮಾಡಿಲ್ಲಾ... ನಾನೇನು ಮಾಡಿಲ್ಲಾ ..." ಎಂದು ಜೋರಾಗಿ ಕಿರುಚಿದ.

***

ಅವನ ಕಿರುಚಾಟ ಕೇಳಿ, ನನ್ನ ಗಡದ್ದಾದ ನಿದ್ದೆ ಹಾರಿಹೋಯಿತು. ದಡಬಡಿಸಿ ಎದ್ದು ಸುತ್ತಮುತ್ತ ನೋಡಿದೆ. ಕಣ್ಣುಗಳನ್ನು ಉಜ್ಜಿ ನೋಡಿದೆ. ಕನಸಲ್ಲಿ ಬಂದವರು ಮುಂದೆ ಎಲ್ಲಿರುತ್ತಾರೆ?!

"ಪಾಕಿಸ್ತಾನದಲ್ಲಿ ನಡೆದ ಕದನವಿರಾಮದ ಮಾತುಕತೆ ಮುರಿದುಬಿದ್ದಿದೆ..." ಟಿವಿಯಲ್ಲಿ ಯಾರೋ ಅರಚುತ್ತಿದ್ದರು.

ರಸ್ತೆಯಲ್ಲಿ ಯಾವುದೋ ಸಣ್ಣಮಗು ಇದ್ದಕ್ಕಿದ್ದಂತೆ ಜೋರಾಗಿ ಚೀರಿಕೊಂಡಿತು. ಅದನ್ನು ಚಿವುಟಿದವರೇ ಸಮಾಧಾನ ಮಾಡುತ್ತಿರಬಹುದು ಎಂದು ಕಿಟಕಿಯಿಂದ ಇಣುಕಿ ನೋಡಿದೆ. ■




ನಮಗೆ ಈಗ ಬೇಕಾದ್ದು–ಶಾಂತಿ–ಶಾಂತಿ–ಶಾಂತಿ.